RNI:KARKAN/2021/85750 KPL/L/RNP/02/24-26

# ಕರುನಾಡ ಕಂದ

Volume 4 ಸಂಪುಟ 4 | Issue 21 ಸಂಚಿಕೆ 21 | Date 16-09-2025 | Page 16 ಪುಟ 16 | ಬೆಲೆ: 20/-
FORTNIGHTLY ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ
ಮೋ.ನಂ: 9986366909

## ಕರುನಾಡ ಕಂದ ವರದಿಗೆ ಸಾಥ್ ನೀಡಿದ ಸ್ಥಳೀಯರು: ಸಿ.ಎಂ. ಕಚೇರಿಯಿಂದ ಮಾಧ್ಯಮ ಪ್ರಕಟಣೆ


11.09.2025
CM ACTS
ನಾಗರಿಕರ ಕುಂದುಕೊರತೆಗಳಿಗೆ ಪರಿಹಾರ ಒದಗಿಸಲು ಸದಾ ಬದ್ಧ
ಸಾರ್ವಜನಿಕರ ಅಹವಾಲು | ಸರ್ಕಾರದ ಸ್ಪಂದನೆ
ಮುಖ್ಯಮಂತ್ರಿಯವರ ಕಚೇರಿಯಿಂದ ಮಾಧ್ಯಮ ಪ್ರಕಟಣೆ

ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲ್ಲೂಕಿನ ಶ್ರೀ ನಗರೇಶ್ವರ ದೇವಸ್ಥಾನದ ಹಿಂದೆಯಿರುವ ಇಂದಿರಾ ಮಾರುಕಟ್ಟೆಯಲ್ಲಿ ಸಾರ್ವಜನಿಕರು ಅನಧಿಕೃತ ಚಟುವಟಿಕೆಗಳನ್ನು ಮಾಡುತ್ತಿರುವುದಾಗಿ 'ಎಕ್ಸ್' ಬಳಕೆದಾರರೊಬ್ಬರು ಮುಖ್ಯಮಂತ್ರಿಯವರ ಕಚೇರಿಯ ಕುಂದುಕೊರತೆ ವಿಭಾಗದ ಗಮನಕ್ಕೆ ತಂದಿರುತ್ತಾರೆ. ವಿಶೇಷ ಕರ್ತವ್ಯಾಧಿಕಾರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದರು.

ಸದರಿ ಮಾರುಕಟ್ಟೆಯನ್ನು ಸ್ವಚ್ಛಗೊಳಿಸಿದ್ದು, ರಾತ್ರಿ ಸಮಯದಲ್ಲಿ ಮಾರುಕಟ್ಟೆಯಲ್ಲಿ ಯಾವುದೇ ಅನೈತಿಕ ಚಟುವಟಿಕೆಗಳು ನಡೆಯದಂತೆ ಸೂಕ್ತ ಕ್ರಮವಹಿಸಲು ತಾಲ್ಲೂಕಿನ ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಜೊತೆಗೆ ಇನ್ನು ಮುಂದೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರವಹಿಸಲಾಗಿದೆ ಎಂದು ಗುರುಮಠಕಲ್ ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ನೀವು ಸ್ಥಳೀಯವಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ನಮ್ಮ ಗಮನಕ್ಕೆ ತರಲು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಗಳ @osd_cmkarnataka 'ಎಕ್ಸ್' ಖಾತೆಗೆ ಟ್ಯಾಗ್ ಮಾಡಿ.
ಕರ್ನಾಟಕದ ನವ ನಿರ್ಮಾಣಕ್ಕೆ ಗ್ಯಾರಂಟಿ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
DEPARTMENT OF INFORMATION AND PUBLIC RELATION



## "ನೀನಾಗುವವರೆಗೆ ಮಣ್ಣಹುಡಿ, ಕನ್ನಡವನೇ ನುಡಿ" : ನೀಲಕಂಠ ಮ. ಕಾಳಗಿ

## ನಾಮ ಫಲಕವಿಲ್ಲದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ : ಗೊಂದಲದಲ್ಲಿ ಸಾರ್ವಜನಿಕರು




## ಸಮಸ್ಯೆಗಳ ಕಂತೆಯಲ್ಲಿ ಸಂತೆ.. ಹೇಳತೀರದು ಸಂತೆಯ ವ್ಯಥೆ !?



## ಬೇಲಿಯೇ ಎದ್ದು ಹೊಲ ಮೇಯ್ದರೆ !?



## ವಿಕಲಚೇತನರಿಗೆ ಸಾಮಾಜಿಕ ನ್ಯಾಯ ಮರೀಚಿಕೆ: ಶ್ರೀ ಕೊಡಕ್ಕಲ್ ಶಿವಪ್ರಸಾದ್



## ಹಣ ಮಾಡುವ ಚಟಕ್ಕೆ ಬೀಳಬೇಡಿ!



## ಬಂಧನಕ್ಕೆ ಒಳಪಟ್ಟ ವ್ಯಕ್ತಿಗೆ ಇರುವಂತಹ ಹಕ್ಕುಗಳು



## ಕೃತಕ ಬುದ್ಧಿಮತ್ತೆ ಮಾರಕವೋ ಪ್ರೇರಕವೋ..?

ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16–09–2025 ಪುಟಗಳು:16

# ಮಹಾಶಕ್ತಿ ಪಾರ್ದಿ ಮೀನುಗಾರಿಕೆ ಸಹಕಾರ ಸಂಘ (ನಿ.) ಬಸವಕಲ್ಯಾಣ ಸಂಘದ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಬಸವಕಲ್ಯಾಣ ಮೀನುಗಾರಿಕೆ ಸಹಾಯ ನಿರ್ದೇಶಕರಿಗೆ ಪತ್ರದ ಮುಖಾಂತರ ಮನವಿ



**ಬೀದರ್/ ಬಸವಕಲ್ಯಾಣ :** ನಗರದ ಶ್ರೀ ಸಿಕಂದರ ಮಹಾಶಕ್ತಿ ಪಾರ್ದಿ ಮೀನುಗಾರರ ಸಹಕಾರ ಸಂಘ (ನಿ.) ಬಸವಕಲ್ಯಾಣದವರು ವಿನಾ ಕಾರಣ ನಮ್ಮ ಸಂಘದ ವಿರುದ್ಧ ಹಗೆ ಕಾರುತ್ತಿದ್ದಾರೆ. ಮೀಡಿಯಾ ಮುಂದೆ ಬಂದು ನಮ್ಮ ಸಂಘದ ಬಗ್ಗೆ ಇಲ್ಲ ಸಲ್ಲದ ಮಾತುಗಳನ್ನು ಹೇಳುತ್ತಿದ್ದಾರೆ, ಇದಲ್ಲದೆ ಶ್ರೀ ಗಣೇಶ ಮೀನುಗಾರಿಕೆ ಸಹಾಯಕ ನಿರ್ದೇಶಕರು ಇವರು ಬಸವಕಲ್ಯಾಣ ರವರಾದ ತಮ್ಮ ಮೇಲೆ ಸಹ ಮೀಡಿಯಾ ಮುಂದೆ ಬಂದು ಕಾನೂನು ಬಾಹಿರವಾಗಿ ಕೆಲಸ ಮಾಡುತ್ತಿದ್ದಿರಾ ಅಂತೆ ಸುಮ್ಮ ಸುಮ್ಮನೆ ಬಾಯಿಗೆ ಬಂದ ಹಾಗೆ ಹೇಳುತ್ತಿದ್ದಾರೆ.

ಮುಂದುವರೆದು ಮೀನುಗಾರಿಕೆ ಇಲಾಖೆಯಿಂದ ಮೊನ್ನೆ ನಡೆದ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಮಹಾಶಕ್ತಿ ಪಾರ್ದಿ ಮೀನುಗಾರರ ಸಹಕಾರ ಸಂಘ (ನಿ.) ಬಸವಕಲ್ಯಾಣ ಸಂಘದ ಅಧ್ಯಕ್ಷರಾದ ಶ್ರೀ ಸಿಕಂದರ ರವರು ಉದ್ದೇಶ ಪೂರ್ವಕವಾಗಿ ತಮಗೆ ಸಂಬಂಧಿಸಿದ ವ್ಯಕ್ತಿಯಿಂದ ರೂ. ತಲಾ 25,00,000/– (ಇಪ್ಪತ್ತೈದು ಲಕ್ಷ) ಬೆಟಬಾಲಕುಂದಾ ಹಾಗೂ ತ್ರಿಪೂರಾಂತ ಕೆರೆಗೆ ಈ ಟೆಂಡರನಲ್ಲಿ ಮೊತ್ತ ನಮೂದಿಸಿರುತ್ತಾರೆ. ಸದರಿ ಮೊತ್ತ ಸರಕಾರಕ್ಕೆ ಜಮಾ ಮಾಡದೆ ಉದ್ದೇಶಪೂರ್ವಕವಾಗಿ ಕೆರೆಯ ಹರಾಜು ರದ್ದು ಪಡಿಸಿರುತ್ತಾರೆ. ಇದಲ್ಲದೆ ಮೀನುಗಾರಿಕೆ ಇಲಾಖೆ ಬಸವಕಲ್ಯಾಣ ವತಿಯಿಂದ ಮುಂದೆ ಜರುಗಬೇಕಿರುವ ಟೆಂಡರ ಕಂ ಹರಾಜು ಪ್ರಕ್ರಿಯೆಯು ಇದೇ ರೀತಿಯಾಗಿ ರದ್ದು ಪಡಿಸುತ್ತಾರೆ. ಇದಲ್ಲದೆ ಕಾನೂನು ಬಾಹಿರವಾಗಿ ಬೈಲಾ ತಿದ್ದುಪಡಿ ಮಾಡಿಕೊಂಡಿರುತ್ತಾರೆ. ಮೀನುಗಾರಿಕೆ ಇಲಾಖೆಯಿಂದ ಸಾಧ್ಯತಾ ವರದಿ ಪಡೆಯಬೇಕಾಗುತ್ತದೆ. ಸಾಧ್ಯತಾ ವರದಿ ಪಡೆಯಬೇಕಾದರೆ ಕೌಶಲ್ಯ ಪರೀಕ್ಷೆ ಮಾಡಬೇಕಾಗುತ್ತದೆ ಇದ್ಯಾವುದೂ ಮಾಡದೇ ಅದು ಹೇಗೆ ಬೈಲಾ ತಿದ್ದುಪಡಿ ಮಾಡಿರುತ್ತಾರೆ ಎನ್ನುವುದರ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಬಸವಕಲ್ಯಾಣ ಮೀನುಗಾರಿಕೆ ಸಹಕಾರ ಸಂಘ ನಿಯಮಿತ (ರಿ.) ಸಂಘದವರು ಬಸವಕಲ್ಯಾಣದ ಮೀನುಗಾರಿಕೆ ಸಹಾಯಕ ನಿರ್ದೇಶಕರಿಗೆ ಪತ್ರದ ಮುಖಾಂತರ ಮನವಿ ಮಾಡಿಕೊಂಡಿದ್ದಾರೆ.

**ವರದಿ :ಶ್ರೀನಿವಾಸ ಬಿರಾದಾರ**

# ನಾಮ ಫಲಕವಿಲ್ಲದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ : ಗೊಂದಲದಲ್ಲಿ ಸಾರ್ವಜನಿಕರು






ಶ್ರೀ ಪುಲಿಂದಕುಮಾರ ಹುಬ್ಬಾರೆ
ಕಾಂಗ್ರೆಸ್ ಮುಖಂಡರು,
ಬಸವಕಲ್ಯಾಣ.

**ಬೀದರ್/ ಬಸವಕಲ್ಯಾಣ :**ನಗರದಲ್ಲಿ ಮುಂಚೆ ಇದ್ದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯನ್ನು ಸದ್ಯಕ್ಕೆ ಎಮ್.ಪಿ.ಎಸ್. ಶಾಲೆಯ ಭವ್ಯವಾದ ಕಟ್ಟಡದಲ್ಲಿ ಸ್ಥಳಾಂತರಿಸಲಾಗಿದೆ. ಸದರಿ ಕಟ್ಟಡದಲ್ಲಿ ಮುಂಚೇಯೇ ಪ್ರಾಥಮಿಕ ಶಿಕ್ಷಣ ಕೇಂದ್ರವಿದ್ದು, ಈಗ ಮತ್ತೇ ಅದೇ ಕಟ್ಟಡದಲ್ಲಿ ಸರಕಾರಿ ಪ್ರಥಮ ದರ್ಜೆ ಕಾಲೇಜು ಕೂಡಾ ಬಂದಿರುತ್ತದೆ, ಹೀಗಿರುವಾಗ ಜನರು ಯಾವ ಕಛೇರಿ ಎಲ್ಲಿದೆ ಎಂದು ಹುಡುಕಾಡುವ ಪರಿಸ್ಥಿತಿ ಉಂಟಾಗಿದೆ, ಕೆಲವು ಜನರು ಬಂದು ಹೊರಗಡೆ ಇರುವ ಝೆರಾಕ್ಸ್ ಅಂಗಡಿಗಳ ಮಾಲಿಕರಿಗೆ ಕೇಳುತ್ತಿದ್ದಾರೆ ಬಿ.ಇ.ಓ. ಆಫೀಸ್ ಎಲ್ಲಿದೆ ರೀ ಎಂದು, ಆದ ಕಾರಣ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಎಚ್ಚೆತ್ತುಕೊಂಡು ಮುಖ್ಯ ರಸ್ತೆಗೆ ಜನರಿಗೆ ತಿಳಿಯುವ ಹಾಗೆ ಕೂಡಲೇ ತಮ್ಮ ಕಛೇರಿಯ ನಾಮಫಲಕ ಅಳವಡಿಸಬೇಕೆಂದು ಕಾಂಗ್ರೇಸ್ ಮುಖಂಡರಾದ ಶ್ರೀ ಪುಲಿಂದಕುಮಾರ ಹುಬ್ಬಾರೆ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ವರದಿ : ಶ್ರೀನಿವಾಸ ಬಿರಾದಾರ**

## ವಿಶೇಷ ಸೂಚನೆ:

ಪತ್ರಿಕೆಯಲ್ಲಿ ಪ್ರಕಟವಾಗುವ ಕವನ, ಲೇಖನ, ವಿಮರ್ಶೆ, ಅಂಕಣಗಳಲ್ಲಿ ಇರುವ ವಿಷಯದಿಂದ ಯಾವುದೇ ಜಾತಿ, ಧರ್ಮ, ಭಾಷೆ, ಸಂಘ ಸಂಸ್ಥೆಗಳ, ಪಕ್ಷ ಅಥವಾ ವೈಯಕ್ತಿಕವಾಗಿ ಯಾರ ಭಾವನೆಗೂ ಧಕ್ಕೆ ತರುವ ಉದ್ದೇಶ ಪತ್ರಿಕೆಯದ್ದಾಗಿರುವುದಿಲ್ಲ ಹಾಗೂ ಅದರ ಪರಿಪೂರ್ಣ ಹೊಣೆ ಬರಹಗಾರರದ್ದು ಆಗಿರುತ್ತದೆ.

**– ಸಂಪಾದಕ**




ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲೂಕಿನ ತಹಶೀಲ್ದಾರ್ ಕಚೇರಿಯ ಕಂದಾಯ ನಿರೀಕ್ಷಕರಾದ ಶ್ರೀ ಎಮ್. ಎಮ್. ನೀರಲಗಿ ಅವರೊಂದಿಗೆ " ಕರುನಾಡ ಕಂದ ".

# ಅಂಬೇಡ್ಕರ್ ಗಜಾನನ ಯುವಕ ಮಂಡಳಿಯ ಗಜಾನನ ವಿಸರ್ಜನಾ ಸಮಾರಂಭ



ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ದೇಗಿನಾಳ ಗ್ರಾಮದಲ್ಲಿ ಪ್ರತಿ ವರ್ಷದಂತೆ ವರ್ಷವೂ ಕೂಡಾ ಅಂಬೇಡ್ಕರ್ ಗಜಾನನ ಯುವಕ ಮಂಡಳಿಯ ಗಜಾನನ ವಿಸರ್ಜನೆಯ ಸಮಾರಂಭದಲ್ಲಿ ದಿವ್ಯ ಸಾನಿಧ್ಯವನ್ನು ಪೂಜ್ಯ ಶ್ರೀ ರೇವಯ್ಯ ಹಿರೇಮಠ ಅವರು ವಹಿಸಿದ್ದರು. ರಮೇಶ್ ಗೌಡ ಬಿರಾದಾರ ಗ್ರಾಮ ಪಂಚಾಯತಿ ಸದಸ್ಯರು ಪೂಜೆ ನಂತರ ರಿಬ್ಬನ್ ಕಟ್ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿದರು.

ಅನ್ನ ಪ್ರಸಾದ ಸೇವೆಯನ್ನು ಕಲ್ಲಪ್ಪ ಎಡಿಗೆಯವರು ಮಾಡಿದರು. ಕಾರ್ಯಕ್ರಮದಲ್ಲಿ ರೇವಣಸಿದ್ದ ಪೂಜಾರಿಯವರು ಮಾತನಾಡುತ್ತಾ ದೇಗಿನಾಳ ನೂರಕ್ಕೂ ಹೆಚ್ಚು ಯೋಧರನ್ನು ನೀಡಿದೆ, ದೇಗಿನಾಳ ಗ್ರಾಮದ ಕ್ರಾಸ್ ಬಳಿ ಒಂದು ಉತ್ತರ ಕರ್ನಾಟಕದ ಹೆಮ್ಮೆಯ ಸರ್ವೋದಯ ಶಿಕ್ಷಣ ಸಂಸ್ಥೆ ಇದೆ.

ಮಹಾಲಕ್ಷ್ಮಿ ದೇವಸ್ಥಾನದ ಹೆಸರಿನ ದ್ವಾರಬಾಗಿಲು ಹಾಗೂ ಸರ್ವೋದಯ ಶಿಕ್ಷಣ ಸಂಸ್ಥೆಯ ಹೆಸರಿನ ದ್ವಾರಬಾಗಿಲು ಕಟ್ಟಬೇಕು ಮತ್ತು ಇಲ್ಲವಾದರೆ ನಾನೆ ನನಗೆ ಬರುವ ಸರಕಾರಿ ದುಡ್ಡಿನಲ್ಲಿ 10 ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟುತ್ತೇನೆ ಎಂದು ಹೇಳಿದರು. ದೇಗಿನಾಳ ಸ್ವಚ್ಛತೆ ಕಾಪಾಡಬೇಕು ಎಂದು ಶಾಲೆಯ ಸರಕಾರಿ ಶಿಕ್ಷಕರು ರೇವಣಸಿದ್ದ ಪೂಜಾರಿಯವರು ಹೇಳಿದರು.

ಈ ಕಾರ್ಯಕ್ರಮವು ಅಂಬೇಡ್ಕರ್ ಗಜಾನನ ತರುಣ ಮಂಡಳಿ ಅಧ್ಯಕ್ಷರಾದ ಆಕಾಶ ಶಿವಶರಣ ಅವರ ನೇತೃತ್ವದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಯುವ ನಾಯಕರಾದಂತ ಶಿವಲಿಂಗಪ್ಪ, ಅಣ್ಣಪ್ಪ ಸೌಕಾರು ಕೈನೂರ್, ರೇವಣಸಿದ್ದೇಶ್ವರ ಸಂಸ್ಥೆಯ ಅಧ್ಯಕ್ಷರು, ಮತ್ತು ಶಿವುಕುಮಾರ್ ಶಿವುರ ಅವರು ಭಾಗವಹಿಸಿದ್ದರು.

ಇಂಡಿ ತಾಲೂಕಿನಲ್ಲಿ ಯುವ ಪೈಲ್ವಾನ್ ಎಂದೇ ಹೆಸರುವಾಸಿಯಾಗಿರುವ ಶಿವಕುಮಾರ್ ಶಿವುರ ಅವರು ಮಾತನಾಡಿ ಯುವಕರು ದುಶ್ಚಟಕ್ಕೆ ಬೀಳಬಾರದು ನಿಮಗಾಗಿ ಜಿಮ್ ಅನ್ನು ಹೊರ್ತಿ ವಲಯದಲ್ಲಿ ಮಾಡಿರುತ್ತೇವೆ ಎಲ್ಲಾ ಯುವಕರು ಶರೀರವನ್ನು ಸದೃಢವಾಗಿಟ್ಟುಕೊಳ್ಳಬೇಕೆಂದರು. ರಮೇಶ್ ಗೌಡ ಬಿರಾದಾರ್ ಗ್ರಾಮ ಪಂಚಾಯತ್ ಸದಸ್ಯರು ಕೊಳೂರಗಿ, ಕಾರ್ತಿಕ್ ನೀಲಂಗಿ ಯುವ ನಾಯಕರು ದೇಗಿನಾಳ, ಗುರು ಗೌಡ ಜಮಾದಾರ್ ಬಿ. ಜೆ. ಪಿ. ಯುವ ನಾಯಕರು ದೇಗಿನಾಳ, ಶೀಲಾದರ ಶಿವಶರಣ ಗುರು, ಸೌಕಾರ್ ಕಾಶೆಟ್ಟಿ ಪ್ರಗತಿಪರ ರೈತರು, ಸಿದ್ದು ಏಡಿಗೆ ಗ್ರಾಮ ಪಂಚಾಯತ್ ಸದಸ್ಯರು ಕೋಳೂರಗಿ, ಸಂಜಯ ಪಾಟೀಲ್, ಪಾಂಡುರಂಗ ಬಿರಾದಾರ, ನಿರಂಜನ ಚವ್ಹಾಣ, ದಿಲೀಪ್ ಗೌಡ ಬಿರಾದಾರ, ಮಕ್ತುಮಸಾಬ ಮುಲ್ಲಾ, ಅಮಸಿದ್ದ ಎಡಿಗೆ, ಹೂವಣ್ಣ ಬಡಿಗೇರ, ಆಕಾಶ ಗಾಯಕವಾಡ, ಪ್ರಶಾಂತ್, ಶಿವಶರಣ, ಮಲ್ಲಿಕಾರ್ಜುನ್ ವಾಲಿಕಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.


**–ವರದಿ ಆನಂದ ಹರಿಜನ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 21
ದಿನಾಂಕ: 16-09-2025 ಪುಟಗಳು:16

# “ನೀನಾಗುವವರೆಗೆ ಮಣ್ಣಹುಡಿ, ಕನ್ನಡವನೇ ನುಡಿ” : ನೀಲಕಂಠ ಮ. ಕಾಳಗಿ







**ಅಧಿಕಾರಿ ಎಂಬುವ ಭೂತ**
**ಅಂಜಿದವರನು ಮತ್ತಷ್ಟು ಅಂಜಿಸುತ**
**ಅಂಜದವನ ಮನೆಯ ಗಂಜಿ ತಿನ್ನುತ**
**ತಿರುಗುವ ನಂಜಗುಳಿ ನೋಡೆಂದ “**
**– ನೀಲಕಂಠಾ**

**“ ಅಂದದಾ ಹೆಣ್ಣಿಹಳೆಂದು ಹಲ್ಲು ಕಿರಿಯಬೇಡ**
**ಕೈ , ಕಣ್ಣಸನ್ನೆ ಮಾಡಿ ಕರೆಯಬೇಡ**
**ಎಡಗಾಲ ಮೆಟ್ಟನವಳು ಹಿರಿದಾಗ ಓಡಬೇಡ**
**ಮಾನವೀಯತೆ ಮರೆಯಬೇಡವೆಂದ “**
**– ನೀಲಕಂಠಾ**

ಬಾಗಲಕೋಟೆ ಜಿಲ್ಲೆಯ ಇಲಕಲ್ಲ ಪಟ್ಟಣದ ಶ್ರೀಯುತ ನೀಲಕಂಠ ಮ. ಕಾಳಗಿಯವರು ತಮ್ಮ ಸ್ವರಚಿತ 300 ಆಧುನಿಕ ವಚನಗಳ ಮೂಲಕ ಸಮಾಜದಲ್ಲಿ ಪ್ರಸ್ತುತ ನಡೆಯುತ್ತಿರುವ ಅನ್ಯಾಯ, ಅನಾಚಾರ, ಭ್ರಷ್ಟಾಚಾರ, ಲಂಚಗುಳಿತನ ಸೇರಿದಂತೆ ಇನ್ನೂ ಹತ್ತು ಹಲವು ವಿಷಯಗಳ ಬಗ್ಗೆ ವಚನಗಳನ್ನು ರಚಿಸಿ “ನೀಲಕಂಠನ ವಚನಗಳು” ಎಂಬ ಶೀರ್ಷಿಕೆಯಡಿ ಪುಸ್ತಕ ಪ್ರಕಟಿಸುವ ಮೂಲಕ ಇಂದಿನ ಸಮಾಜಕ್ಕೆ ಕೆಟ್ಟ ವಿಚಾರಗಳಿಂದಾಗುವ ಪರಿಣಾಮ ಹಾಗೂ ಉತ್ತಮ ವಿಚಾರಗಳಿಂದ ಆಗುವ ಲಾಭವನ್ನು ತಮ್ಮದೇ ಆದ ಶೈಲಿಯಲ್ಲಿ ನೇರ, ನಿಷ್ಠುರವಾಗಿ ಎಚ್ಚರಿಕೆಯ ಸಂದೇಶಗಳ ಜೊತೆ ಜೊತೆಗೆ ಜೀವನಪಾಠಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ.

**ಉಚಿತವಾಗಿ ನಡೆಯುವ ವಧು ವರರ ಅನ್ವೇಷಣೆ:** ಯಾರಿಂದಲೂ ಯಾವುದೇ ರೀತಿಯ ಸಂಭಾವನೆಯನ್ನೂ ಪಡೆಯದೆ ತಮ್ಮದೇ ಮದುವೆ ಆಗುವದಕ್ಕಿಂತಲೂ ಮುಂಚೆಯಿಂದ ಇದುವರೆಗೂ ಸರ್ವಧರ್ಮದ ನೂರಾರು ವಧು-ವರ ಅನ್ವೇಷಣೆ ಮಾಡಿ ಕಲ್ಯಾಣ ಕಾರ್ಯಕ್ಕೆ ಕಾರಣವಾಗಿರುವ ಇವರು ಯಾವುದೇ ಫಲಾಪೇಕ್ಷೆ ಇಲ್ಲದೆ ಸಮಾಜಕ್ಕೆ ಇದೊಂದು ನನ್ನ ಚಿಕ್ಕ ಸೇವೆಯಾಗಿಯೇ ಇರಲಿ ಎನ್ನುತ್ತಾರೆ.

**ರೈಲಿಗೋ, ನೇಣಿಗೋ ಶರಣಾಗೋ ಮುನ್ನ ಒಮ್ಮೆ ಬನ್ನಿ...:** ಇತ್ತೀಚೆಗಂತೂ ಪರೀಕ್ಷೆಯಲ್ಲಿ ಅಂಕ ಕಡಿಮೆ ಬಂದಿದೆ , ಗಂಡ ಹೆಂಡತಿ ಜಗಳ, ಸೋಷಿಯಲ್ ಮೀಡಿಯಾಗಳಲ್ಲಿ ತಮ್ಮ ಪೋಸ್ಟ್ ಗೆ ಲೈಕ್ ,ಕಾಮೆಂಟ್, ಶೇರ್ ಕಡಿಮೆ ಆಗಿದೆ ಎಂದೋ ಈ ರೀತಿಯ ಚಿಕ್ಕ ಪುಟ್ಟ ವಿಷಯಗಳಿಗೆ ತಲೆ ಕೆಡಿಸಿಕೊಂಡು ದುಶ್ಚಟಕ್ಕೆ ಬಲಿಯಾಗುವುದೋ ಅಥವಾ ರೈಲಿಗೋ, ನೇಣಿಗೋ ಶರಣಾಗೋ ಯೋಚನೆ ಮಾಡುವವರ ಸಂಖ್ಯೆ ಹೆಚ್ಚಾಗಿರುವ ಈ ಕಾಲಘಟ್ಟದಲ್ಲಿ ನೀಲಕಂಠ ಕಾಳಗಿಯವರು ತಮ್ಮ ಮಾನಸಿಕ ದುಗುಡವನ್ನು ಹೊತ್ತು ಬಂದವರ ಮನಸನ್ನು ಹಗುರಾಗಿಸಿ ಬದುಕಿ ಬಾಳುವವರಿಗೆ ತಮ್ಮ ಅನುಭವ ಜನ್ಯ ಸಲಹೆ (ಕೌನ್ಸಿಲಿಂಗ್) ರೀತಿ ನೀತಿಯನ್ನು ಹೇಳುವ ಮೂಲಕ ಅದೆಷ್ಟೋ ಜನರ ಪಾಲಿಗೆ ಆಪ್ತರಕ್ಷಕ, ಆಪ್ತಮಿತ್ರ ಆಗಿದ್ದಾರೆ ನಾಡಿನ ಹಾಗೂ ದೇಶದ ಮೂಲೆ ಮೂಲೆಯಲ್ಲಿ ಇವರ ಸ್ನೇಹಲೋಕ ಇದೆ ಎಂದರೆ ಅತಿಶಯೋಕ್ತಿ ಎನಿಸದು. ಅಂದ ಹಾಗೆ ಈ ಸೇವೆಯೂ ಕೂಡಾ ಉಚಿತ.

## ಮನೆಯ ಹೆಸರೇ “ಕನ್ನಡ ನಿಲಯ”

37 ವರ್ಷಗಳ ಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸಾರ್ಥಕ ಸೇವೆ ಸಲ್ಲಿಸಿದ ಇವರು ಮೊದಲಿನಿಂದಲೂ ಇಲಕಲ್ಲ ಪಟ್ಟಣದ ಜೋಶಿಗಲ್ಲಿಯಲ್ಲಿರುವ ಇವರ ಮನೆಗೆ “ ಕನ್ನಡ ನಿಲಯ” ಎಂದು ನಾಮಕರಣ ಮಾಡಿಕೊಂಡು ಅದೇ ಕನ್ನಡ ನಿಲಯದ ಆವರಣದಲ್ಲಿ 21 ವರ್ಷಗಳ ಹಿಂದೆ ಶೃಂಗೇರಿ ಜಗದ್ಗುರುಗಳಿಂದ ಶಾರದಾ ಅಮ್ಮನವರ ವಿಗ್ರಹ ಪಡೆದು ಶಾರದಾ ಮಂದಿರವನ್ನು ಸ್ಥಾಪಿಸಿದ್ದಾರೆ ಇವರು ಇದುವರೆಗೆ ಎರಡು ವಿಶ್ವ ಕನ್ನಡ ಸಮ್ಮೇಳನ ಸೇರಿದಂತೆ ಮೂವತ್ತಕ್ಕೂ ಹೆಚ್ಚು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಮೂಲಕ ಕನ್ನಡ ಸಾಹಿತ್ಯ ಸಮ್ಮೇಳನಗಳು ಪ್ರತಿಯೊಬ್ಬ ಕನ್ನಡಿಗರ ಹೆಮ್ಮೆಯ ಹಬ್ಬ ಎಲ್ಲರೂ ಪಾಲ್ಗೊಳ್ಳಬೇಕು ಎನ್ನುವ ಸಂದೇಶ ನೀಡುತ್ತಾರೆ.

**ಇಲಕಲ್ಲ ನಲ್ಲಿ ಶೃಂಗೇರಿ ಶಾರದಾ ಮಂದಿರ:** ಪೂಜ್ಯ ಶ್ರೀ ಜಗದ್ಗುರು ಭಾರತೀ ತೀರ್ಥ ಸ್ವಾಮೀಜಿ ಶೃಂಗೇರಿ ಇವರಿಂದ 2005ರಲ್ಲಿ ಶಾರದಾ ದೇವಿ ವಿಗ್ರಹ ಪಡೆದು ತಮ್ಮ ಸ್ವಂತ ಮನೆಯ ಆವರಣದಲ್ಲಿ ಮಂದಿರ ನಿರ್ಮಾಣ ಮಾಡಿ ವರ್ಷ ಪೂರ್ತಿ ನಿರಂತರವಾಗಿ ಪೂಜಾ ಕೈಂಕರ್ಯಗಳು, ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಈವರೆಗೆ ಸಾವಿರಾರು ಮಕ್ಕಳಿಗೆ ಅಕ್ಷರಾಭ್ಯಾಸ ಪೂಜೆಯನ್ನು ಸಹ ನೆರವೇರಿಸಲಾಗಿದೆ.

**ಸಾಹಿತ್ಯ ಕೃಷಿ:** ಅಪರಾಧಿ ಯಾರು?, ಕುರುಬರ ಮುತ್ತ, ಮುಡಿ ಜಾರಿದ ಮಲ್ಲಿಗೆ, ಅಣ್ಣನ ಮಗಳು ಇತ್ಯಾದಿ ನಾಟಕಗಳ ರಚನೆಯೊಂದಿಗೆ ಕಾರ್ಮಿಕರ ರಕ್ತಗಾಲುವೆ, ಜಕ್ಕವಕ್ಕಿ ಎಂಬ ಪತ್ರಿಕಾ ಧಾರಾವಾಹಿಗಳು, ಮನದ ಹೂಗಳು (ಕವನ ಸಂಕಲನ), ಗೀತ ಚಿಗಿತ (ಸಂಪಾದಿತ ಕವನ ಸಂಕಲನ), ನೀಲಕಂಠನ ವಚನಗಳು (ಸ್ವರಚಿತ 300 ಆಧುನಿಕ ವಚನಗಳ ಪುಸ್ತಕ), ಶಿಶುಗೀತೆಗಳು , ಮಹತ್ವದ ಘಟನೆಗಳು ಮತ್ತು ಇಸ್ವಿಗಳು ಎಂಬ ಪುಸ್ತಕವನ್ನು ಸಂಗ್ರಹಿಸಿ ಪ್ರಕಟಿಸಿ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದಾರೆ. “ಹಂಪಿಯ ನುಡಿ” ಹಾಗೂ “ಸಿಂಧೂರ ಕೇಸರಿ” ಪತ್ರಿಕೆಗಳಲ್ಲಿ ಅಂಕಣ ಬರಹಗಳನ್ನು ಬರೆದಿದ್ದಾರೆ.

**– ಕರುನಾಡ ಕಂದ**

## ಸಜ್ಜನರ ಸಂಗ ಹೆಜ್ಜೇನು ಸವಿದಂತೆ...




**ಪೂಜ್ಯಶ್ರೀ ಗುರು ಮಹಾಂತ ಶ್ರೀಗಳು ಚಿತರಗಿ ಸಂಸ್ಥಾನ ಮಠ ಇಲಕಲ್ಲ ಇವರು ಸಮಾಜ ಸೇವಾ ದೀಕ್ಷೆ ( ಮಠಾಧೀಶರಾಗಿ ) 21 ವರ್ಷ ಪೂರೈಸಿದ ಸಂದರ್ಭದಲ್ಲಿ ಸವಿನೆನಪಿಗಾಗಿ ಸ್ವರಸಿಂಧು ಮೆಲೋಡೀಸ್ ತಂಡದಿಂದ ಗೌರವ ಸಮರ್ಪಣೆಯ ಸಂದರ್ಭ.**

ಅಪಾರ ಜೀವನಪ್ರೀತಿ ಮತ್ತು ಕ್ರಿಯಾಶೀಲತೆಗೆ ಇನ್ನೊಂದು ಹೆಸರೇ ನೀಲಕಂಠ ಮ. ಕಾಳಗಿ ಗುರುಗಳು. ಅವರೊಂದಿಗಿನ 10 ವರ್ಷಗಳ ಒಡನಾಟದಲ್ಲಿ ಸಾಕಷ್ಟು ಕಲಿತಿದ್ದೇನೆ. ಅವರ ಸಾಹಿತ್ಯಿಕ ಒಲವು ಮತ್ತು ಧಾರ್ಮಿಕ ಚಿಂತನೆಗಳು ಅನುಕರಣೀಯವಾಗಿವೆ. ಬದುಕಿನಲ್ಲಿ ಏನೇ ಕಷ್ಟಗಳು ಎದುರಾದರೂ ಎದೆಗುಂದದೆ ಧೈರ್ಯದಿಂದ ಎದುರಿಸಿ ಗೆದ್ದಿದ್ದಾರೆ. ಅವರ ಕನ್ನಡ ಪ್ರೇಮ ಪ್ರಶ್ನಾತೀತವಾದುದು. ತಮ್ಮ ವಿಶ್ರಾಂತ ಜೀವನವನ್ನು ಅವರು ಪ್ರತಿಕ್ಷಣವೂ ಏನಾದರೊಂದು ಚಟುವಟಿಕೆಯೊಂದಿಗೆ ಮುನ್ನಡೆಸುತ್ತಿದ್ದಾರೆ. ಅವರ ಚಲನಶೀಲ ಗುಣ ನಮಗೆ ಮಾದರಿ. ಅವರಿಗೆ ದೇವರು ಉತ್ತಮ ಆರೋಗ್ಯ ದೀರ್ಘಾಯುಷ್ಯ ನೀಡಿ ಕಾಪಾಡಲಿ. ಅವರ ಸಾಮಿಪ್ಯ ಮತ್ತು ಮಾರ್ಗದರ್ಶನ ನಮಗೆ ಅನುಗಾಲ ಸಿಗುತ್ತಿರಲಿ ಎಂದು ಆಶಿಸುತ್ತೇನೆ.

**– ಗೋಪಿಕೃಷ್ಣ ಎಂ. ಕಠಾರೆ**
ಗಾಯಕ/ನಿರೂಪಕ, ಸ್ವರಸಿಂಧು ಮೆಲೋಡೀಸ್, ಇಳಕಲ್.

## ಸಾಧಕರ ಮುಡಿಗೇರಿದ ಪ್ರಶಸ್ತಿ, ಸನ್ಮಾನಗಳು

ಹೀಗೆ ತಮ್ಮ ಶಿಕ್ಷಕ ವೃತ್ತಿಯೊಂದಿಗೆ ಹಾಗೂ ನಿವೃತ್ತಿಯ ನಂತರವೂ ಸಾಹಿತ್ಯ ರಚನೆ, ಪುಸ್ತಕ ಪ್ರಕಟಣೆಯೊಂದಿಗೆ ಕವಿಗೋಷ್ಠಿಗಳಲ್ಲಿ ಭಾಗವಹಿಸುತ್ತಾ ಹವ್ಯಾಸಿ ಪತ್ರಕರ್ತರಾಗಿ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ನಾಡು ನುಡಿ ಸೇವೆಯನ್ನು ಸುಮಾರು 40 ವರ್ಷಗಳಿಂದ ಮಾಡಿಕೊಂಡು ಬರುತ್ತಿರುವ ಶ್ರೀ ನೀಲಕಂಠ ಮ. ಕಾಳಗಿ ಇವರಿಗೆ ಕರ್ನಾಟಕ ಸುವರ್ಣ ಸಂಭ್ರಮ-50, ಕರ್ನಾಟಕ ಸರ್ಕಾರ-2024 ರ ಸುವರ್ಣ ಮಹೋತ್ಸವ ಪ್ರಶಸ್ತಿ, ಸುವರ್ಣ ಕರ್ನಾಟಕ ಸೇವಾ ಪ್ರಶಸ್ತಿ ಗ್ರಾಮಾಂತರ ಬುದ್ಧಿಜೀವಿಗಳ ಬಳಗ ಮೈಸೂರು 2010, ಬಾಗಲಕೋಟೆ ಜಿಲ್ಲಾ ರಾಜ್ಯೋತ್ಸವ-2012, ಬಾಗಲಕೋಟೆ ಜಿಲ್ಲಾ ಆದರ್ಶ ಶಿಕ್ಷಕ ಪ್ರಶಸ್ತಿ 2010, ಸಪ್ತಸಿರಿ ಸಾಹಿತ್ಯ ರತ್ನ ಪ್ರಶಸ್ತಿ ಹೊಸಪೇಟೆ 2021 ಸೇರಿದಂತೆ ಇನ್ನೂ ಹತ್ತು ಹಲವು ಸಂಘ ಸಂಸ್ಥೆಗಳು, ಮಠಾಧೀಶರು ,ಜನನಾಯಕರು ಪ್ರಶಸ್ತಿ, ಸತ್ಕಾರ, ಸನ್ಮಾನ ನೀಡಿ ಗೌರವಿಸಿದ್ದಾರೆ. ರಜೆ ಯಾವಾಗ ಸಿಗುವುದೋ ,ನಿವೃತ್ತಿ ಯಾವಾಗ ಆಗುವುದೋ ನಿವೃತ್ತಿ ಜೀವನವೆಂದರೆ ವಿಶ್ರಾಂತಿಗಾಗಿಯೇ ಇರುವುದು ಅಂದುಕೊಳ್ಳುವವರ ಮಧ್ಯೆ ಸದಾ ಚಟುವಟಿಕೆಯಿಂದ ಇರುತ್ತಾ ತಾವಷ್ಟೇ ಅಲ್ಲದೆ ತಮ್ಮ ಸುತ್ತಮುತ್ತಲಿನವರಿಗೂ ಒಂದಿಲ್ಲೊಂದು ಸಾಧನೆಯ ದಾರಿ ತೋರಿಸುವ ಆದರ್ಶ ಗುರುಗಳು ಇಂದಿನ ಯುವ ಜನಾಂಗಕ್ಕೆ ದಿಕ್ಸೂಚಿಯಂತಿರುವ ಇವರಿಗೆ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳು ಲಭಿಸಲಿ ಎನ್ನುವುದೇ “ ಕರುನಾಡ ಕಂದ “ ಮಾಧ್ಯಮ ಮಿತ್ರರ ಶುಭ ಹಾರೈಕೆ.








ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16-09-2025 ಪುಟಗಳು:16

# ಪ್ರಾಚೀನ ಪರಂಪರೆಯ ತಿಮ್ಮಾಪುರದ ಮಾರುತೇಶ್ವರ, ಬಸವೇಶ್ವರ ಜಾತ್ರೆ

**ಬಾಗಲಕೋಟೆ/ ಹುನಗುಂದ:** ನಾಡಿನಲ್ಲಿಯೇ ಪ್ರಾಚೀನ ಪರಂಪರೆ, ಸಂಪ್ರದಾಯದ ಪ್ರತೀಕ, ಉತ್ತರಿ ಮಳೆಯಲ್ಲಿ ಬರುವ ಏಕೈಕ ಜಾತ್ರೆಯೇ ಹುನಗುಂದ ತಾಲೂಕಿನ ತಿಮ್ಮಾಪುರದ ಮಾರುತೇಶ್ವರ, ಬಸವೇಶ್ವರರ ಜಾತ್ರೆ. ಇಂದಿಗೂ ಅನೇಕ ಪವಾಡ ಸದೃಶ್ಯ ಘಟನೆಗಳು ಈ ಗ್ರಾಮದಲ್ಲಿ ನಡೆಯುತ್ತಿರುವುದು ವಿಶೇಷ ಹನಮಂತ ದೇವರಿಗೆ ಓಕುಳಿ ಮತ್ತು ಅಗ್ನಿಕುಂಡ ಮಾಡುವುದನ್ನು ಕೇಳಿದ್ದೇವೆ ಆದರೆ ಇಲ್ಲಿ ಹತಾರ ಸೇವೆಯ ಮೂಲಕ ಮಾರುತೇಶ್ವರ ಜಾತ್ರೆ ನಡೆಯುವುದು ವಿಶಿಷ್ಟವಾಗಿದೆ.

ಹೌದು, ಬಾಗಲಕೋಟೆ ವಿಜಯಪುರ ಜಿಲ್ಲೆಯಲ್ಲಿಯೇ ಐವರು ಪ್ರಾಣ ದೇವರನ್ನು ಜಾಗೃತ ದೇವರೆಂದು ಕರೆಯಲಾಗಿದೆ, ಅದರಲ್ಲಿ ಯಲಗೂರ, ಹಲಗಲಿ, ತುಳಸಿಗೇರಿ, ಅಚನೂರ ಹಾಗೂ ಕೋರವಾರ ದೇವರನ್ನು ಜಾಗೃತ ದೇವರೆಂದು ಕರೆಯುವ ವಾಡಿಕೆ. ಅದರಂತೆ ಹುನಗುಂದ ತಾಲೂಕಿನ ತಿಮ್ಮಾಪೂರದ ಮಾರುತೇಶ್ವರ ದೇವರು ಕೂಡಾ ಜಾಗೃತ ದೇವರೆಂದು ಹೆಸರಾಗಿದೆ. ಪ್ರಚಾರ ಸಿಗದ್ದಕ್ಕೆ ಜನ ಸಾಮಾನ್ಯರಿಗೆ ಈ ಮಾರುತಿ ದೇವರ ಮಹತ್ವದ ಬಗ್ಗೆ ಹೆಚ್ಚಿಗೆ ತಿಳಿದಿಲ್ಲ ಎಂಬುದೆ ಖೇದದ ಸಂಗತಿ.

## ಶ್ರೀಮಾರುತೇಶ್ವರ ಸ್ಥಾಪನೆಯ ಹಿನ್ನೆಲೆ

ಈ ಊರಿನ ಪೂಜಾರಿಗಳು ಹರಪನಹಳ್ಳಿಯ ದೇಸಾಯಿ ಮನೆತನಕ್ಕೆ ಸೇರಿದವರೆಂಬ ಪ್ರತೀತಿ. ಅವರು ಒಂದು ಕಾಲದಲ್ಲಿ ಹರಪನಹಳ್ಳಿಯನ್ನು ಬಿಟ್ಟು ಬರುವ ವೇಳೆಯಲ್ಲಿ ಹುನಗುಂದ ತಾಲೂಕಿನ ದಮ್ಮೂರದ ಗುಡ್ಡದಲ್ಲಿ ಡಬರುತ್ತಿರುವಾಗ ಮಾರುತೇಶ್ವರನು "ಭಕ್ತನೇ. ನೀನು ಎಲ್ಲಿಗೆ ಹೋಗುವೆ? ನನ್ನನ್ನು ಅಲ್ಲಿಗೆ ಕರದುಕೊಂಡು ಹೋಗು, ನಾನು ನಿನ್ನ ಜೊತೆ ಬರುತ್ತೇನೆ" ಎಂದು ಒಂದು ಅಶರೀರವಾಣಿ ಕೇಳಿತಂತೆ ಆಗ ಆ ಭಕ್ತನು " ನಿನ್ನನ್ನು ಒಯ್ಯುವುದು ಹೇಗೆ? ನೀನು ಭಾರವಾಗಿದ್ದಿಯಾ ಎಂದಾಗ ಮಾರುತೇಶ್ವರನು " ನಾನು ರೋಟಿ ತೂಕದಲ್ಲಿ ಬರುತ್ತೇನೆ " ಎನ್ನಲು, ಆ ವ್ಯಕ್ತಿ ನೆಲದಲ್ಲಿರುವ ಆ ಕಲ್ಲನ್ನು ಎತ್ತಿಕೊಳ್ಳಲು ಅದು ಬಹಳ ಹಗುರವಾಯಿತಂತೆ. ಅದನ್ನು ಎತ್ತಿಕೊಂಡು ಅಲ್ಲಿಂದ ಹುನಗುಂದ ತಾಲೂಕಿನ ತಿಮ್ಮಾಪೂರ ಕಡೆಗೆ ಹೊರಟನಂತೆ, ಊರ ಸಮೀಪಕ್ಕೆ ಬರು ಬರುತ್ತಾ ಮೂರ್ತಿ ಭಾರವಾಯಿತಂತೆ. ಆಗ ಕಲ್ಲಿನ ಮೂರ್ತಿಯನ್ನು ಕೆಳಗೆ ಇಟ್ಟು ಹೊರಟು ನಿಂತಾಗ, ಮತ್ತೆ ಮಾರುತೇಶ್ವರನ ಮೂರ್ತಿಯು ನನ್ನನ್ನು ಇಲ್ಲಿ ಬಿಟ್ಟು ಹೋಗಬೇಡ, ನನಗೆ ಡೊಳ್ಳು ಕಳಸದೊಂದಿಗೆ ಬಂದು ಕರೆದುಕೊಂಡು ಹೋಗು. ಸಂಗಟಿ ಎಡೆಯ ನೈವೇದ್ಯ ತೆಗೆದುಕೊಂಡು ಬರಲು ಊರಲ್ಲಿ ಹೇಳು ಎಂದನಂತೆ ಆ ಪ್ರಕಾರ ಅವನು ಗ್ರಾಮಕ್ಕೆ ತೆರಳಿ ಗ್ರಾಮದ ಕೆಲವು ಮನೆತನದವರನ್ನು ಕರೆದುಕೊಂಡು ಸಂಗಟಿ ಎಡೆಯ ನೈವೇದ್ಯವನ್ನು ಮಾಡಿ ಅದ್ದೂರಿ ಮೆರವಣಿಗೆ ಮೂಲಕ ಗ್ರಾಮಕ್ಕೆ ತಂದು ಮೂರ್ತಿಯನ್ನು ಪ್ರತಿಷ್ಠಾಪಿಸಿದರಂತೆ. ಅಲ್ಲಿಂದ ಇಲ್ಲಿಯವರೆಗೂ ಮಾರುತೇಶ್ವರನಿಗೆ ಸಂಗಟಿ ನೈವೇದ್ಯವನ್ನು ಹಿಡಿಯುವ ವಾಡಿಕೆ ಇಂದಿಗೂ ನಡೆದುಕೊಂಡು ಬಂದಿದೆ. ಆಕರ್ಷಣೀಯ ಜೋಡಿ ಗುಡಿಗಳು-ಈ ಗ್ರಾಮದ ದಕ್ಷಿಣಾಭಿಮುಖವಾಗಿ ಮಾರುತೇಶ್ವರ ಮತ್ತು ಬಸವೇಶ್ವರ ದೇವಾಲಯ ಇರುವುದು ವಿಶೇಷ.

ಈ ಎರಡೂ ದೇವರ ಜಾತ್ರೆ ಒಂದೇ ದಿನ ನಡೆಯುವುದು ಮತ್ತೊಂದು ವಿಶೇಷವಾಗಿದೆ. ಮಾರುತೇಶ್ವರ ದೇವಾಲಯವನ್ನು ಹುನಗುಂದದ ಜನಾದ್ರಿ ಮನೆತನದ ಹಿರಿಯರೊಬ್ಬರು ಕಟ್ಟಿಸಿದರು. ಗ್ರಾಮಸ್ಥರು ದೇವಾಲಯಕ್ಕೆ ಗೋಪುರ ಕಟ್ಟಿ ಆ ದೇವಾಲಯವನ್ನು ಮತ್ತೊಮ್ಮೆ ಜೀರ್ಣೋದ್ಧಾರ ಮಾಡಲಾಯಿತು ಎಂದು ಹೇಳಲಾಗುತ್ತಿದೆ.

## ದೇವಾಲಯದ ಹಿನ್ನೆಲೆ

ಹುನಗುಂದದ ಜನಾದ್ರಿ ಮನೆತನದ ಹಿರಿಯರೊಬ್ಬರು ವೈಶ್ಯ ಧರ್ಮದಂತೆ ವ್ಯಾಪಾರ ಮಾಡಿಕೊಂಡಿದ್ದರು. ಹಳ್ಳಿ ಹಳ್ಳಿಗೆ ತಿರುಗಿ ಹತ್ತಿ ತುಂಬುವುದು ವಗ್ಗೆರಿ ವ್ಯವಹಾರ ಮಾಡುವ ಅವರು ಒಮ್ಮೆ ತಿಮ್ಮಾಪುರಕ್ಕೆ ಹೋಗಿದ್ದರಂತೆ, ಅಲ್ಲಿ ಗಿಡದ ಬುಡದಲ್ಲಿ ಬಂದು ಹನಮಪ್ಪನ ಮೂರ್ತಿ ಇತ್ತಂತೆ ಅಲ್ಲಿಯೇ ಕುಳಿತು ವಿಶ್ರಾಂತಿಗಾಗಿ ಮಲಗಿದಾಗ ಹನಮಪ್ಪನು ಕನಸಿನಲ್ಲಿ ಬಂದು ನೀನು ನನ್ನ ದೇವಸ್ಥಾನ ಕಟ್ಟಿಸು ನಿನಗೆ ಒಳ್ಳೆಯದಾಗುತ್ತದೆ ಎಂದು ಹೇಳಿದನಂತೆ. ಕನಸೋ ನನಸೋ ತಿಳಿಯದು ಒಟ್ಟಿನಲ್ಲಿ ಹುನಗುಂದದ ಜನಾದ್ರಿ ಮನೆತನದ ಹಿರಿಯರೊಬ್ಬರು ಈ ದೇವಸ್ಥಾನ ಕಟ್ಟಿಸಿದರು ಎಂಬ ಪ್ರತೀತಿ ಇದೆ. ಆದರೆ ಮುಂದಿನ ದಿನಮಾನದಲ್ಲಿ ತಿಮ್ಮಾಪುರ ಗ್ರಾಮಸ್ಥರು ಜೀರ್ಣೋದ್ಧಾರ ಮಾಡಿದ್ದಾರೆ ಎಂದು ಗ್ರಾಮಸ್ಥರು ಹೇಳುತ್ತಾರೆ.



ತಿಮ್ಮಾಪುರ ಗ್ರಾಮದಲ್ಲಿರುವ ಜೋಡಿ ಬಸವಣ್ಣ



ಅಲಂಕಾರಗೊಂಡಿರುವ ಹನುಮಂತ ದೇವರು



ತಿಮ್ಮಾಪುರ ಮಾರುತೇಶ್ವರ ದೇವರ ಹಿರಿಯ ಅರ್ಚಕ ಕನಕಪ್ಪ ಪೂಜಾರಿ ಯವರು ಜಾತ್ರೆಯ ಸಂದರ್ಭದಲ್ಲಿ ವಿಶಿಷ್ಟವಾಗಿ ಆಚರಣೆಗೊಳ್ಳುವ ಹತಾರ ಸೇವಾ ಕೈಂಕರ್ಯ ಮಾಡುತ್ತಿರುವುದು.



ಹುನಗುಂದ ತಾಲೂಕಿನ ತಿಮ್ಮಾಪುರ ದಲ್ಲಿರುವ ಶ್ರೀ ಮಾರುತೇಶ್ವರ ಹಾಗೂ ಬಸವೇಶ್ವರ ದೇವಸ್ಥಾನದ ಚಿತ್ರ

## ವಿಶಿಷ್ಟ ಹತಾರ ಸೇವೆ

ಈ ದೇವಾಲಯದ ಎದುರಿಗೆ ಭರಮದೇವರ ಕಟ್ಟೆ ಇದ್ದು. ಜಾತ್ರೆಯ ದಿನವಾದ ಸೆ-21 ರಂದು ಮಧ್ಯಾಹ್ನ 12ಕ್ಕೆ ಹಾಗೂ ಸಂಜೆ 6ಕ್ಕೆ ಗುಡಿಯ ಪ್ರದಕ್ಷಿಣೆ ಹಾಕುತ್ತಾ ಪೂಜಾರಿ ಹತಾರ ಸೇವೆಗೈಯುವರು. ಹರಿತವಾದ ಖಡ್ಗದ ಪೆಟ್ಟು ತಿನ್ನುವ ಪೂಜಾರಿಯ ಮೈ ಮೇಲೆ ಸ್ವಲ್ಪವೂ ಗಾಯ ಕಾಣೋದಿಲ್ಲ. ತೊಟ್ಟು ರಕ್ತದ ಕಲೆಯು ಇರೋದಿಲ್ಲ, ಇದು ಹನಮಂತ ದೇವರ ಪವಾಡವೇ ಸರಿ. ಇನ್ನು ಹತಾರವನ್ನು ಹೊಟ್ಟೆಗೆ ಇಟ್ಟು ಕೊಂಡು ಬಾಗುವ ಮೂಲಕ ಖಡ್ಗವನ್ನು ಮಣಿಸಲು ಪ್ರಯತ್ನಸುವುದು ಒಂದು ರೋಚಕ ದೃಶ್ಯ. ಇದೊಂದು ಅದ್ಭುತ ಪವಾಡ ಸದೃಶ್ಯ ಅಷ್ಟೇ ಅಲ್ಲ ಅದು ನೋಡಗರಿಗೆ ಒಂದು ರೋಮಾಂಚನಕಾರಿಯಾಗಿದೆ. ಇದಾದ ನಂತರ ಮಳೆ ಬೆಳೆಯ ಬಗ್ಗೆ ಹೇಳಿಕೆ ಹೇಳುವ ಸಂಪ್ರದಾಯವಿದೆ.

## ಸುತಗಾಯಿ ಸಂಪ್ರದಾಯ

ಜಾತ್ರೆಯ ದಿನ ಸಂಜೆ ಸಕಲ ವಾದ್ಯ ವೈಭವದೊಂದಿಗೆ ದೇವಾಲಯ ಪ್ರದಕ್ಷಿಣೆ ಹಾಕುತ್ತಾ ಪ್ರತಿ ಸುತ್ತಿಗೆ ಪ್ರತಿ ಮನೆಯವರು ಹಾಗೂ ಜಾತ್ರೆಗೆ ಬಂದವರು 5 ರಿಂದ 101 ಸುತಗಾಯಿ (ಟೆಂಗಿನಕಾಯಿ) ಒಡೆಯುವ ಸಂಪ್ರದಾಯವಿದೆ. ಇನ್ನು ಸುತಗಾಯಿ ಒಡೆಯುವಾಗ ಗುಡಿಯ ಎದರು ನಾಲ್ಕು ಜನರು ಕಂಬಳಿ ಹಿಡಿದು ನಿಂತಿರುತ್ತಾರೆ ಅದರ ಒಳಗೆ ಜೋರಾಗಿ ತೆಂಗಿನಕಾಯಿಯನ್ನು ಒಗೆದು ಒಡೆಯುವ ಹರಸಾಹಸ ಮಾಡುತ್ತಿರುವ ದೃಶ್ಯ ನೋಡುಗರ ಮನ ತಣಿಸುತ್ತದೆ. ಉತ್ತರಿ ಮಳೆಯಲ್ಲಿ ನಡೆಯುವ ವಿಶೇಷ ಜಾತ್ರೆ-ಹುಬ್ಬಿ ಮಳೆಯ ಕೊನೆಯ ಪಾದದಲ್ಲಿ ಬರುವ ಶನಿವಾರದಂದು ದೇವರಿಗೆ ನೀರು ಹನಿಸುವ ಮೂಲಕ ಪ್ರಾರಂಭವಾಗುವ ಈ ಜಾತ್ರೆಯು ಉತ್ತರಿ ಮಳೆಯು ಶುಭಾರಂಭವನ್ನು ಕಾಣಬಹುದು. ಈ ಮಳೆಯು ತಾಲೂಕಿನ ಯಾವ ಭಾಗದಲ್ಲೂ ಆಗದಿದ್ದರೂ ತಿಮ್ಮಾಪೂರ ಮತ್ತು ಅದರ ಸುತ್ತಮುತ್ತಲು ಜಾತ್ರೆ ಮುಗಿಯುವರಿಗೂ ಬಿಟ್ಟು ಬಿಡದಂತೆ ಮಳೆ ಸುರಿಸುವ ಮೂಲಕ ಹಿಂಗಾರು ಬಿತ್ತನೆಯ ಮುನ್ಸೂಚನೆಯನ್ನು ನೀಡುತ್ತದೆ. ಇದೆಲ್ಲಾ ಪವಾಡ ಪುರುಷ ಹನಮಂತ ಮತ್ತು ಬಸವೇಶ್ವರರ ಕೃಪೆ ಎಂದು ಗ್ರಾಮಸ್ಥರು,ಸುತ್ತ ಮುತ್ತಲ ಊರಿನವರು ತಿಳಿದುಕೊಂಡಿದ್ದಾರೆ.

22 ರಂದು ಜೋಡಿ ದೇವರ ರಥೋತ್ಸವ-ಸೆ-20ರಿಂದ 22ರವರೆಗೆ ಮೂರು ದಿನಗಳ ಕಾಲ ಅನೇಕ ಧಾರ್ಮಿಕ ಕೈಂಕರ್ಯ ನಡೆಯುತ್ತವೆ ಸೆ-22ರಂದು ಜೋಡಿ ದೇವರುಗಳ ರಥೋತ್ಸವವು ಜರುಗುವುದು.

" ನಾಡಿನ ಹಲವು ಜಾತ್ರೆ ಉತ್ಸವಗಳಲ್ಲ ಭವಿಷ್ಯವಾಣಿಯನ್ನು ನುಡಿಯುವ ಪದ್ಧತಿ ಆಯಾ ಪ್ರಾದೇಶಿಕತೆ ಅನುಗುಣವಾಗಿ ನಡೆದುಕೊಂಡು ಬಂದಿದೆ ಅಂತೇ ತಿಮ್ಮಾಪುರದ ಮಾರುತೇಶ್ವರನ ಜಾತ್ರೆಯಲ್ಲ ಕಾರಣಿಕ ವಾಣಿಯನ್ನು ಕೇಳಲು ಭಕ್ತರು ಕಾತುರದಿಂದ ಕಾಯುತ್ತಾರೆ. ನಾಡಿನಲ್ಲ ಮಳೆ, ಬೆಳೆ ಪ್ರಕೃತಿ ವಿಕೋಪ ಕುರಿತು ಭವಿಷ್ಯ ನುಡಿಯುತ್ತರೆ ಇಲ್ಲ ನುಡಿಯುವ ಕಾರಣಿಕ ನುಡಿಗಳು ನಿಜವಾಗಿವೆ ".

**-ಎಸ್.ಎಸ್. ಹಳ್ಳೂರ,**
ಹಿರಿಯ ಸಾಹಿತಿಗಳು ತಿಮ್ಮಾಪುರ.



**ಜಗದೀಶ ಮಲ್ಲಪ್ಪ ಹದ್ಲಿ.**
ಎಲ್.ಐ.ಸಿ ಏಜೆಂಟರು, ತಿಮ್ಮಾಪುರ. ಹುನಗುಂದ ತಾಲೂಕು. ಜಿಲ್ಲೆ ಬಾಗಲಕೋಟೆ.

ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16-09-2025 ಪುಟಗಳು:16

# ಶ್ರೀ ಮಾರುತೇಶ್ವರ ಹಾಗೂ ಬಸವೇಶ್ವರ ದೇವರ ಜಾತ್ರಾ ಮಹೋತ್ಸವ ಕಾರ್ಯಕ್ರಮ ಪಟ್ಟಿ



ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ತಿಮ್ಮಾಪೂರ ಗ್ರಾಮದ ಶ್ರೀ ಮಾರುತೇಶ್ವರ, ಬಸವೇಶ್ವರ ದೇವರ ಜಾತ್ರೆಯು ಇದೇ ತಿಂಗಳ 20 ರಿಂದ 22 ರವರೆಗೆ ವಿಜೃಂಭಣೆಯಿ0ದ ಜರುಗುವುದು. ಭಕ್ತಾದಿಗಳು ಜಾತ್ರೆಗೆ ಆಗಮಿಸಿ ಮಾರುತೇಶ್ವರ ಹಾಗೂ ಬಸವೇಶ್ವರ ಕೃಪೆಗೆ ಪಾತ್ರರಾಗಬೇಕೆಂದು ತಿಮ್ಮಾಪೂರ ಗ್ರಾಮಸ್ಥರು ವಿನಂತಿಸಿದ್ದಾರೆ.

ದಿನಾಂಕ 20 ರಂದು ಶನಿವಾರ ರಾತ್ರಿ8-00 ಕ್ಕೆ ಶ್ರೀ ಮಾರುತೇಶ್ವರ ಪಲ್ಲಕ್ಕಿ ಹಾಗೂ ನೂರಾರು ಭಕ್ತರು ಬರಿಗಾಲಿನಿಂದ ತಿಮ್ಮಾಪೂರ ಪತ್ರಿಗಿಡದ ಬಸವೇಶ್ವರನಿಗೆ ಪೂಜೆ ಸಲ್ಲಿಸಿ ಕಿರಸೂರ ಗ್ರಾಮಕ್ಕೆ ತೆರಳುತ್ತಾರೆ. ಕಿರಸೂರಿನ ಗ್ರಾಮಸ್ಥರು ಶ್ರೀ ಮಾರುತೇಶ್ವರ ಪಲ್ಲಕ್ಕಿ ಹಾಗೂ ಭಕ್ತರನ್ನು ಬರಮಾಡಿಕೊಂಡು ಅಲ್ಲಿನ ಹನಮಂತ ದೇವರಿಗೆ ಪೂಜೆ ಸಲ್ಲಿಸುವರು. ಅಲ್ಲಿಂದ ಕಿರಸೂರು ಗ್ರಾಮಸ್ಥರು ಡೊಳ್ಳಿನ ಸಂಗಡ 5 ಕುಂಬಳ ಎಲೆ ತೆಗೆದುಕೊಂಡು ರಾತ್ರಿ 12-00 ಘಂಟೆಯ ಸುಮಾರಿಗೆ ಹಡಗಲಿ ಸಮೀಪದ ಮಲಪ್ರಭಾ ನದಿಗೆ ತೆರಳುತ್ತಾರೆ.

ಮಲಪ್ರಭಾ ನದಿಯಲ್ಲಿ ಸ್ನಾನ ಮಾಡಿದ ನಂತರ ಹೊಳೆಯಲ್ಲಿ ಪೂಜೆ, ಪುನಸ್ಕಾರಗಳು ನಡೆಯುವವು. ಅಲ್ಲಿಂದ ಹೊರಟು ಹಡಗಲಿ ಗ್ರಾಮಕ್ಕೆ ತೆರಳಿ ಅಲ್ಲಿಯ ಹನಮಂತ ದೇವರಿಗೆ ಪೂಜೆ ಸಲ್ಲಿಸಿದ ನಂತರ ಅಲ್ಲಿ ಮುಂಜಾನೆ 4-00 ರ ಸುಮಾರಿಗೆ ಹನುಮಂತ ದೇವರ ಕಟ್ಟೆಯ ಮೇಲೆ ಮಾರುತೇಶ್ವರ ಪೂಜಾರಿಯು ಭವಿಷ್ಯದ ಮಳೆ, ಬೆಳೆ, ಹೇಳಿಕೆ ನಡೆಯುವದು. ನಂತರ ಪಲ್ಲಕ್ಕಿ ಹಾಗೂ ಭಕ್ತರಿಗೆ ಕುರಹಟ್ಟಿ ಸಹೋದರರು ಲಘು ಉಪಹಾರ ಸೇವೆಯನ್ನು ಸಲ್ಲಿಸುತ್ತಾರೆ. ಪ್ರಸಾದ ನಂತರ ಮರಳಿ ಪಲ್ಲಕ್ಕಿಯೊಂದಿಗೆ ಗ್ರಾಮಕ್ಕೆ ಬಂದು ತಲುಪುತ್ತಾರೆ.

ದಿನಾಂಕ 21ರಂದು ರವಿವಾರ ಮುಂಜಾನೆ 8=00 ಕ್ಕೆ ಶ್ರೀ ಮಾರುತೇಶ್ವರ ಹಾಗೂ ಶ್ರೀ ಬಸವೇಶ್ವರ ದೇವ-ರಿಗೆ ರುದ್ರಾಭಿಷೇಕ ನಡೆದು ಸಕಲ ವಾದ್ಯ-ಮೇಳದೊಂದಿಗೆ ಕಳಸದ ಮೆರವಣಿಗೆ. ನಂತರ ಗೋಪುರಕ್ಕೆ ಕಳಸಾರೋಹಣ, ಮುಂಜಾನೆ 11=00 ಕ್ಕೆ ಶ್ರೀ ಮಾರುತಿದೇವರ ಪಲ್ಲಕ್ಕಿಯನ್ನು ಶ್ರೀ ವಿರುಪಾಕ್ಷಗೌಡ ದಾದ್ಮಿಯವರ ಹೊಲದಿಂದ ದೇವಸ್ಥಾನಕ್ಕೆ ಕರೆತರಲಾಗುವುದು. ನಂತರ ಹೊಳೆಯಿಂದ ತಂದ ನೀರನ್ನು ದೇವರಿಗೆ ಸ್ನಾನ ಮಾಡಿಸುವುದು. ಮಧ್ಯಾಹ್ನ 12=00 ಘಂಟೆಗೆ ಪೂಜಾರಿಗಳಿಂದ ವಿಶಿಷ್ಟವಾದ ಹತಾರ ಸೇವೆ ನಡೆಯಲಿದೆ

ಅಂದು ಸಾಯಂಕಾಲ 4=00 ಪೂಜಾರಿ ಮನೆಯಿಂದ "ಮಾವಿನ ಮರತಪ್ಪ" ಎಂಬ ಹನಮಂತ ದೇವರ ಮೂರ್ತಿಯನ್ನು ಗುಡಿಗೆ ತರಲಾಗುತ್ತದೆ. ಸಾಯಂಕಾಲ 5=00 ಕ್ಕೆ ವಿಶಿಷ್ಟ ರೀತಿಯ ಹತಾರ ಸೇವೆಯೊಂದಿಗೆ ಇದೇ ಸಂದರ್ಭದಲ್ಲಿ ಸುತಕಾಯಿ (ತೆಂಗಿನಕಾಯಿ) ಒಡೆಯುವ ಕಾರ್ಯ ನಡೆಯುವುದು. ನಂತರ ಹನುಮಂತ ದೇವರ ಪೂಜಾರಿಯು ಭರಮದೇವರ ಕಟ್ಟೆಯ ಮೇಲೆ ನಿಂತು ಹತಾರ ಸೇವೆ ಆದ ನಂತರ ಭವಿಷ್ಯದ ಮಳೆ, ಬೆಳೆಗಳ ಬಗ್ಗೆ ಹೇಳಿಕೆ ನಡೆಯುವದು. ದಿ.22 ರಂದು ಬಸವೇಶ್ವರನಿಗೆ ರುದ್ರಾಭಿಷೇಕ, ನಂತರ ಇಂದಿಗೆ ರಥೋತ್ಸವ ಪ್ರಾರಂಭಗೊಂಡು 25ನೇ ವರ್ಷದ ರಜ-ತ ಮಹೋತ್ಸವ ಕಾರ್ಯಕ್ರಮದ ನಿಮಿತ್ಯ ನಮ್ಮೂರಿನ ಶಾಲೆಯಲ್ಲಿ ಕಲಿಸಿದ ಗುರುಗಳ ಕಲಿಸುತ್ತಿರುವ ಶಿಕ್ಷಕರ ಗುರುವಂದನಾ ಕಾರ್ಯಕ್ರಮ ಹಾಗೂ ಹಾಲಿ ಹಾಗೂ ಮಾಜಿ ಸೈನಿಕರಿಗೆ ಮತ್ತು ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ವಿವಿಧ ಶ್ರೀಗಳ ಆಶೀರ್ವಚನ ಕಾರ್ಯಕ್ರಮ ಜರುಗಲಿದೆ ನಂತರ ಲಘು ರಥೋತ್ಸವ ನಂತರ, ಮಹಾರಥೋತ್ಸವ ಜರುಗಲಿದೆ.

**ರಾತ್ರಿ 10 ಗಂಟೆಗೆ ನಾಟಕ ಪ್ರದರ್ಶನ:** ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಚಿಕ್ಕಲಗುಂಡಿ ಗ್ರಾಮದ ಅಂಜನಿಪುತ್ರ ನಾಟ್ಯ ಸಂಘ, (ವಿಠ್ಠಲ ಚಿಕ್ಕಲಗುಂಡಿ ) ಹಾಗೂ ರಾಮದುರ್ಗ ತಾಲೂಕಿನ ಚನ್ನಾಪುರ ಗ್ರಾಮದ ಕನಸುಗಾರ ಕವಿ ರಮೇಶ್ ಹೆಚ್ ಬಡಿಗೇರ ವಿರಚಿತ ಹಾಸ್ಯ ಭರಿತ ಸಾಮಾಜಿಕ ನಾಟಕ ತಾಯಿಯ ಋಣ ಮಣ್ಣಿನ ಗುಣ ಎಂಬ ಸಾಮಾಜಿಕ ಪ್ರದರ್ಶನ ಜರುಗಲಿದೆ ಎಂದು ಜಾತ್ರಾ ಸಮಿತಿಯವರು ತಿಳಿಸಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸುತ್ತಮುತ್ತಲಿನ ಸಕಲ-ಸದ್ಭಕ್ತರು ಪಾಲ್ಗೊಂಡು ಶ್ರೀ ಮಾರುತೇಶ್ವರ ಹಾಗೂ ಬಸವೇಶ್ವರನ ಕೃಪೆಗೆ ಪಾತ್ರರಾಗಬೇಕೆಂದು ಗ್ರಾಮಸ್ಥರ ಪರವಾಗಿ ಸ್ಥಳೀಯ ಸ್ವಾಮಿ ವಿವೇಕಾನಂದ ಯುವಕ ಮಂಡಳದ ಸದಸ್ಯ ಹಾಗೂ ಪತ್ರಕರ್ತ ಜಗದೀಶ ಹದ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**- ಕರುನಾಡ ಕಂದ**

# ಮಾರುತೇಶ್ವರ ಹಾಗೂ ಬಸವೇಶ್ವರ ಹಾಗೂ ಗ್ರಾಮ ದೇವತೆಗಳಿಗೆ ನೀರು ಎರೆಯುವುದರ ಮೂಲಕ ಜಾತ್ರೆಗೆ ಚಾಲನೆ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ತಿಮ್ಮಾಪೂರ ಗ್ರಾಮದ ಆರಾಧ್ಯ ದೇವರುಗಳಾದ ಶ್ರೀ ಮಾರುತೇಶ್ವರ ಹಾಗೂ ಬಸವೇಶ್ವರ ಹಾಗೂ ಗ್ರಾಮ ದೇವತೆಗಳಿಗೆ ನೀರು ಎರೆಯುವದರೊಂದಿಗೆ ದಿ 13\09\2025 ರಂದು ಶನಿವಾರ ಚಾಲನೆ ನೀಡಲಾಯಿತು.

ನೀರು ಎರೆಯುವ ಕಾರ್ಯಕ್ರಮದಲ್ಲಿ ಮಾರುತೇಶ್ವರ ದೇವರ ಅರ್ಚಕರಾದ ಕನಕಪ್ಪ ಪೂಜಾರಿ ಮತ್ತು ಸಂಜೀವಪ್ಪ ಪೂಜಾರಿ ಬಸವಣ್ಣ ದೇವರ ಅರ್ಚಕ ಪುಟ್ಟರಾಜ ಶರಣಯ್ಯ ಹಿರೇಮಠ, ಗ್ರಾಮದ ಹಿರಿಯರಾದ ಯುವಕರಾದ ಸಂಕೇತ ಹೆರಕಲ್ಲ, ರವಿ ಬೇರಗಿ, ಸಂತೋಷ ಹಳ್ಳೂರ , ಮಹಾಂತೇಶ ಕೆಂಚನಗೌಡರ, ಬಸವರಾಜ ಮೂಲಿಮನಿ, ಬಸವರಾಜ.ಬ.ಹಳ್ಳೂರ ,ಸಂಗಣ್ಣ ಮಲ್ಲಪ್ಪ ಹೊರಗೋದಿನಿ, ಪ್ರೀತಮ್, ಮಾಂತೇಶ ದಾದ್ಮಿ, ಸಿಕ್ರೇಶ ಗೌಡ, ಹನುಮಗೌಡ, ಅಶೋಕ ಮಡಿವಾಳರ, ವಿಜಯಕುಮಾರ ಹುನೂರ, ಪ್ರಸನ್ನ ಹೆರಕಲ, ಸಂದೀಪ್ ಸಂಗಪ್ಪ ವಾಲಿಕಾರ್, ಬಸವರಾಜ ಬ. ಹಳ್ಳೂರ, ತರುಣ ಸುನಗದ, ಸಾಗರ್ ಬಡಿಗೇರ, ಹಡಗಲಿಯ ಶ್ರವಣ ನೇಗಲಿ, ಬಸವರಾಜ ಕೋಣೆ, ಅಶೋಕ ಮಣಿ ನಾಗರ, ಶ್ರೀಶೈಲ್ ಮಡಿವಾಳರ, ಗೌತಮ್ ಹೆರಕಲ್, ಹರೀಶ್ ಹಾದಿಮನಿ ಸೇರಿದಂತೆ ಇತರರು ಭಾಗವಹಿಸಿದರು.




**ಜಾತ್ರೆಗೆ ತಯಾರಿ :** ನೀರು ಎರಿಯುವದರೊಂದಿಗೆ ಪ್ರಾರಂಭಗೊ0ಡ ನಂತರ ಪೂಜಾರಿಗಳು ಮಡಿಯಿಂದ ಬರಿಗಾಲಿನಲ್ಲಿ ನಡೆದಾಡುತ್ತಾರೆ. ಹಾಗೂ ಮಾರುತೇಶ್ವರ ಗೋಪಾಳದೊಂದಿಗೆ ತಿಮ್ಮಾಪೂರ, ಕಿರಸೂರ, ಹಡಗಲಿ ಗ್ರಾಮದವರು ವಿವಿಧ ರಾಜ್ಯ, ಜಿಲ್ಲೆ ಹಾಗೂ ವಿವಿಧ ತಾಲೂಕಿನಲ್ಲಿ ನೆಲೆಸಿರುವ ಸ್ಥಳಗಳಿಗೆ ತೆರಳಿ ಅಲ್ಲಿ ಶಂಖನಾದವನ್ನು ಮಾಡಿ ದವಸಧಾನ್ಯ ಹಾಗೂ ದೇಣಿಗೆ ಸಂಗ್ರಹಿಸುತ್ತಾರೆ ಹಾಗೂ ಗ್ರಾಮದ ದೈವ ಮಂಡಳಿಯು ದೇವಾಲಯಗಳಿಗೆ ಸುಣ್ಣ ಬಣ್ಣ ಸಿಂಗರಿಸುವುದು ಜಾತ್ರೆಗೆ ಬೇಕಾಗುವ ಸಾಮಾಗ್ರಿಗಳನ್ನು ಖರೀದಿ ಮಾಡುತ್ತಾರೆ ಇದೇ ತಿಂಗಳ ದಿನಾಂಕ 20 ರಂದು ಶನಿವಾರ ಪ್ರಾರಂಭಗೊಂಡು ಅಂದು ಹೊಳೆಗೆ ಹೋಗುವ ಕಾರ್ಯಕ್ರಮ, 22 ರಂದು ರವಿವಾರ ರಂದು ಅಭಿಷೇಕ, ಪಲ್ಲಕ್ಕಿ ಉತ್ಸವ, ಹತಾರ ಸೇವೆ, ಸುತ್ತಗಾಯಿ ಒಡೆಯುವ ಕಾರ್ಯ ಮತ್ತು ಹಡಗಲಿ ತಿಮ್ಮಾಪೂರ ಗ್ರಾಮದಲ್ಲಿ ಹೇಳಿಕೆಗಳು ಜರುಗಲಿದೆ. ದಿ.22 ರಂದು ಬಸವೇಶ್ವರನಿಗೆ ರುದ್ರಾಭಿಷೇಕ, ನಂತರ ಇಂದಿಗೆ ರಥೋತ್ಸವ ಪ್ರಾರಂಭಗೊಂಡು 25ನೇ ವರ್ಷದ ರಜ-ತ ಮಹೋತ್ಸವ ಕಾರ್ಯಕ್ರಮದ ನಿಮಿತ್ಯ ನಮ್ಮೂರಿನ ಶಾಲೆಯಲ್ಲಿ ಕಲಿಸಿದ ಗುರುಗಳ ಕಲಿಸುತ್ತಿರುವ ಶಿಕ್ಷಕರ ಗುರುವಂದನಾ ಕಾರ್ಯಕ್ರಮ ಹಾಗೂ ಹಾಲಿ ಹಾಗೂ ಮಾಜಿ ಸೈನಿಕರಿಗೆ ಮತ್ತು ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದೆ ನಂತರ ಲಘು ರಥೋತ್ಸವ ನಂತರ, ಮಹಾ ರಥೋತ್ಸವ ಜರುಗಲಿದೆ.

**ನಾಟಕ ಪ್ರದರ್ಶನ:** ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಚಿಕ್ಕಲಗುಂಡಿ ಗ್ರಾಮದ ಅಂಜನಿಪುತ್ರ ನಾಟ್ಯ ಸಂಘ, ( ವಿಠ್ಠಲ ಚಿಕ್ಕಲಗುಂಡಿ ) ಅವರಿಂದ ರಾಮದುರ್ಗ ತಾಲೂಕಿನ ಚನ್ನಾಪುರ ಗ್ರಾಮದ ಕನಸುಗಾರ ಕವಿ ರಮೇಶ್ ಹೆಚ್. ಬಡಿಗೇರ ವಿರಚಿತ ಹಾಸ್ಯ ಭರಿತ ಸಾಮಾಜಿಕ ನಾಟಕ " ತಾಯಿಯ ಋಣ ಮಣ್ಣಿನ ಗುಣ "ಎಂಬ ಸಾಮಾಜಿಕ ಪ್ರದರ್ಶನ, ರಾತ್ರಿ 10:30ಕ್ಕೆ ಜರುಗಲಿದೆ ಎಂದು ಜಾತ್ರಾ ಸಮಿತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**- ಕರುನಾಡ ಕಂದ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16–09–2025 ಪುಟಗಳು:16

# ವಿಕಲಚೇತನರಿಗೆ ಸಾಮಾಜಿಕ ನ್ಯಾಯ ಮರೀಚಿಕೆ :ಶ್ರೀ ಕೊಡಕ್ಕಲ್ ಶಿವಪ್ರಸಾದ್




**ಬೆಂಗಳೂರು :** ಆಡಳಿತ ಶಾಹಿಯ ಮೀಸೆ ತಿರುವುವ ಕರಾಳ ಮುಖವನ್ನು ಎತ್ತಿ ಹಿಡಿದಿದೆ ಎಂದು ಸ್ಪಷ್ಟವಾಗಿ ಹೇಳಬಲ್ಲೆ, ಕಳೆದ 40 ವರ್ಷಗಳಿಂದ ವಿಕಲಚೇತನರ ನ್ಯಾಯಯುತ ಸೌಲಭ್ಯ ಮತ್ತು ಹಕ್ಕುಗಳಿಗಾಗಿ ವಿವಿಧ ವೇದಿಕೆಗಳಲ್ಲಿ ಹೋರಾಡುತ್ತಿರುವ ನನಗೆ ಎದುರಾಗಿರುವ ಅಡ್ಡಿ ಆತಂಕಗಳು ಒಂದೆರಡು ಅಲ್ಲ ಹಾಗೂ ಅವುಗಳನ್ನು ವಿವರಿಸಲು

ಸಮಯ ಹಾಗೂ ಮಾನಸಿಕ ಸ್ಥೈರ್ಯ ಕುಸಿಯುವ ಕಾರಣಗಳಿಂದ ಬರೆಯಲು ಸಾಧ್ಯವಾಗುತ್ತಿಲ್ಲ . ಭಾರತೀಯ ರೈಲ್ವೆಯ ವಿಕಲಚೇತನರ ರಿಯಾಯಿತಿ ಪಾಸಿನಲ್ಲಿರುವ ತಾರತಮ್ಯದ ಬಗ್ಗೆ ಅಂಗವಿಕಲರ ಮುಖ್ಯ ಆಯುಕ್ತರ ನ್ಯಾಯಾಲದಲ್ಲಿ ದಾವೆ ಹೂಡಿ ಕೋರ್ಟ್ ಆದೇಶದ ಮೂಲಕ ಎಲ್ಲಾ ವಿಕಲಚೇತನರಿಗೆ ರಿಯಾಯಿತಿ ಪ್ರಯಾಣದ ಪಾಸು ವಿತರಿಸಬೇಕೆಂದು ಆದೇಶ ಹೊರಡಿಸಿದ್ದರೂ ಕೂಡಾ ರೈಲ್ವೆ ಇಲಾಖೆ ಇಲ್ಲ ಸಲ್ಲದ ಸಬೂಬುಗಳನ್ನು ಹೇಳಿ ವಿಕಲಚೇತನರಿಗೆ ಸಹಾನುಭೂತಿ ತೋರಿಸುವುದು ಬಿಟ್ಟು ಕಾನೂನು ಸಂಘರ್ಷಕ್ಕೆ ಹೆದ್ದಾರಿ ರಚಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೂ ಇದಕ್ಕೆ ಹೊರತಾಗಿಲ್ಲ ಕಾರಣ ಅಂಗವಿಕಲರ ರಾಜ್ಯ ಆಯುಕ್ತರಿಂದ ನೋಟಿಸ್ ಮತ್ತು ಸೂಚನೆಗೂ ರಾಜ್ಯ ಸರಕಾರ ಬಗ್ಗದೆ ಹಣ–ಕಾಸು ಅಡಚಣೆಯ ನೆಪ ಹೇಳಿ ಜಾರಿಕೊಳ್ಳುತ್ತಿದೆಯಲ್ಲದೆ ವಿಕಲಚೇತನರ ನ್ಯಾಯಾಲಯಗಳು ಸರಕಾರಗಳಿಂದ ನೇಮಕಗೊಂಡಿರುವ ಕಾರಣಗಳಿಂದ ಕಾನೂನು ಕ್ರಮಕ್ಕೆ ಹಿಂಜರಿಯುವ ಸ್ಥಿತಿ ಇದೆ. ಇನ್ನು ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕ್ ವಿಷಯ ಕೇಳಲೇ ಬೇಡಿ ವಿಕಲಚೇತನರ ವಿಷಯದಲ್ಲಿ ಕಠಿಣ ರೀತಿಯಿಂದ ನಡೆದುಕೊಂಡು ಬ್ಯಾಂಕ್ ಇಂದು ಅವಿದ್ಯಾವಂತರ ತಾಣವಾಗಿ ಪರಿವರ್ತಿತ ಗೊಂಡಿರುವುದು ಇಂದಿನ ವಾಸ್ತವ ಸತ್ಯ.

ಇದಲ್ಲದೆ ರಾಜ್ಯ ಮಾನವ ಹಕ್ಕು ಆಯೋಗಕ್ಕೆ ಹಲ್ಲಿಲ್ಲದ ಹಾವಿನ ಸ್ಥಿತಿಯನ್ನು ರಾಜ್ಯ ಸರಕಾರವು ನಿರ್ಮಿಸಿರುವುದು ಕೂಡಾ ನ್ಯಾಯ ವ್ಯವಸ್ಥೆಯಲ್ಲಿ ನಂಬಿಕೆ ಕುಸಿಯಲು ಯತ್ನಿಸಿರುವ ವಾಸ್ತವ ಸತ್ಯವೂ ನಮ್ಮ ಬತ್ತಳಿಕೆಯಲ್ಲಿದೆ.

ಕೆಲವೊಂದು ಸಂದರ್ಭಗಳಲ್ಲಿ ವಿಕಲಚೇತನರ ನ್ಯಾಯಾಲಯವೇ ಇಂತಹ ಸಮಸ್ಯೆಗಳ ವಿಚಾರಣೆಗೆ ಸರಕಾರಗಳ ಧೋರಣೆಗಳಿಂದ ಬೇಸತ್ತು ದೂರುಗಳ ವಿಚಾರಣೆ ನಡೆಸಲು ಹಿಂಜರಿಯುತ್ತಿರುವ ಅನುಭವವೂ ನಮಗಾಗುತ್ತಿವೆ, ಇಂತಹ ಅಧಃ ಪತನಗಳಿಗೆ ಕಾಲವೇ ಉತ್ತರಿಸುತ್ತದೆ ಎಂಬ ಆಶಾಭಾವನೆ ಮಾತ್ರ ವಿಕಲಚೇತನರ ಓಯಸಿಸ್ ಆಗಿರುವುದು ಒಂದು ಸಾಮಾಜಿಕ ದುರಂತವಾಗಿದೆ ಎಂದು ಶ್ರೀ ಕೊಡಕ್ಕಲ್ ಶಿವಪ್ರಸಾದ್, ಸಂಸ್ಥಾಪಕ ಅಧ್ಯಕ್ಷರು, ಇಂಡಿಯನ್ ದಿವ್ಯಾಂಗ ಎಂಪವರ್ಮೆಂಟ್ ಅಸೋಸಿಯೇಷನ್, ಶಿವಮೊಗ್ಗ ಇವರು ಪತ್ರಿಕಾ ಪ್ರಕಟಣೆಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

**– ಕರುನಾಡ ಕಂದ**

---

# ಪಿಜಿ ಪಾಳ್ಯ ಗ್ರಾಮ ಪಂಚಾಯತಿ 2024/25ನೇ ಸಾಲಿನ ಸಾಮಾಜಿಕ ಲೆಕ್ಕ ಪರಿಶೋಧನಾ ಸಭೆ




ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಪಿ.ಜಿ. ಪಾಳ್ಯ ಗ್ರಾಮ ಪಂಚಾಯತ್ 2024/25ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ 15 ನೇ ಹಣಕಾಸು ಸಾಮಾಜಿಕ ಲೆಕ್ಕ ಪರಿಶೋಧನಾ ಸಭೆ ಕಾರ್ಯಕ್ರಮ ಪಂಚಾಯತಿ ವ್ಯಾಪ್ತಿಯ ಜಡೇಗೌಡನದೊಡ್ಡಿ ಗ್ರಾಮದಲ್ಲಿ ನಡೆಯಿತು.

ಸಭೆಯಲ್ಲಿ ನರೇಗಾ ತಾಲೂಕು ಸಂಯೋಜಕ ನಾರಾಯಣ್ ಮಾತನಾಡುತ್ತಾ ಪಿ.ಜಿ. ಪಾಳ್ಯ ಗ್ರಾಮ ಪಂ. ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ನರೇಗಾ ಯೋಜನೆಯಡಿ 62 ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗಿದೆ. ಕೂಲಿ ವೆಚ್ಚ 35,86,318 ರೂ. ಹಾಗೂ ಸಾಮಗ್ರಿ ವೆಚ್ಚ 52,73,643 ರೂ. ಸೇರಿದಂತೆ 88,59,960 ರೂ. ಅನುದಾನ ಖರ್ಚು ಮಾಡಲಾಗಿದೆ, ಯೋಜನೆಯಡಿ ಕೃಷಿ ಹೊಂಡ ನಿರ್ಮಾಣ, ದನದ ಕೊಟ್ಟಿಗೆ, ಜಮೀನು, ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಕೆರೆ ಅಭಿವೃದ್ಧಿ, ವಸತಿ ಯೋಜನೆಗೆ ಅನುದಾನ, ಹಳ್ಳ, ಕಾಲುವೆ ಹೂಳೆತ್ತುವ ಕಾಮಗಾರಿ, ಕೊಟ್ಟಿಗೆ ನಿರ್ಮಾಣ, ಸಿ. ಸಿ ರಸ್ತೆ, ಚರಂಡಿ, ಕುಡಿಯುವ ನೀರಿನ ತೊಟ್ಟಿ, ಮೆಟ್ಲಿಂಗ್ ರಸ್ತೆ ನಿರ್ಮಾಣ ಸೇರಿದಂತೆ ಕಾಮಗಾ–ರಿಗಳನ್ನು ನಿರ್ವಹಣೆ ಮಾಡಲಾಗಿದೆ.

ನಡೆದಿರುವ ಕಾಮಗಾರಿಗಳನ್ನು ಸ್ಥಳಕ್ಕೆ ತೆರಳಿ ಪರಿಶೀಲಿಸಲಾಗಿದೆ ಎಂದು ನಡೆದಿರುವ ಕಾಮಗಾರಿಗಳ ಬಗ್ಗೆ ಸವಿವರವಾಗಿ ಸಭೆಯಲ್ಲಿ ಮಂಡಿಸಿ ಲೋಪದೋಷಗಳು ಆಕ್ಷೇಪಣೆಗಳು ಇದ್ದರೆ ತಿಳಿಸಬಹುದು ಎಂದರು. ನಂತರ 15 ನೇ ಹಣಕಾಸು ಯೋಜನೆಯಡಿ ನಿರ್ವಹಣೆ ಮಾಡಲಾಗಿರುವ ಅಭಿವೃದ್ಧಿ ಕಾಮಗಾರಿಗಳ ಖರ್ಚು ವೆಚ್ಚದ ವಿವರವನ್ನು ಸಭೆಯಲ್ಲಿ ಮಂಡಿಸಿದರು.ಸಭೆಯಲ್ಲಿ ನೋಡಲ್ ಅಧಿಕಾರಿಯಾಗಿ ಸಮಾಜ ಕಲ್ಯಾಣ ಇಲಾಖೆಯ ಮಧು, ಗ್ರಾಮ ಪಂಚಾಯತಿ ಪಿ.ಡಿ.ಒ ನಂಜುಂಡಸ್ವಾಮಿ, ಅಧ್ಯಕ್ಷ ಸಂತೋಷ್, ಉಪಾಧ್ಯಕ್ಷೆ ಸುಶೀಲಾ, ಸದಸ್ಯರಾದ ನಿಂಗರಾಜು, ಮಹದೇವಸ್ವಾಮಿ, ಕೃಷ್ಣಮೂರ್ತಿ, ಮಾದೇಶ್, ನೀಲಾ, ಎಸ್.ಡಿ.ಎ ಶಂಕರ್ ಸೇರಿದಂತೆ ಗ್ರಾಮ ಪಂ. ಸಿಬ್ಬಂದಿ, ಸಾರ್ವಜನಿಕರು ಹಾಜರಿದ್ದರು.

**ವರದಿ :ಉಸ್ಮಾನ್ ಖಾನ್**

---




# ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ



ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಅಲಬೂರಿನ ಎಮ್. ಆರ್. ಎಸ್. ಎಸ್. ಸರ್ಕಾರಿ ಪ್ರೌಢಶಾಲೆ ಬಾಲಕರ ಖೋ – ಖೋ ಹಾಗೂ ಬಾಲ್ ಬ್ಯಾಡ್ಮಿಂಟನ್ ಮತ್ತು ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ಊರಿನ ಹಾಗೂ ಶಾಲೆಯ ಹೆಮ್ಮೆಯನ್ನು ಮತ್ತೊಮ್ಮೆ ಹೆಚ್ಚಿಸಿರುತ್ತಾರೆ. ವಿದ್ಯಾರ್ಥಿಗಳ ಜೊತೆ ದೈಹಿಕ ಶಿಕ್ಷಕರಾದ ಸತೀಶ್ ಹಾಗೂ ಶಾಲೆಯ ಸಹ ಶಿಕ್ಷಕರಾದ ನಾಗರಾಜ್ , ಬಸವರಾಜ್ ಹಾಗೂ ಮುಖ್ಯಗುರುಗಳಾದ ಮಂಗಳಮ್ಮ , ಶಾಲೆಯ ಎಲ್ಲಾ ಸಹ ಶಿಕ್ಷಕರಗಳು ಹಾಗೂ ಊರಿನ ಹಳೆಯ ವಿದ್ಯಾರ್ಥಿಗಳ ಸಹಕಾರ ಮತ್ತು ಊರಿನ ಜನರ ಪ್ರೋತ್ಸಾಹದಿಂದ ಈ ಕ್ರೀಡೆಯಲ್ಲಿ ಪ್ರಥಮ ಸ್ಥಾನ ಸಾಧಿಸಿರುತ್ತಾರೆ.

**ವರದಿಗಾರರು: ಎನ್. ಚಂದ್ರಗೌಡ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16–09–2025 ಪುಟಗಳು:16

# ಧರ್ಮಸ್ಥಳದ ಮಂಜುನಾಥ ಸ್ವಾಮಿ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಕಿಡಿಗೇಡಿಗಳನ್ನು ಬಂಧಿಸಿ–ಜೈ ಕ.ರ.ವೇ ಆಗ್ರಹ



**ಕಲಬುರಗಿ/ಯಡ್ರಾಮಿ :** ಜೈ ಕರ್ನಾಟಕ ರಕ್ಷಣಾ ವೇದಿಕೆ ಯಡ್ರಾಮಿ ತಾಲೂಕಾ ಘಟಕದ ವತಿಯಿಂದ ಇತ್ತೀಚಿಗೆ ಪಟ್ಟಣದ ಡಾ. ಬಿ ಆರ್. ಅಂಬೇಡ್ಕರ್ ವೃತ್ತದಲ್ಲಿ ಧರ್ಮಸ್ಥಳದ ವಿರುದ್ಧ ಕೆಲ ಯೂಟ್ಯೂಬ್ ಚಾನೆಲ್ ಗಳಿಂದ ನಡೆಯುತ್ತಿರುವ ಅಪಪ್ರಚಾರದ ವಿರುದ್ಧ ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾಕಾರರು ಇತ್ತೀಚಿನ ದಿನಗಳಲ್ಲಿ ಈ ನಾಡಿನ ಹೆಸರಾಂತ ಧಾರ್ಮಿಕ ಕೇಂದ್ರವಾದ ಧರ್ಮಸ್ಥಳದ ಶ್ರೀ ಮಂಜುನಾಥ ಸನ್ನಿದಿಯ ಕುರಿತು ಕೆಲ ಯೂಟ್ಯೂಬರ್ ಗಳು ಹಾಗೂ ವ್ಯಕ್ತಿಗಳು ಸುಳ್ಳು ಆರೋಪಗಳನ್ನು ಮಾಡುತ್ತಾ ಅಪಪ್ರಚಾರ ಮಾಡುತ್ತಿರುವವರ ಗಮನಿಸಿದರೆ ಧರ್ಮಸ್ಥಳದ ಕ್ಷೇತ್ರಕ್ಕೆ ಮಸಿ ಬಳಿಯುವ ವ್ಯವಸ್ಥಿತವಾದ ಷಡ್ಯಂತ್ರ ರಚನೆಯಾಗಿದ್ದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಭಾಸವಾಗುತ್ತಿದೆ ಇದರ ಪರಿಣಾಮ ಧರ್ಮಸ್ಥಳ ಕ್ಷೇತ್ರದ ನಾಡಿನ ಭಕ್ತರ ಭಾವನೆಗಳಿಗೆ ಧಕ್ಕೆ ಉಂಟಾಗುತ್ತಿದೆ ಎಂದರು.

ಈ ಸಂಧರ್ಭದಲ್ಲಿ ಮಾತಾಡಿದ ಜೈ ಕರ್ನಾಟಕ ರಕ್ಷಣಾ ವೇದಿಕೆಯ ಯಡ್ರಾಮಿ ತಾಲೂಕಾ ಅಧ್ಯಕ್ಷರಾದ ಅಮರನಾಥ್ ಸಾಹು ಕುಳಗೇರಿ ಧರ್ಮಸ್ಥಳ ಶ್ರೀ ಮಂಜುನಾಥನ ಭಕ್ತರು ನಾಡಿನಲ್ಲಿ ಅಲ್ಲದೆ ವಿವಿಧ ರಾಜ್ಯಗಳಲ್ಲಿ, ವಿದೇಶಗಳಲ್ಲಿದ್ದು ಧರ್ಮಸ್ಥಳ ಕ್ಷೇತ್ರ ನಾಡಿನ ದೇವಸ್ಥಾನಗಳ ಜೀರ್ಣೋದ್ದಾರ, ವ್ಯಸನಗಳ ಮುಕ್ತ ಜಾಗೃತಿಯ ಶಿಬಿರಗಳು, ಮಹಿಳೆಯರು ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳಲು ಸಾಲದ ಸಹಾಯ ಧನ ಮತ್ತು ಸಾವಯವ ಕೃಷಿಗೆ ಉತ್ತೇಜನ ನೀಡುವ ಕಾರ್ಯಕ್ರಮಗಳು, ಯುವಕ ಮತ್ತು ಯುವತಿಯರಿಗೆ ಉದ್ಯೋಗ, ಬಡವ–ರಿಗೆ ಉಚಿತ ಸಾಮೂಹಿಕ ವಿವಾಹ, ನಿರ್ಗತಿಕರಿಗೆ ಉಚಿತ ಆರೋಗ್ಯ ಸೇವೆ, ಅನ್ನದಾಸೋಹ, ಅಕ್ಷರ ದಾಸೋಹ ನಿತ್ಯ ನಿರಂತರವಾಗಿ ಸಾಮಾಜಿಕ ಸೇವಾ ಕಾರ್ಯಗಳು ಆ ಪುಣ್ಯ ಕ್ಷೇತ್ರದಿಂದ ನಡೆಯುತಿದ್ದು, ಈ ನಾಡಿಗೆ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಅಪಾರವಾದಂತಹ ಕೊಡುಗೆಯನ್ನಾಗಿ ನೀಡಿದ್ದು ಅವಿಸ್ಮರಣೀಯವಾದದ್ದು ಇದರ ಬಗ್ಗೆ ಪ್ರಚಾರ ಮಾಡದೆ ಆ ಕ್ಷೇತ್ರವನ್ನು ಮುಖ್ಯ ಗು–ರಿಯನ್ನಾಗಿಸಿಕೊಂಡು ಅಪಪ್ರಚಾರಗೈದು ಕಳಂಕ ತರುವ ಹುನ್ನಾರವನ್ನು ಮಾಡುತ್ತಿದ್ದಾರೆ ಇದನ್ನು ಜೈ ಕರ್ನಾಟಕ ರಕ್ಷಣಾ ವೇದಿಕೆ ಉಗ್ರವಾಗಿ ಖಂಡಿಸುತ್ತದೆ

ಈಗಾಗಲೇ ಸಮಗ್ರ ತನಿಖೆಗಾಗಿ ಎಸ್. ಐ. ಟಿ ತಂಡ ರಚನೆಯಾಗಿದ್ದು ಆ ಸದರಿ ಸಂಸ್ಥೆಯಿಂದ ತನಿಖೆ ನಡೆಯುತ್ತಿದ್ದು ಅವರ ತನಿಖಾ ವರದಿ ಬರುವ ಮುಂಚೆ ಕೆಲ ಯೂಟ್ಯೂಬರಗಳು ಹಾಗೂ ವ್ಯಕ್ತಿಗಳು ತಮ್ಮ ಮನಸ್ಸಿಗೆ ಬಂದಂತೆ ಊಹಿಸಿಕೊಂಡು ಹೇಳಿಕೆ ನೀಡುವುದರಿಂದ ತನಿಖಾ ತಂಡಕ್ಕೆ ದಾರಿ ತಪ್ಪಿಸುತ್ತಾ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಂತಾಗಿದೆ ತನಿಖಾ ಹಂತದಲ್ಲಿರುವದರಿಂದ ಇಲ್ಲ ಸಲ್ಲದ ಹೇಳಿಕೆ ಕೊಡುವವರ ಹಾಗೂ ಯೂಟ್ಯೂಬರ್ ಚಾನಲ್ ತಮ್ಮ ಮೂಗಿನ ನೇರಕ್ಕೆ ಸೃಷ್ಟಿಸಿ ಸುಳ್ಳು ವರದಿ ಮಾಡುವವರನ್ನು ಕೂಡಲೇ ಕಾನೂನಿನ ಸೂಕ್ತ ಕ್ರಮ ಕೈಗೊಂಡು ಕಡಿವಾಣ ಹಾಕಬೇಕು ಹಾಗೂ ಪುಣ್ಯ ಕ್ಷೇತ್ರ ಧರ್ಮಸ್ಥಳವನ್ನು ರಕ್ಷಿಸಬೇಕು ಎಂದು ಯಡ್ರಾಮಿ ಪಟ್ಟಣದ ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟಿಸಿ ಒತ್ತಾಯಿಸಿದರು. ಈ ಸಂಧರ್ಭದಲ್ಲಿ ಯಡ್ರಾಮಿ ತಾಲೂಕಾ ಮುಖಂಡರಾದ ಈರಣ್ಣ ಸಾಹು ಸುಂಕದ, ಮಲ್ಲಿಕಾರ್ಜುನ ಹೂಗಾರ್, ಸಾಹೇಬಗೌಡ ದೇಸಾಯಿ, ಬಿಸಿಲು ಲಾಳೆಸಾಬ್ ಮನಿಯಾರ್, ಜೈ ಕ.ರ. ವೇ ಯುವ ಘಟಕದ ತಾಲೂಕಾ ಅಧ್ಯಕ್ಷರಾದ ಪ್ರಭು ದೊರೆ ಸುಂಬಡ , ಜೈ ಕ.ರ. ವೇ ನಗರ ಘಟಕದ ಅಧ್ಯಕ್ಷರಾದ ಮಡಿವಾಳ ಮೇಲಿನಮನಿ, ಭರತ್ ದೊರೆ ನಾಗಪ್ಪ ಸಜ್ಜನ್, ಗಂಗಾದರ ಕರಕಿಹಳ್ಳಿ, ಯಲ್ಲಾಲಿಂಗ ಹರನಾಳ್, ದೇವು ಯಡ್ರಾಮಿ, ಮಹೇಶ್ ಪಾಟೀಲ್ ಕಡಕೋಳ, ಪರಶುರಾಮ್ ಟಣಕೇದಾರ್ ಸುಂಬಡ, ಸಂತೋಷ ಹರನೂರ್, ಲಕ್ಷ್ಮಣ ಕರಂಡಿ ಸುಂಬಡ್ , ಮಾಂತು ಮರಾಠಿ ಸುಂಬಡ್, ಸಿದ್ದು ವಿಶ್ವಕರ್ಮ ಸುಂಬಡ್, ಸಚಿನ್ ಮಲ್ಕುಡಿ ಸುಂಬಡ ಹಾಗೂ ಯಡ್ರಾಮಿಯ ಸಾರ್ವಜನಿಕರು ಹೋರಾಟಗಾರರು ಈ ಹೋರಾಟದಲ್ಲಿ ಭಾಗವಹಿಸಿದ್ದರು.

–ವರದಿ ರಾಚೋಟಯ್ಯ ಹಿರೇಮಠ

## ಶಿಕ್ಷಕರ ದಿನಾಚರಣೆ ಪ್ರಯುಕ್ತ ಸನ್ಮಾನ



**ಕಲಬುರಗಿ/ ಯಡ್ರಾಮಿ :** ಶಿಕ್ಷಕರ ದಿನಾಚರಣೆಯನ್ನು ತಾಲ್ಲೂಕಿನ ಅಲ್ಲಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರಕಾರಿ ಪ್ರೌಢಶಾಲೆಯಲ್ಲಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು ಕೂಡಿಕೊಂಡು ಮುಖ್ಯ ಗುರುಗಳಿಗೆ, ಗುರುಮಾತೆಯರಿಗೆ ಸನ್ಮಾನಿಸಿದರು. ಗ್ರಾಮದ ಹಿರಿಯರಾದ ಶ್ರೀ ಶರಣಯ್ಯ ಹಿರೇಮಠ, ದೇವಿಂದ್ರಯ್ಯ ಹಿರೇಮಠ, ಪ್ರಭುಗೌಡ ಬಿರಾದಾರ, ಯಶ್ವಂತ್ ಗೌಡ ಬಿರಾದಾರ, ಗೊಲ್ಲಾಳ ಮಂದೇವಾಲ, ವಿನೋದ್ ಹಂಚಿನಾಳ, ಜೇವರ್ಗಿ ಪಿ. ಎಲ್. ಡಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಸಾಂಬಶಿವ ಎಂ. ಹಿರೇಮಠ ಇವರುಗಳು ಶಿಕ್ಷಕರನ್ನು ಸನ್ಮಾನಿಸಿ, ಗೌರವಿಸಿದರು.

ವರದಿ ರಾಚೋಟಯ್ಯ ಹಿರೇಮಠ




ರಾಜಸ್ಥಾನ ರಾಜ್ಯದ ಜೋಧಪುರದಲ್ಲಿ ಇತ್ತೀಚೆಗೆ ಅಖಿಲ ಭಾರತ ಕಾರ್ಯನಿರತ ಪತ್ರಕರ್ತರ ಸಂಘ ದೆಹಲಿ (ರಿ.) ಇವರ ಸಹಯೋಗದೊಂದಿಗೆ ಜರುಗಿದ **131** ನೇ ರಾಷ್ಟ್ರೀಯ ಪತ್ರಕರ್ತರ ಸಮಾವೇಶದಲ್ಲಿ " ಕರುನಾಡ ಕಂದ " ಪತ್ರಿಕೆ.

## ಮೆಹಫೀಲ್ –ಎ– ಮಿಲಾದ್ ಹಾಗೂ ಮದೀನಾ ಮಸ್ಜೀದ್ ಉದ್ಘಾಟನಾ ಸಮಾರಂಭ



ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ನರಸಾಪುರ ಗ್ರಾಮದಲ್ಲಿ ದಿ. 07/09/2025 ರಂದು ಮೆಹಫಿಲ್–ಎ–ಮಿಲಾದ್ ಕಾರ್ಯಕ್ರಮ ನೆರವೇರಿತು. ಮದೀನಾ ಮಸ್ಜೀದ್ ಅಹಲೆ ಸುನ್ನತ್ ಉಲ್ಲಾ ಜಮಾತ, ಮಸ್ಜೀದ್ ಉದ್ಘಾಟನೆ ಮಾಡಲಾಯಿತು. ಈ ಸಮಾರಂಭಕ್ಕೆ ಮೌಲಾನಾ ಗುಲಾಮ ಮುಸ್ತಫಾ ನೇಜ್ಮಿ (ಮುಫ್ತಿ) ಸಾ. ಕೆರೂರ, ಇಮಾಮ–ವ–ಖತಿಬ ಜನಾಬ ಮೊಹಮ್ಮದ ಶಫಿ ಖಾಜಿ ಕೊಣ್ಣೂರ, ಮೊಹಮ್ಮದ ತಯ್ಯಬ ಕೆರೂರ, ಮಕ್ತುಂ ಹುಸೇನ ಕೆರೂರ, ಸದ್ದಾಂ ಹುಸೇನ ಕೆರೂರ, ಜನಾಬ ಮಹಮ್ಮುದಸಾಹೇಬ ಖಾಜಿ ಕೊಣ್ಣೂರ, ಷ.ಬ್ರ.ಮರುಳಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ನರಸಾಪುರ, ಇಮಾಮಹುಸೇನ್ ಅಜ್ಜನವರು, ಅಕ್ಬರಸಾಬ್ ಯಾದವಾಡ, ಅಂಜುಮನ್ ಇಸ್ಲಾಮ್ ಕಮಿಟಿ ನರಸಾಪುರ, ಅಮೀನಾಸಾಹೇಬ ಸುಂಕದ, ರಾಜಾಮೊಹಮ್ಮದ ಭಾಗವಾನ ಬಾದಾಮಿ, ಎಮ್. ಕೆ. ಪಟ್ಟಣಶೆಟ್ಟಿ ಮಾಜಿ ಶಾಸಕರು ಬಾದಾಮಿ, ಮಹಾಂತೇಶ ಅಣ್ಣ ಮಮದಾಪುರ, ನರಸಾಪುರ ಗ್ರಾಮದ ಗುರು ಹಿರಿಯರು, ಸುತ್ತಮುತ್ತಲಿನ ಗ್ರಾಮದ ಗುರುಹಿರಿಯರು, ಯುವಕ ಮಿತ್ರರು ಮಹಿಳೆಯರು ಮುದ್ದು ಮಕ್ಕಳು, ಅಂಜುಮನ್ ಕಮಿಟಿಯ ಸರ್ವ ಸದಸ್ಯರು, ನೌ ಜವಾನ್ ಕಮಿಟಿಯ ಯುವಕ ಮಿತ್ರರು ಸೇರಿ ಈ ಸಮಾರಂಭವನ್ನು ಯಶಸ್ವಿಗೊಳಿಸಿದರು.

ವರದಿ : ಅಬ್ದುಲಸಾಬ ನಾಯ್ಕರ

ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16-09-2025 ಪುಟಗಳು:16

# ಬೆಳವಡಿ ಮಲ್ಲಮ್ಮಳ ಪ್ರಾಧಿಕಾರಕ್ಕೆ ಬೇಡಿಕೆ



**ಬೆಳಗಾವಿ /ಮಲ್ಲಮ್ಮನ ಬೆಳವಡಿ :** ವಿಶ್ವದಲ್ಲಿ ಪ್ರಪ್ರಥಮ ಮಹಿಳಾ ಸೈನ್ಯಕಟ್ಟಿದ ವೀರರಾಣಿ ಬೆಳವಡಿ ಮಲ್ಲಮ್ಮಳ ಪ್ರಾಧಿಕಾರಕ್ಕೆ ಬೇಡಿಕೆ ಮಲ್ಲಮ್ಮನಬೆಳವಡಿ ಗ್ರಾಮಸ್ಥರಿಂದ ಸನ್ಮಾನ್ಯ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಶ್ರೀ ಕೆ ಬಿ ಭಾಸ್ಕರ್ ಅವರಿಗೆ ವೀರರಾಣಿ ಬೆಳವಡಿ ಮಲ್ಲಮ್ಮ ಪ್ರಾಧಿಕಾರ ಬೇಡಿಕೆಗಾಗಿ ಮನವಿ ಸಲ್ಲಿಸಲಾಯಿತು. ಶ್ರೀಯುತ ಕೆ ಬಿ ಭಾಸ್ಕರ್ ಅವರು ರಾಣಿ ಮಲ್ಲಮ್ಮಳ ಮೂರ್ತಿಗೆ ಮಾಲಾರ್ಪಣೆ ಮಾಡಿ ಮನವಿ ಸ್ವೀಕರಿಸಿ ಪ್ರಾಧಿಕಾರ ಬೇಡಿಕೆ ವಿಷಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಕಾನೂನು ಸಲಹೆಗಾರರಾದ ಶ್ರೀಯುತ ಹಜರತ್‌ಅಲಿ ಗೊರವನಹಳ್ಳ ಬೆಳವಡಿ ಮಲ್ಲಮ್ಮಳ ಪ್ರಾಧಿಕಾರ ಹೋರಾಟ ಸಮಿತಿಯ ಅಧ್ಯಕ್ಷರು ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಚಂದ್ರಶೇಖರಯ್ಯ ಕಾರಿಮನಿ ಹೋರಾಟ ಸಮಿತಿ ಉಪಾಧ್ಯಕ್ಷ ಹಾಗೂ ಗ್ರಾಮ ಪಂಚಾಯತ್ ಸದಸ್ಯ ಬಿ ಜಿ ದೇಗಾವಿ ಹಾಜರಿದ್ದರು. ಸಾಮಾಜಿಕ ಕಾರ್ಯಕರ್ತ ಪ್ರಾಧಿಕಾರ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಹುಂಬಿ ಮಾತನಾಡಿ ಸನ್ಮಾನ್ಯ ಮುಖ್ಯಮಂತ್ರಿಗಳ ಮನವೊಲಿಸಿ, ಆದಷ್ಟು ಬೇಗನೆ ಪ್ರಾಧಿಕಾರ ಘೋಷಣೆ ಮಾಡುವಂತೆ ಶ್ರೀಯುತರಲ್ಲಿ ವಿನಂತಿಸಿದರು. ಈ ಸಂದರ್ಭದಲ್ಲಿ ಶ್ರೀ ರಾಚಯ್ಯ ಸ್ವಾಮಿಗಳು ರೊಟ್ಟೈಯ್ಯನವರ, ವಿಠಲ ಫಿಶೇ, ಪ್ರಕಾಶ್ ಕಾರಿಮನಿ, ಸುನಿಲ್ ವರ್ಣೇಕರ್, ಮಹಾಂತೇಶ್ ಕರಿಕಟ್ಟಿ, ಶ್ರೀ ರಾಜು ಬರಮಗೌಡ್ರ, ರಂಜಾನ್ ನದಾಫ್, ರೋಹಿತ್ ಕುಲಕರ್ಣಿ, ಹನುಮಂತ ಕಕ್ಕೈನವರ್, ಆನಂದ್ ದೇಗಾವಿ, ಗಂಗಪ್ಪ ರೇಷ್ಮೆ, ಸಯ್ಯದ್ ದಿಲುನಾಯ್ಕ ಹಾಜರಿದ್ದರು.

**ವರದಿ ಮಂಜು .ಎಮ್. ಚಿಕ್ಕಣ್ಣವರ**

# ಗ್ರಾಮ ಮಟ್ಟದಲ್ಲಿ ಎಚ್.ಐ.ವಿ/ ಏಡ್ಸ್ ಕುರಿತಂತೆ ಆರೋಗ್ಯ ಶಿಕ್ಷಣ ಕಾರ್ಯಕ್ರಮ



ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ದೊಡ್ಡ ಚಿನ್ನಹಳ್ಳಿಯಲ್ಲಿ ಎಚ್.ಐ.ವಿ/ ಏಡ್ಸ್ ಕುರಿತಂತೆ ಆರೋಗ್ಯ ಕಾರ್ಯಕ್ರಮವನ್ನು ದಿ. 8/10/2025 ರಂದು ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಡಿಯಲ್ಲಿ ಎಚ್.ಐ.ವಿ/ ಏಡ್ಸ್ ಎಂದರೇನು, ಹರಡುವಿಕೆ, ಮುಂಜಾಗ್ರತಾ ಕ್ರಮಗಳು , ಚಿಕಿತ್ಸಾಕ್ರಮಗಳ ಕುರಿತು ಮಾಹಿತಿ ನೀಡುತ್ತಾ ಸೋಂಕಿತ ವ್ಯಕ್ತಿಗೆ ಕಳಂಕ ಮತ್ತು ತಾರತಮ್ಯದ ಭಾವನೆ ತೋರಬಾರದು, ತಾಲೂಕು ಮಟ್ಟದಲ್ಲಿ ಆಪ್ತ ಸಮಾಲೋಚನೆ ಮತ್ತು ಚಿಕಿತ್ಸಾ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು ಎಂದರು.

ಈ ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾಕ್ಟರ್ ಜಯಸುಧಾ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ಅನಿತಾ ,ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ ಶ್ರೀ ಮತಿ ಜಯಮ್ಮ ,ಶ್ರೀ ಮತಿ ಕವಿತಾ ಆಶಾ ಮೆಂಟ-ರ್, ಪಳನಿ ಆರೋಗ್ಯ ನಿರೀಕ್ಷಣಾಧಿಕಾರಿ ಸೇರಿದಂತೆ ಆಶಾ ಕಾರ್ಯಕರ್ತೆಯರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

**ವರದಿ ನಾರಾಯಣ ಸ್ವಾಮಿ ಸಿ.**

# ಪ್ಲಾಸ್ಟಿಕ್ ವಸ್ತುಗಳ ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆ ನಿಷಿದ್ಧ



**ಬೆಳಗಾವಿ/ಬೈಲಹೊಂಗಲ :** ಪುರಸಭೆ ವ್ಯಾಪ್ತಿಯಲ್ಲಿ ಏಕಬಳಕೆ ಪ್ಲಾಸ್ಟಿಕ್ ವಸ್ತುಗಳ ಆಮದು, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯ ನಿಷೇಧದ ಸಂಬಂಧಿಸಿದಂತೆ ಪಟ್ಟಣದ ವ್ಯಾಪಾರಸ್ಥರ ಸಭೆಯನ್ನು ದಿ:04-09-2025 ರಂದು ಪುರಸಭೆಯ ಸಭಾಭವನದಲ್ಲಿ ಏರ್ಪಡಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ವಿಜಯ ಬೋಳನ್ನವರ ಅಧ್ಯಕ್ಷರು ಪುರಸಭೆ ಇವರು ಮಾತನಾಡಿ ಏಕಬಳಕೆ ಪ್ಲಾಸ್ಟಿಕ್ ವಸ್ತುಗಳ ಬಳಕೆಯಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದ್ದು, ಈಗಾಗಲೇ ಸರ್ಕಾರವು ಏಕಬಳಕೆ ಪ್ಲಾಸ್ಟಿಕ್ ವಸ್ತುಗಳನ್ನು ನಿಷೇಧಿಸಿದ್ದು, ಪ್ಲಾಸ್ಟಿಕ್ ಬಳಕೆಯಿಂದ ಉತ್ಪತ್ತಿಯಾಗುವ ಪ್ಲಾಸ್ಟಿಕ್ ತ್ಯಾಜ್ಯವು ಪಟ್ಟಣದಲ್ಲಿನ ಒಳಚರಂಡಿ ಮತ್ತು ಗಟಾರಗಳಲ್ಲಿ ಸೇರಿ ನೀರು ಸರಾಗವಾಗಿ ಹರಿಯದೆ ಪದೇ ಪದೇ ಚರಂಡಿಗಳು ಬ್ಲಾಕ್‌ಗಳಾಗಿ ಅವುಗಳ ನಿರ್ವಹಣೆಗೆ ತೊಂದರೆಯಾಗುತ್ತಿರುವುದರಿಂದ ವ್ಯಾಪಾರಸ್ಥರು ಕಡ್ಡಾಯವಾಗಿ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಆಮದು, ಸಂಗ್ರಹಣೆ, ವಿತರಣೆ ಮತ್ತು ಮಾರಾಟ ಮಾಡದೆ ಪರ್ಯಾಯ ವಸ್ತುಗಳನ್ನು ಮಾರಾಟ, ಬಳಕೆ ಮಾಡುವಂತೆ ತಿಳಿಸಿದರು.

ಈ ವೇಳೆ ಮಾತನಾಡಿದ ಶ್ರೀ ಸುರೇಶಗೌಡ ಎನ್. ಪಾಟೀಲ ಕಿರಿಯ ಆರೋಗ್ಯ ನಿರೀಕ್ಷಕರು ಇವರು ಮಾತನಾಡಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ (ತಿದ್ದುಪಡಿ) ನಿಯಮಗಳು, 2021ರ ಪ್ರಕಾರ ಬೈಲಹೊಂಗಲ ಪುರಸಭೆ ವ್ಯಾಪ್ತಿಯಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಪ್ಲಾಸ್ಟಿಕ್ ಭಿತ್ತಿ ಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್ ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚಗಳು, ಸ್ಟ್ರಾಗಳು, ಕ್ಲಿಂಗ್ ಫಿಲ್ಮ್, ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆಗಳು ಮತ್ತು ಥರ್ಮಾಕೋಲ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸನಿಂದ ತಯಾರಾದಂತಹ ವಸ್ತುಗಳು ಸೇರಿದಂತೆ ಏಕ ಬಳಕೆಯ ಪ್ಲಾಸ್ಟಿಕ್ ತಯಾರಿಕೆ, ಆಮದು, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ದಿನಾಂಕ: 01-07-2022 ರಿಂದ ಜಾರಿಗೆ ಬರುವಂತೆ ಕಡ್ಡಾಯವಾಗಿ ಈಗಾಗಲೇ ನಿಷೇಧಿಸಿದ್ದು, ಅದರಂತೆ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಮಾರಾಟ ಬಳಕೆ ಮಾಡದಂತೆ ತಿಳಿಸಿದರು ಹಾಗೂ ಒಂದು ವೇಳೆ ಪ್ಲಾಸ್ಟಿಕ್ ವಸ್ತುಗಳ ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆ ಕಂಡು ಬಂದಲ್ಲಿ ಜಪ್ತಿ ಮಾಡಿ ದಂಡ ವಿಧಿಸಿ ವಸೂಲಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ಬಿ. ಆಯ್. ಗುಡಿಮನಿ ಪ್ರ.ದ.ಸ. ಹಾಗೂ ಸಿಬ್ಬಂದಿಗಳು ಮತ್ತು ಪಟ್ಟಣದ ವ್ಯಾಪಾರಸ್ಥರು ಇದ್ದರು.

**ವರದಿ ಮಂಜು .ಎಮ್. ಚಿಕ್ಕಣ್ಣವರ**









ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16–09–2025 ಪುಟಗಳು:16

# ಕಣ್ಮರೆಯಾಗುತ್ತಿದೆ ಪರಿಸರ



ಕಾಲವು ಬದಲಾದ ಈ ಒಂದು ಸಮಯದಲ್ಲಿ
ಅಚ್ಚ ಹಸುರಿನ ಪರಿಸರ ಕಾಣೆಯಾಗಿದೆ
ಕೊಡಲಿ ಏಟು ತಿಂದ ಮರಗಳು
ಧರೆಯಲ್ಲಿ ಉರಳಿವೆ
ಖಗಾಮೃಗ ಪ್ರಾಣಿಗಳು ಕಾಡಿನಿಂದ ಹೊರ ಬರುತ್ತಲೇ ಇವೆ

ಮನುಷ್ಯ ಜನ್ಮವು ಇಷ್ಟು
ಸ್ವಾರ್ಥಿಯಾಗಿರುವನು ಇಲ್ಲಿ
ತನ್ನ ಸುಖ ಸಂಪತ್ತಿನ ಆಸೆಗಾಗಿ
ಕೊಳ್ಳಿ ಇಟ್ಟಿರುವನು ಪ್ರಕೃತಿಯ ಮಡಿಲಲ್ಲಿ
ಚಿಕ್ಕ ಚಿಕ್ಕ ಗಿಡ ನೆಡುವ ಸಮಯವಿಲ್ಲದೆ
ಕೃತಕ ಗಾಳಿಗೆ ಮಾರುಹೋಗಿರುವನು ಇವನಿಲ್ಲಿ

ಕಾಡುಗಳನ್ನು ನಾಶ ಮಾಡಿ ಮನೆಯ ಕಟ್ಟುವವರು ಇವರುಗಳೆಲ್ಲ
ನೈಸರ್ಗಿಕ ಗಾಳಿಗೆ ಕೊಳ್ಳಿ ಇಟ್ಟಿರುವೆವು ನಾವುಗಳೆಲ್ಲ
ಎಲ್ಲರೂ ಕೈಯ್ಯ ಕಟ್ಟಿಕೊಂಡು ಕುಳಿತರೆ ಪ್ರಯೋಜನವಿಲ್ಲ.
ಪ್ರಕೃತಿಯನ್ನು ಹಸಿರಾಗಿಸಲು ಒಂದೊಂದು ಗಿಡ ನೆಡಬೇಕು ನಾವುಗಳೆಲ್ಲ.

**– ಎಂ. ಚಂದ್ರಶೇಖರ ಚಾರಿ,**
**ಶಿಕ್ಷಕರು, ಚಿತ್ರದುರ್ಗ.**

# ರಾಜ್ಯ ಕಾಂಗ್ರೆಸ್ ಪಕ್ಷದ ಇಂಟಕ್ ವಿಭಾಗದ ಕಾರ್ಯದರ್ಶಿಯನ್ನಾಗಿ ರವೀಂದ್ರ ಬಾಡಗಿ ನೇಮಕ



**ಬಾಗಲಕೋಟೆ / ರಬಕವಿ – ಬನಹಟ್ಟಿ :** ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಇಂಟಕ್ ವಿಭಾಗದ ಅಧ್ಯಕ್ಷರಾದ ಡಾ. ಜಿ. ಸಂಜೀವ್ ರೆಡ್ಡಿ ಅವರ ಆದೇಶದ ಮೇರೆಗೆ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರ ಅನುಮೋದನೆಯ ಮೇರೆಗೆ, ರಾಜ್ಯ ಇಂಟಕ್ ವಿಭಾಗದ ಕಾರ್ಯದರ್ಶಿಯನ್ನಾಗಿ ಬಾಗಲಕೋಟೆ ಜಿಲ್ಲೆಯ ರಬಕವಿ – ಬನಹಟ್ಟಿ ತಾಲೂಕಿನ ಬನಹಟ್ಟಿ ನಗರದ ಯುವ ಮುಖಂಡ ರವೀಂದ್ರ ಈಶ್ವರಪ್ಪ ಬಾಡಗಿ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಹಾಗೂ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿ , ಕೂಡಲೇ ಅಧಿಕಾರವನ್ನು ವಹಿಸಿಕೊಂಡು. ರಾಜ್ಯದಲ್ಲಿ ಇಂಟಕ್ ಪರವಾಗಿ ಸಂಘವನ್ನು ರಚಿಸಿ ಸದಸ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೊಂದಾಯಿಸಿ, ಪಕ್ಷದ ಮುಖಂಡರ ಮಾರ್ಗದರ್ಶನ ಹಾಗೂ ಸ್ಥಳೀಯ ನಾಯಕರ ಸಹಕಾರದೊಂದಿಗೆ ನೀಡಲಾಗಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ, ಪಕ್ಷದ ಸಂಘಟನೆಗೆ ಶ್ರಮಿಸುವಂತೆ ಸೂಚಿಸಿದ್ದಾರೆ.

**ವರದಿ ಮಹಿಬೂಬ ಬಾರಿಗಡ್ಡಿ**

# ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮದಲ್ಲಿ ನೂತನ ಸರಕಾರಿ ಪ್ರೌಢಶಾಲೆ ಉದ್ಘಾಟನೆ




**ಬೆಳಗಾವಿ:** ಅಥಣಿ ತಾಲೂಕಿನ ಖವಟಕೊಪ್ಪ ಗ್ರಾಮದಲ್ಲಿ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ನೂತನವಾಗಿ ನಿರ್ಮಿಸಲಾದ ಸರಕಾರಿ ಪ್ರೌಢಶಾಲೆಯನ್ನು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಅಥಣಿಯ ಜನಪ್ರಿಯ ಶಾಸಕರಾದ ಶ್ರೀ ಲಕ್ಷ್ಮಣ ಸವದಿ ಅವರು ಉದ್ಘಾಟಿಸಿ ಮಾತನಾಡಿ " ಗ್ರಾಮೀಣ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರಕಬೇಕು. ನಮ್ಮ ಊರ ಮಕ್ಕಳು ನಗರದ ಮಕ್ಕಳಂತೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾಗಬೇಕು, ಅದಕ್ಕಾಗಿ ಸರ್ಕಾರ ಗ್ರಾಮೀಣ ಪ್ರದೇಶಗಳಿಗೂ ಸಮಾನ ಸೌಲಭ್ಯ ಒದಗಿಸುತ್ತಿದೆ. ಈ ಶಾಲೆ ಮಕ್ಕಳ ಭವಿಷ್ಯಕ್ಕೆ ಬೆಳಕಾಗಬೇಕು, ಶಿಕ್ಷಣವೇ ಸಮಾಜದ ನಿಜವಾದ ಶಕ್ತಿ, ಬಡವರಿಗೂ ಬಾಗಿಲು ತೆರೆಸುವ ಬೃಹತ್ ಆಯುಧ " ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪ. ಪೂ. ಶ್ರೀ ಸಿದ್ದಯೋಗಿ ಅಮರೇಶ್ವರ ಮಹಾರಾಜರು ಕೌಲಗುಡ್ಡ ಹಣಮಾಪುರ, ಶ್ರೀ ವಿಠ್ಠಲ ಕಾಂಬಳೆ, ಶ್ರೀ ಶಾಂತಿನಾಥ ನಂದೇಶ್ವರ, ಶ್ರೀ ಮಹಾದೇವ ಚೌಗಲೆ, ಶ್ರೀ ಆನಂದ ಕುಲಕರ್ಣಿ, ಶ್ರೀ ವಿವೇಕ ನಾರಗೊಂಡ, ಶ್ರೀ ಎ.ಎಂ. ಖೋಬ್ರಿ, ಶ್ರೀ ಅನಂತ ಬಸರಿಕೊಡಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ.ಆರ್. ಮುಂಜೆ ಹಾಗೂ ಅಥಣಿ ಪುರಸಭೆ ಸದಸ್ಯರು, ಶಾಲಾ ಶಿಕ್ಷಕ – ಶಿಕ್ಷಕಿಯರು, ವಿಧ್ಯಾರ್ಥಿ–ವಿಧ್ಯಾರ್ಥಿನಿಯರು ಹಾಗೂ ಮಾದ್ಯಮ ಪ್ರತಿನಿಧಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಕ್ಕಳಿಗೆ ಪ್ರೇರಣಾದಾಯಕ ಸಂದೇಶ ನೀಡಿ " ಶಿಕ್ಷಣದ ಮೂಲಕವೇ ನಮ್ಮ ಕನಸುಗಳನ್ನು ಸಾಕಾರಗೊಳಿಸಬಹುದು. ಪ್ರತಿಯೊಬ್ಬ ವಿದ್ಯಾರ್ಥಿಯೂ ಬಾಳಿನಲ್ಲಿ ದೊಡ್ಡ ಸ್ಥಾನಕ್ಕೇರುವುದು ಸಾಧ್ಯ. ಶಾಲೆಯು ಕೇವಲ ಓದುವ ಜಾಗವಲ್ಲ, ಅದು ವ್ಯಕ್ತಿತ್ವ ಬೆಳೆಸುವ ಮಂದಿರವಾಗಿದೆ " ಎಂದು ಗಣ್ಯರು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ, ಶಾಲಾ ಆವರಣದಲ್ಲಿ ಹಸಿರು ಸಂಸ್ಕೃತಿ ಬೆಳಸುವ ಉದ್ದೇಶದಿಂದ ವೃಕ್ಷಾರೋಪಣೆಯೂ ನೆರವೇರಿತು.

**ವರದಿ ವಿಠ್ಠಲ ಖೋಕಾಟೆ**

# ನವೆಂಬರ್ ತಿಂಗಳಿನಲ್ಲಿ ಜರುಗುವ ಐತಿಹಾಸಿಕ ಕಾರ್ಯಕ್ರಮಕ್ಕೆ ಕರೆ ಕೊಟ್ಟ ನಾಗತಾಣ ಶ್ರೀಗಳು



ಶ್ರೀ ಷ ಬ್ರ ಸೋಮೇಶ್ವರ ಶಿವಾಚಾರ್ಯರು, ನಾಗತಾಣ ಹಿರೇಮಠ ಸಗರ

**ಯಾದಗಿರಿ/ ಶಹಾಪುರ :** ತಾಲೂಕಿನ ಸಗರದ ನಾಗತಾಣ ಹಿರೇಮಠದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ವರ್ತಮಾನ ಹಾಗೂ ದ್ವಾದಶಿ ಶ್ರೀಗಳ ಪಟ್ಟಾಧಿಕಾರ ಮತ್ತು ನೂತನ ಕಟ್ಟಡ ಲೋಕಾರ್ಪಣೆ ಕಾರ್ಯಕ್ರಮಗಳ ಕುರಿತಾದ ಪೂರ್ವಭಾವಿ ಸಭೆ ಇತ್ತೀಚೆಗೆ ಜರುಗಿತು.

ಈ ಸಭೆಯ ದಿವ್ಯ ಸಾನಿಧ್ಯ ವಹಿಸಿ ಮಾತಾನಾಡಿದ ನಾಗತಾಣ ಹಿರೇಮಠದ ಪರಮ ಪೂಜ್ಯ ಶ್ರೀ ಸೋಮೇಶ್ವರ ಶಿವಾಚಾರ್ಯರು ನವೆಂಬರ್ ತಿಂಗಳಿನಲ್ಲಿ 2 ರಿಂದ 20 ನೇಯ ತಾರೀಖಿನ ವರೆಗೆ ಜರುಗುವ ರಂಭಾಪುರಿ ಶ್ರೀಗಳ ಅಡ್ಡ ಪಲ್ಲಕ್ಕಿ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಶ್ರೀ ಮಠದ ಭಕ್ತರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕರೆ ನೀಡಿದರು.

ಈ ಪೂರ್ವಭಾವಿ ಸಭೆಯಲ್ಲಿ ವೇ. ಮಡಿವಾಳಯ್ಯ ಶಾಸ್ತ್ರಿಗಳು, ಮಲ್ಲಿಕಾರ್ಜುನ ಹಿರೇಮಠ, ಶಿವಾನಂದ ಬೂದಿ, ಆನಂದ ಬೂದಿ, ಭದ್ರಯ್ಯ ಸ್ವಾಮಿ ಗದ್ವಾಲ್, ಶಂಕ್ರಯ್ಯಸ್ವಾಮಿ ಸಾಲಿಮಠ, ವಿಜಯ ಹಿರೇಮಠ, ಶಿವಕುಮಾರ ಗದ್ವಾಲ್, ರವಿ ಅಡ್ಕಿ, ರವಿ ಪೋತುಲ್, ಬನದೇಶ ವಸ್ತ್ರದ, ವಿನಾಯಕ ಜನಾರ್ಧನ ಸೇರಿದಂತೆ ಗ್ರಾಮದ ಸರ್ವಸದ್ಭಕ್ತರು ಉಪಸ್ಥಿತರಿದ್ದರು.

**ವರದಿ: ಜಗದೀಶ್ ಕುಮಾರ್ ಭೂಮಾ**

# ಸಹ್ಯಾದ್ರಿ ಅಡಿಕೆ ಬೆಳೆಗಾರರ ಮಾರಾಟ ಸಹಕಾರ ಸಂಘದ ಸರ್ವ ಸದಸ್ಯರ ಸಭೆ



**ಶಿವಮೊಗ್ಗ/ ತೀರ್ಥಹಳ್ಳಿ:** ಸಹ್ಯಾದ್ರಿ ವಿವಿದೋದ್ದೇಶ ಅಡಿಕೆ ಬೆಳೆಗಾರರ ಮಾರಾಟ ಸಹಕಾರ ಸಂಘ ನಿಯಮಿತ ಇದರ 22ನೇ ವರ್ಷದ ಸರ್ವ ಸದಸ್ಯರ ಸಭೆಯು ಶಾಂತವೇರಿ ಗೋಪಾಲಗೌಡ ರಂಗ ಮಂದಿರ ದಲ್ಲಿ ಸಂಘದ ಅಧ್ಯಕ್ಷ ಶ್ರೀ ಬಸವಾನಿ ವಿಜಯದೇವ ಇವರ ಅಧ್ಯಕ್ಷತೆಯಲ್ಲಿ ವಿವಿಧ ದಾಖಲಾತಿಗಳ ಮಂಡನೆಯೊಂದಿಗೆ ವೈಭವದಿಂದ ಜರುಗಿತು.

ಶಿವಮೊಗ್ಗ ಸಂಸದ ಶ್ರೀ ಬಿ. ವೈ. ರಾಘವೇಂದ್ರ ಅವರು ಮುಖ್ಯ ಅತಿಥಿಯಾಗಿ ಆಗಮಿಸಿ ಶುಭಾಶಂಸನೆ ಭಾಷಣ ನಡೆಸಿದರು. ಈ ಸಂದರ್ಭದಲ್ಲಿ ಅಡಿಕೆ ಬೆಳೆಗಾರರ ವಿವಿಧ ಸಮಸ್ಯೆಗಳನ್ನು ಆಲಿಸಿ ಸಂದರ್ಭ ತಕ್ಕಂತೆ ಮಾತನಾಡಿದರು.

ಇಂಡಿಯನ್ ದಿವ್ಯಾಂಗ್ ಎಂಪವರ್ಮೆಂಟ್ ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷ ಶ್ರೀ ಕೊಡಕ್ಕಲ್ ಶಿವಪ್ರಸಾದ್ ಅವರು ಸಂಸದ ಶ್ರೀ ಬಿ. ವೈ. ರಾಘವೇಂದ್ರ ಅವರಿಗೆ ಇದೇ ಸಂಧರ್ಭದಲ್ಲಿ ರೈಲ್ವೆ ಇಲಾಖೆಯಲ್ಲಿ ವಿಕಲಚೇತನರಿಗೆ ರಿಯಾಯತಿ ಪ್ರಯಾಣದ ಪಾಸಿನಲ್ಲಿ ಆಗುತ್ತಿರುವ ಅನ್ಯಾಯವನ್ನು ಸರಿ ಪಡಿಸಲು ಮನವಿ ಮಾಡಿದರು.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಶ್ರೀಮತಿ ಚಂದ್ರಕಲಾ, ನಿರ್ದೇಶಕರಾದ ಶ್ರೀ ಹೆಚ್. ವಿ. ಅಜಿತ್ ಹೊಳೆಕೊಪ್ಪ, ಹೆಚ್. ವಿ. ವಿಜೇತ್ ಮುಂತಾದವರು ಉಪಸ್ಥಿತರಿದ್ದರು.

**ವರದಿ ಕೊಡಕ್ಕಲ್ ಶಿವಪ್ರಸಾದ್**

ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16–09–2025 ಪುಟಗಳು:16

# ಬಂಧನಕ್ಕೆ ಒಳಪಟ್ಟ ವ್ಯಕ್ತಿಗೆ ಇರುವಂತಹ ಹಕ್ಕುಗಳು

ಹುಟ್ಟುತ್ತಲೇ ಯಾರೂ ಅಪರಾಧಿಗಳಾಗಿ ಹುಟ್ಟುವುದಿಲ್ಲ, ಸಮಯ – ಸಂದರ್ಭ, ಸುತ್ತ ಮುತ್ತಲಿನ ವಾತಾವರಣ, ಅತಿಯಾದ ಆಸೆ, ಅತಿ ಬೇಗನೆ ಹಣ ಮಾಡುವ ಉದ್ದೇಶ, ಅತಿಯಾದ ಹೆಣ್ಣು – ಮಣ್ಣು – ಹೊನ್ನಿನ ಮೇಲಿನ ವ್ಯಾಮೋಹಗಳು ಮನುಷನಲ್ಲಿ ಅಪರಾಧಿಕ ಮನಸ್ಸನ್ನು ಸೃಷ್ಟಿಮಾಡುತ್ತದೆ ಹಾಗೂ ಅಪರಾಧಿಕ ಕೃತ್ಯಗಳನ್ನು ಎಸಗುವಂತೆ ಮಾಡಿಬಿಡುತ್ತದೆ ಮತ್ತು ಇನ್ನೂ ಹಲವು ರೀತಿಯಲ್ಲಿ ಅಂದರೆ ತನಗಾದ ಅನ್ಯಾಯ ಹಾಗೂ ಅನ್ಯಾಯದ ವಿರುದ್ಧ ಸೇಡಿನ ಹೋರಾಟದಲ್ಲಿ ಅಪರಾಧ ಆಗಿಬಿಡುತ್ತದೆ, ಅಪರಾಧ ಕೃತ್ಯವಾದ ಕೂಡಲೇ ಆ ಕೃತ್ಯದ ಕುರಿತಾಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ಎಫ್ ಐ ಆರ್ ಆಗಿ ದಾಖಲು ಆದರೆ, ಕೂಡಲೇ ಆ ಅಪರಾಧ ಕೃತ್ಯ ಮಾಡಿದ್ದಾನೆ ಎನ್ನಲಾದ ಆರೋಪಿಯ ಬಂಧನ ಆಗುತ್ತದೆ, ಬಂಧನಕ್ಕೆ ಕಾರಣ ಏನೇ ಇರಲಿ ಭಾರತ ಸಂವಿಧಾನ ಬಂಧಿತನಾದ ವ್ಯಕ್ತಿಗೆ ಕೆಲವು ಹಕ್ಕುಗಳನ್ನು ಕಾದಿರಿಸಿದೆ, ಆ ಹಕ್ಕುಗಳನ್ನು ಈ ಅಂಕಣದಲ್ಲಿ ಚರ್ಚಿಸಲಿದ್ದೇನೆ.

ಈಗ ನಿಮ್ಮ ಮನಸ್ಸಿನಲ್ಲೂ ಹಲವು ಪ್ರಶ್ನೆಗಳು ಹುಟ್ಟಬಹುದು, ಏನು " ಬಂಧನವಾದವನಿಗೂ ಹಕ್ಕುಗಳಿವೆಯೇ ಎಂದು " ಹೌದು ಬಂಧಿತ ವ್ಯಕ್ತಿಗೂ ಕೆಲವು ಹಕ್ಕುಗಳನ್ನು ನೀಡಲಾಗಿದೆ, ಕಾರಣವೇನೆಂದರೆ ಹಲವಾರು ಬಾರಿ ನಿರಪರಾಧಿ ಅಥವಾ ತಪ್ಪು ಮಾಡದವನ ಬಂಧನ ಆಗಿಬಿಡುವ ಸಾಧ್ಯತೆ ಇರುತ್ತದೆ ಹಾಗೂ ನಿರಪರಾಧಿಯ ಬಂಧನ ಆಗಿರುವಂತಹ ಹಲವು ಉದಾಹರಣೆಗಳನ್ನು ಕಾಣಬಹುದಾಗಿದೆ ಹಾಗೂ ನಮ್ಮ ನ್ಯಾಯಾಂಗದಲ್ಲಿ ಒಂದು ಮಾತಿದೆ ನೂರು ಜನ ಅಪರಾಧಿಗಳಿಗೆ ಶಿಕ್ಷೆ ಆಗದಿದ್ದರೂ – ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂದು, ಈ ಪ್ರಕಾರವಾಗಿ ನಿರಪರಾಧಿಗಳಿಗೆ ಶಿಕ್ಷೆ ಆಗಬಾರದು ಹಾಗೂ ಅಮಾಯಕರನ್ನು ಕಾಪಾಡುವ ಹಿತದೃಷ್ಟಿಯಿಂದ ಬಂಧಿತ ವ್ಯಕ್ತಗೂ ಕೆಲವು ಹಕ್ಕುಗಳನ್ನು ಕಾದಿರಿಸಲಾಗಿದೆ, ಆ ಹಕ್ಕುಗಳು ಯಾವುವು ಎಂದು ನೋಡೋಣ.

**ಬಂಧಿತನ ಪ್ರಮುಖ ಹಕ್ಕುಗಳೆಂದರೆ:** ಭಾರತೀಯ ಸಂವಿಧಾನದ 22 ನೇ ವಿಧಿಯ ಅಗತ್ಯ ಸುರಕ್ಷತೆಗಳನ್ನು ಒದಗಿಸುವ ಮೂಲಕ ಬಂಧಿತ ವ್ಯಕ್ತಿಗೆ ಹಕ್ಕುಗಳನ್ನು ಒದಗಿಸುತ್ತದೆ ಹಾಗೂ ಬಂಧಿತನಿಗೆ – ಬಂಧನಕ್ಕೆ ಕಾರಣಗಳನ್ನು ತಿಳಿದುಕೊಳ್ಳುವ ಹಕ್ಕು, ಬಂಧನ ಕುರಿತಾಗಿ ತಾನು ಇಚ್ಛೆ ಪಟ್ಟವರಿಗೆ ತಿಳಿಸುವ ಹಕ್ಕು, ವೈದ್ಯಕೀಯ ತಪಾಸಣೆಯ ಹಕ್ಕು, ಅನ್ವಯವಾದರೆ ವಾರಂಟ್ ನೋಡುವ ಹಕ್ಕು, ತಮ್ಮ ಆಯ್ಕೆಯ ವಕೀಲರನ್ನು ಸಂಪರ್ಕಿಸುವ ಹಕ್ಕು ಮತ್ತು ಬಂಧನವಾದ 24 ಗಂಟೆಗಳ ಒಳಗೆ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸುವ ಹಕ್ಕುಗಳನ್ನು ನೀಡಲಾಗಿದೆ.

**ಬಂಧನದ ನಂತರ ಪೊಲೀಸ್ ಅಧಿಕಾರಿಗಳು ನಿರ್ವಹಿಸಬೇಕಾದ ಪ್ರಕ್ರಿಯೆಗಳು ಈ ರೀತಿ ಇರುತ್ತದೆ.**

- ಬಂಧನವನ್ನು ನಡೆಸುವ ಮತ್ತು ಬಂಧಿತ ವ್ಯಕ್ತಿಯ ವಿಚಾರಣೆಯನ್ನು ನಿರ್ವಹಿಸುವ ಪೊಲೀಸ್ ಸಿಬ್ಬಂದಿಗಳು ನಿಖರವಾದ, ಗೋಚರಿಸುವ ಮತ್ತು ಸ್ಪಷ್ಟವಾದ ಗುರುತಿನ ಚೀಟಿ ಹೊಂದಿರಬೇಕು.
- ಬಂಧನವನ್ನು ನಡೆಸುವ ಪೊಲೀಸ್ ಅಧಿಕಾರಿ ಬಂಧನದ ಸಮಯದಲ್ಲಿ ಬಂಧನದ ಜ್ಞಾಪಕ ಪತ್ರವನ್ನು ಸಿದ್ಧಪಡಿಸಿರಬೇಕು ಮತ್ತು ಅಂತಹ ಜ್ಞಾಪಕ ಪತ್ರವನ್ನು ಕನಿಷ್ಠ ಒಬ್ಬ ಸಾಕ್ಷಿಯಿಂದ ದೃಢೀಕರಿಸಬೇಕು, ಆ ಸಾಕ್ಷಿಯು ಬಂಧನಕ್ಕೊಳಗಾದವರ ಕುಟುಂಬದ ಸದಸ್ಯರಾಗಿರಬಹುದು ಅಥವಾ ಬಂಧನ ಮಾಡಿದ ಪ್ರದೇಶದ ಗೌರವಾನ್ವಿತ ವ್ಯಕ್ತಿಯಾಗಿರಬಹುದು. ಅದಕ್ಕೆ ಬಂಧನಕ್ಕೊಳಗಾದವರು ಸಹಿ ಮಾಡಬೇಕು ಮತ್ತು ಬಂಧನದ ಸಮಯ ಮತ್ತು ದಿನಾಂಕ ಸ್ಪಷ್ಟವಾಗಿ ಒಳಗೊಂಡಿರಬೇಕು.





**ಕಿರಣ್.ಕೆ.ಟಿ ವಕೀಲರು**
**ಅಂಕಣ**
**ನಿಮ್ಮ ಬದುಕಿಗೆ ಕಾನೂನು ಕವಚ**

- ಪೊಲೀಸ್ ಠಾಣೆ ಅಥವಾ ವಿಚಾರಣಾ ಕೇಂದ್ರ ಅಥವಾ ಇತರ ಲಾಕ್–ಅಪ್ ನಲ್ಲಿ ಬಂಧನದಲ್ಲಿಡಲ್ಪಟ್ಟ ವ್ಯಕ್ತಿಯನ್ನು, ಒಬ್ಬ ಸ್ನೇಹಿತ ಅಥವಾ ಸಂಬಂಧಿ ಅಥವಾ ಅವನಿಗೆ ತಿಳಿದಿರುವ ಅಥವಾ ಅವನ ಯೋಗಕ್ಷೇಮದಲ್ಲಿ ಆಸಕ್ತಿ ಹೊಂದಿರುವ ಇತರ ವ್ಯಕ್ತಿಯನ್ನು ಸಾಧ್ಯವಾದಷ್ಟು ಬೇಗ ಅವರನ್ನು ಬಂಧಿಸಲಾಗಿದೆ ಮತ್ತು ನಿರ್ದಿಷ್ಟ ಸ್ಥಳದಲ್ಲಿ ಬಂಧಿಸಲಾಗಿದೆ ಎಂದು ತಿಳಿಸಬೇಕಾಗಿರುತ್ತದೆ. ಬಂಧಿತ ವ್ಯಕ್ತಿಯನ್ನು ಬಂಧಿಸಿದ ಅಥವಾ ಬಂಧಿಸಿದ ತಕ್ಷಣ ತನ್ನ ಬಂಧನ ಅಥವಾ ಬಂಧನದ ಬಗ್ಗೆ ಯಾರಿಗಾದರೂ ತಿಳಿಸುವ ಹಕ್ಕಿನ ಬಗ್ಗೆ ಅವನಿಗೆ ತಿಳಿಸಬೇಕು.
- ಬಂಧಿತ ವ್ಯಕ್ತಿಯನ್ನು ಇರಿಸಲಾದ ಸ್ಥಳದಲ್ಲಿ ಅಂದರೆ ಪೊಲೀಸ್ ಠಾಣೆಯಲ್ಲಿನ ಡೈ–ರಿಯಲ್ಲಿ ವ್ಯಕ್ತಿಯ ಬಂಧನದ ಬಗ್ಗೆ ನಮೂದು ಮಾಡಬೇಕು ಹಾಗೂ ಬಂಧನ ಕುರಿತಾಗಿ ಸಂಬಂಧಿ ಅಥವಾ ಸ್ನೇಹಿತ ಅಥವಾ ಕುಟುಂಬದ ವ್ಯಕ್ತಿಗೆ ತಿಳಿಸಿರುವ ಕುರಿತಂತೆಯೂ ನಮೂದು ಮಾಡಬೇಕು.
- ಬಂಧನದ ಸಮಯದಲ್ಲಿ ಬಂಧಿತ ವ್ಯಕ್ತಿಯ ವೈದ್ಯಕೀಯ ಪರೀಕ್ಷೆ ಮಾಡಬೇಕು ಮತ್ತು ಅವನ/ಅವಳ ದೇಹದ ಮೇಲೆ ಯಾವುದೇ ದೊಡ್ಡ ಮತ್ತು ಸಣ್ಣ ಗಾಯಗಳಿದ್ದರೆ, ಆ ಸಮಯದಲ್ಲಿ ದಾಖಲಿಸಬೇಕು. " ವೈದ್ಯಕೀಯ ತಪಾಸಣಾ ಪತ್ರ" ಕ್ಕೆ ಬಂಧಿತ ಮತ್ತು ಬಂಧನವನ್ನು ಜಾರಿಗೊಳಿಸುವ ಪೊಲೀಸ್ ಅಧಿಕಾರಿ ಇಬ್ಬರೂ ಸಹಿ ಮಾಡಬೇಕು ಮತ್ತು ಅದರ ಪ್ರತಿಯನ್ನು ಬಂಧಿತನಿಗೆ ಒದಗಿಸಬೇಕು.
- ಬಂಧನದ ಸಮಯದಲ್ಲಿ ಬಂಧನಕ್ಕೊಳಗಾದ ವ್ಯಕ್ತಿಗೆ ತನ್ನ ವಕೀಲರನ್ನು ಭೇಟಿ ಮಾಡಲು ಅನುಮತಿ ನೀಡಬೇಕು ಹಾಗೂ ವಕೀಲರನ್ನು ನೇಮಕ ಮಾಡಿಕೊಳ್ಳಲು ಹಣಕಾಸಿನ ಸಾಮರ್ಥ್ಯವಿಲ್ಲದಿದ್ದರೆ ಕಾನೂನು ಸೇವಾ ಪ್ರಾಧಿಕಾರದಿಂದ ಉಚಿತ ಕಾನೂನು ನೆರವನ್ನು ಪಡೆಯಲು ಅವಕಾಶ ಮಾಡಿಕೊಡಬೇಕು.
- ಬಂಧಿತನನ್ನು ಬಂಧನವಾದ 24 ಗಂಟೆಗಳ ಒಳಗೆ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಬೇಕಾಗಿರುತ್ತದೆ.
- ಮೇಲೆ ತಿಳಿಸಲಾದ ಬಂಧನದ ಜ್ಞಾಪಕ ಪತ್ರ ಸೇರಿದಂತೆ ಎಲ್ಲಾ ದಾಖಲೆಗಳ ಪ್ರತಿಗಳನ್ನು ಮ್ಯಾಜಿಸ್ಟ್ರೇಟ್‌ಗೆ ಕಳುಹಿಸಬೇಕು.

# ಕಂಪ್ಲಿಯಲ್ಲಿ ಈದ್ ಮಿಲಾದ್: ಸಮತ್ವದ ಸಂದೇಶ ಸಾರಿದ ಪ್ರವಾದಿ

**ಬಳ್ಳಾರಿ / ಕಂಪ್ಲಿ :** " ಈದ್ ಮಿಲಾದ್ " ಹಬ್ಬವನ್ನು ಕಂಪ್ಲಿ ಪಟ್ಟಣವನ್ನೊಳಗೊಂಡಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮುಸ್ಲಿಂ ಬಾಂಧವರು ಬೃಹತ್ ಮೆರವಣಿಗೆ ಮೂಲಕ ಶ್ರದ್ಧೆ ಭಕ್ತಿಗಳಿಂದ ಅದ್ದೂರಿಯಿಂದ ಆಚರಿಸಿದರು. ಇಸ್ಲಾಂ ಧರ್ಮದ ಮಹಾನ್ ಮಾನವತಾವಾದಿ ಪ್ರವಾದಿ ಮಹಮ್ಮದ್ ಪೈಗಂಬರರ 1500 ನೇ ಜನ್ಮದಿನಾಚರಣೆ ಅಂಗವಾಗಿ ಮೆಕ್ಕಾ ಮದೀನಗಳ ಸ್ತಬ್ಧ ಚಿತ್ರಗಳು ಗಮನ ಸೆಳೆದವು. ಕೋಟೆಯ 13ನೇ ವಾರ್ಡ್ ನ ಝುಂಡೆ ಕಟ್ಟೆಯಿಂದ ಹಳೇ ಪೋಲಿಸ್ ಠಾಣೆ, ಸಂತೆ ಮಾರುಕಟ್ಟೆ, ಹಳೇ ಬಸ್‌ನಿಲ್ದಾಣ, ಅಂಬೇಡ್ಕರ್ ಸರ್ಕಲ್, ನಡವಡಲ ಮಸೀದಿ ಮೂಲಕ ಗಂಗಾವತಿ ರಸ್ತೆಯ ದರ್ಗಾದಲ್ಲಿ ಗಣ್ಯರನ್ನು ಸನ್ಮಾನಿಸಿ ಸಿಹಿ ವಿತರಿಸಿ ಸಂಪನ್ನಗೊಂಡಿತು .

ಧರ್ಮಗುರುಗಳಾದ ಖಾನ್ □ಕಾ □ ಯೇ – ದಿವಾನ್‌ಖಾನಾದ ಸೈಯ್ಯದ್ ಷಾ ಅಬುಲ್ ಹಸನ್ ಖಾದ್ರಿ ಉರ್ಫ್ ಆಜಂ ಪಾಷ ಸಾಹೇಬ್ ಸಜ್ಜಾದೆ ನಶೀನ್ ಮಾತನಾಡಿ 21ನೇ ಶತಮಾನವೂ ಸೇರಿದಂತೆ ಜಗತ್ತು ಸರ್ವ ಕಾಲಗಳಲ್ಲೂ ಸಮಾಜ ಎದುರಿಸುತ್ತಾ ಬಂದ ಮತ್ತು ಬರುತ್ತಿರುವ ಅತೀ ದೊಡ್ಡ ಸವಾಲು ಅಸಮಾನತೆ. ಪ್ರವಾದಿ ಮಹಮ್ಮದರು ಈ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿದರು. ಮಸೀದಿಯಲ್ಲಿ ಜಾತಿ–ಪಂಥಗಳ ಬಡವ–ಶ್ರೀಮಂತರೆಂಬ ಭೇದವಿಲ್ಲದೆ ಎಲ್ಲರೂ ಭುಜಕ್ಕೆ ಭುಜ ತಾಗಿಸಿ ಸಾಲಾಗಿ ನಿಂತು ಐದು ಬಾರಿಯ ನಮಾಜ್‌ನ್ನು ಕಡ್ಡಾಯಗೊಳಿಸಿದರು. ಅನ್ಯಾಯ, ದುರ್ಬಲರ ನಾಶ, ಅಸಮಾನತೆ, ಅಸೂಯೆ, ಹಿಂಸಾಚಾರ, ಅಂಧಾನುಕರಣೆ, ಅನೈತಿಕತೆ ಮತ್ತು ಅನಿಷ್ಟ ಆಚರಣೆಗಳನ್ನು ಮಟ್ಟಹಾಕಲೆಂದು ಜನ್ಮತಾಳಿದವರು ಪೈಗಂಬರರು. ಮಹಾತ್ಮರ ಜನ್ಮದಿನಾಚರಣೆಯನ್ನು ನಾವುಗಳು ಆಚರಿಸದರಷ್ಟೇ ಸಾಲದು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಆಶೀರ್ವಚನ ನೀಡಿದರು.





ಈ ಸಂದರ್ಭದಲ್ಲಿ ಮುಸ್ಲಿಂ ಧರ್ಮಗುರುಳಾದ ಸೈಯದ್ ಷಾ ಅಬು ತರಾಬ್ ಖಾದ್ರಿ, ಸೈಯದ್ ಷಾ ಚಾಂದ್ ಪಾಷಾ ಖಾದ್ರಿ, ಸೈಯದ್ ಷಾ ಡಾ. ನೂರ್ ಅಹ್ಮದ್ ಖಾದ್ರಿ, ಸೈಯದ್ ಷಾ ಉಮೇಸ್ ಸಾಹೇಬ್ ಖಾದ್ರಿ, ಹಾಜಿ ಜಿಯಾವುದ್ದೀನ್ ರಿಜ್ವೀ ಉಪಸ್ಥಿತರಿದ್ದರು.

ಇದೇ ವೇಳೆ ಶಾಸಕರಾದ ಜೆ. ಎನ್. ಗಣೇಶ್, ಕಂಪ್ಲಿ ಪುರಸಭೆ ಅಧ್ಯಕ್ಷ ಭಟ್ಟ ಪ್ರಸಾದ್, ಎಪಿಎಂಸಿ ಅಧ್ಯಕ್ಷ ಹಬೀಬ್ ರೆಹಮಾನ್, ಪುರಸಭೆ ಉಪಾಧ್ಯಕ್ಷ ಎಂ. ಉಸ್ಮಾನ್ ಮೆರವಣಿಗೆಯಲ್ಲಿ ಭಾಗವಹಿಸಿ ಸನ್ಮಾನವನ್ನು ಸ್ವೀಕರಿಸಿ, ಎಲ್ಲಾ ಮುಸ್ಲಿಂ ಸಮುದಾಯದವರಿಗೆ ಹಬ್ಬದ ಶುಭಾಷಯಗಳನ್ನು ಕೋರಿದರು.

ಈ ಸಂದರ್ಭದಲ್ಲಿ ಎಲ್ಲಾ ಮಸೀದಿಗಳ ಇಮಾಮ್‌ರವರು ಮತ್ತು ಎಲ್ಲಾ ಮಸೀದಿಗಳ ಮುತವಲ್ಲಿಗಲು, ಈದ್‌ಮಿಲಾದ್ ಕಮಿಟಿ ಅಧ್ಯಕ್ಷ ಯು. ಜಹೀರುದ್ದೀನ್, ಉಪಾಧ್ಯಕ್ಷ ಎಂ.ನಾಸೀರ್‌ದ್ದೀನ್, ಪದಾಧಿಕಾರಿಗಳಾದ ಬಿ.ಇಮ್ರಾನ್, ಬಿ. ನೂರ್,ಅಬ್ದುಲ್ ಗಯಾಬ್, ಸಮಾಜದ ಮುಖಂಡರು, ಯುವಕರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಈದ್‌ಮಿಲಾದ್ ಕಮಿಟಿ ವತಿಯಿಂದ ಸ್ತಂಭ್ದ ಚಿತ್ರಗಳ ಮೆರವಣಿಗೆಯಲ್ಲಿ ಯಾಸೀನ್ ಮಸೀದಿಯ ಚಂದ್ರಮದ್ಯದಲ್ಲಿನ ಮದೀನ ಸ್ತಬ್ದಚಿತ್ರಕ್ಕೆ ಮೊದಲ ಬಹುಮಾನ, ಸಕ್ಕರೆ ಕಾರ್ಖಾನೆಯ ಆಶ್ರಫಿ ಮಸೀದಿಯ ಮೆಕ್ಕಾಮದೀನಾ ಸ್ತಬ್ದಚಿತ್ರಕ್ಕೆ ಎರಡನೇ ಬಹುಮಾನಗಳನ್ನು ನೀಡಿ ಗೌರವಿಸಿದರು. ಈದ್ ಮಿಲಾದ್ ಆಚರಣೆಯಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವ–ರಿಷ್ಠಾಧಿಕಾರಿ ಎನ್. ನವೀನ್ ಕುಮಾರ್, ಡಿ ವೈ ಎಸ್ ಪಿ ಪ್ರಸಾದ್ ಗೋಖಲೆ, ಪಿಐ ಕೆ.ಬಿ.ವಾಸುಕುಮಾರ್, ಪಿಎಸ್‌ಐ ಅವಿನಾಶ್ ಕಾಂಬ್ಳೆ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ವ್ಯಾಪಕ ಬಂದೋಬಸ್ತ್ ಏರ್ಪಡಿಸಿದರು.

**ವರದಿ : ಜಿಲಾನಸಾಬ್ ಬಡಿಗೇರ್**

ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16-09-2025 ಪುಟಗಳು:16

# ಆರಾಧ್ಯ ದೈವ ಶ್ರೀ ಕಾಡಸಿದ್ದೇಶ್ವರ ಪ್ರಸಿದ್ಧ ಪಟಾಕಿ ಜಾತ್ರೆ : ಪಟ್ಟವರ್ಧನ್ ಸರ್ಕಾರ ಕಾಣಿಕೆ ಕೊಟ್ಟ ರಥಕ್ಕೆ ಪಟಾಕಿಯ ಸುರಿಮಳೆ







ಬಾಗಲಕೋಟೆ ಜಿಲ್ಲೆಯ ರಬಕವಿ – ಬನಹಟ್ಟಿ ತಾಲೂಕಿನ ಬನಹಟ್ಟಿ ನಗರದ ಆರಾಧ್ಯ ದೈವ ಶ್ರೀ ಕಾಡಸಿದ್ದೇಶ್ವರ ಜಾತ್ರೆಯು ಸೆಪ್ಟಂಬರ್16 ರಿಂದ ಸತತ ಮೂರು ದಿನಗಳ ಕಾಲ ನಡೆಯಲಿದ್ದು , ಮಂಗಳವಾರ ನಡೆಯುವ ರಥ–ೋತ್ಸವದಲ್ಲಿ ಭಾರೀ ಪ್ರಮಾಣದಲ್ಲಿ ಮದ್ದು ಸುಡುವುದರ ಮುಖಾಂತರ ಕಾಡಸಿದ್ದನಿಗೆ ಭಕ್ತಿ ಅರ್ಪಣೆ ಮಾಡುತ್ತಾರೆ ಈ ನಗರದ ಜನ ಅಷ್ಟೇ ಅಲ್ಲದೆ ಸುತ್ತಮುತ್ತಲಿನ ಹಳ್ಳಿಯ ಜನರು ಈ ತೇರಿನ ಮುಂದುಗಡೆ ಭಯ –ಭಕ್ತಿಯಿಂದ ಮದ್ದು ಸುಡುತ್ತಾರೆ. ಈ ಮದ್ದು ಸುಡುವುದನ್ನು ನೋಡಲು ಸಾವಿರಾರು ಜನ ಜಂಗುಳಿ ಇರುತ್ತದೆ ಈ ಸಂದರ್ಭದಲ್ಲಿ ಭಾರೀ ಪ್ರಮಾಣದಲ್ಲಿ ಮದ್ದು ಸುಡುವುದರಿಂದ ಜಿಲ್ಲೆಯಲ್ಲಿಯೇ ಪಟಾಕಿ ಮದ್ದಿನ ಜಾತ್ರೆ ಎಂದು ಹೆಸರುವಾಸಿಯಾಗಿದೆ. ಸುಟ್ಟ ಮದ್ದಿನ ಹೊಗೆ ದಟ್ಟವಾಗಿ ಇಡೀ ನಗರವೇ ಆವರಿಸಿರುತ್ತದೆ.

ಜಾತ್ರೆಯ ಮರುದಿನ ಅಂದ್ರೆ ಬುಧವಾರ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿ ಇರುತ್ತದೆ. ಈ ಕುಸ್ತಿ ಪಂದ್ಯಾವಳಿ ನೋಡಲು ಜಿಲ್ಲೆಯ ವಿವಿಧ ಭಾಗಗಳಿಂದ ಸಾವಿರಾರು ಜನ ಸೇರುತ್ತಾರೆ. ಇದೇ ರಾತ್ರಿ ನಾಟಕ – ಬಯಲಾಟ ಅಲ್ಲದೆ ಖ್ಯಾತ ಕನ್ನಡ ಜಾನಪದ ಪ್ರಸಿದ್ಧ ಖ್ಯಾತ ಹಾಡುಗಾರರಿಂದ ಮನರಂಜನೆ ಕಾರ್ಯಕ್ರಮ ಕೂಡ ಇರುತ್ತದೆ. ಮೂರನೇ ದಿನ ಗುರುವಾರ ಅದ್ದೂರಿಯಾಗಿ ಕಳಸಾರೋಹಣ ಕಾರ್ಯಕ್ರಮದ ಜೊತೆಗೆ ಮದ್ದು ಸುಡುವುದರ ಮುಖಾಂತರ ನಗರದ ಸೋಮವಾರಪೇಟೆಯವರೆಗೆ ಹೋಗುವುದು ವಿಶೇಷವಾಗಿರುತ್ತದೆ.

**150 ವರ್ಷಗಳ ಇತಿಹಾಸ ಹೊಂದಿರುವ ರಥ**

ಆರಾಧ್ಯ ದೈವ ನಗರದ ಶ್ರೀ ಕಾಡಸಿದ್ದೇಶ್ವರ ಜಾತ್ರೆಯ ದಿನ ನಡೆಯುವ ರಥ–ೋತ್ಸವ ಸುಂದರವಾಗಿ ಕಣ್ಣಿಗೆ ಆಕರ್ಷಣೀಯವಾಗಿ ಇರುತ್ತದೆ. ಈ ರಥೋತ್ಸವಕ್ಕೆ ಮೆರಗು ತರುವುದು ಭವ್ಯವಾದ ( ತೇರು ) ಈ ರಥವನ್ನು ನೆರೆಯ ಜಮಖಂಡಿ ಸಂಸ್ಥಾನದ ಮಹಾರಾಜ ಪಟವರ್ಧನ ಸರ್ಕಾರ ಅವರು ಮಂಗಳವಾರ ಪೇಟೆ ದೈವ ಮಂಡಳಿಗೆ ಕಾಣಿಕೆಯಾಗಿ ನೀಡಿದ್ದರು.

ಜಾತ್ರೆಯ ಸಂದರ್ಭದಲ್ಲಿ ರಥದ ಕೊರತೆಯಿದ್ದಾಗ ಪಟ್ಟವರ್ಧನ್ ಸರ್ಕಾರ ಮಹಾರಾಜರು ರಥವನ್ನು ನೀಡಿ, ಶ್ರೀ ಕಾಡಸಿದ್ದೇಶ್ವರ ಜಾತ್ರೆಯ ಸಂದರ್ಭದಲ್ಲಿ ಜರುಗುವ ರಥೋತ್ಸವಕ್ಕೆ ಮಾತ್ರ ಬಳಕೆ ಮಾಡಬೇಕು ಎಂದು ನಗರದ ದೈವ ಮಂಡಳಿಯ ಹಿರಿಯರಿಂದ ಕರಾರು ಪತ್ರ ಬರೆಯಿಸಿಕೊಂಡ ನಂತರ ತೇರನ್ನು ( ರಥ ) ನೀಡಿದ್ದರು. ಈ ( ತೇರು ) ರಥವನ್ನು 150 ಕ್ಕಿಂತ ಹೆಚ್ಚು ವರ್ಷಗಳ ಕಾಲ ಹಳೆಯ ಇದ್ದುದ್ದರಿಂದ , ಈಗಷ್ಟೇ ಅದಕ್ಕೆ ಹೊಸ ಮೆರಗನ್ನು ನೀಡಿ ಈಗಲೂ ಕೇವಲ ರಥೋತ್ಸವಕ್ಕೆ ಮಾತ್ರ ಬಳಸುವುದನ್ನು ನೋಡಬಹುದು. ಈ ರಥ ( ತೇರು ) ಬನಹಟ್ಟಿ ನಗರಕ್ಕೆ ಬಂದು 75 ವರ್ಷ ಆಗಿದ್ದು, ಇಲ್ಲಿಗೆ ಬರುವಕ್ಕಿಂತ ಮುಂಚೆ 80 ವರ್ಷ ಹಳೆಯ ರಥ. ಪಟ್ಟವರ್ಧನ್ ಸರ್ಕಾರ ಅವರ ರಾಜವಾಡೆಯಲ್ಲಿ ಸೀಸವೆ ಕಟ್ಟಿಗೆಯಿಂದ ನಿರ್ಮಿಸಿದ ತೇರು 150ಕ್ಕಿಂತ ಹೆಚ್ಚು ವರ್ಷಗಳ ಕಾಲ ಹಳೆಯದಾದ ದಾಖಲೆಯ ಇತಿಹಾಸ ಇದೆ.



ಮಹಿಬೂಬ್ ಎಂ. ಬಾರಿಗಡ್ಡಿ

**ಪ್ರಪ್ರಥಮ ಬಾರಿಗೆ ಮಹಾಪ್ರಸಾದ : ಅದ್ದೂರಿ ರೊಟ್ಟಿ ಊಟ**

ಶ್ರೀ ಕಾಡಸಿದ್ದೇಶ್ವರ ಜಾತ್ರಾ ಕಮಿಟಿ ಈ ವರ್ಷ ವಿಶೇಷವಾಗಿ ಅದ್ದೂರಿ ರೊಟ್ಟಿ ಊಟದ ಮುಖಾಂತರ ಬರುವಂತ ಸಾವಿರಾರು ಭಕ್ತಾದಿಗಳಿಗೆ ಮಹಾಪ್ರಸಾದ ವ್ಯವಸ್ಥೆಯನ್ನು ಕೂಡಾ ಮಾಡಿದ್ದಾರೆ. ವಿಶೇಷವಾಗಿ ನಗರದ ಎಲ್ಲಾ ಸಮಾಜದ ಬಾಂಧವರಿಗೆ ಮನೆ ಮನೆಯಿಂದ ರೊಟ್ಟಿ ತಯಾರು ಮಾಡಿಕೊಂಡು ಬರುವಂತೆ ಆಹ್ವಾನ ನೀಡಿ ವಿಶೇಷವಾಗಿ ಜಾತ್ರೆಗೆ ಮತ್ತಷ್ಟು ಮೆರಗು ನೀಡಲು ಪ್ರಯತ್ನ ಮಾಡಿದ್ದಾರೆ.

# ಗುರುಮಠಕಲ್ ಪ್ರಜಾಸೌಧ ನಿರ್ಮಾಣ ಕಾಮಗಾರಿಗೆ ಅಡಿಗಲ್ಲು ಜೆಡಿಎಸ್ – ಕಾಂಗ್ರೆಸ್ ಕಾರ್ಯಕರ್ತರ ಮಾತಿನ ಜಟಾಪಟಿ

**ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ತಮ್ಮ ಸಹಕಾರ ಅಗತ್ಯ : ಶರಣಗೌಡ ಕಂದಕೂರ.**

## ನಮ್ಮದೇ ಸರಕಾರ ಅಭಿವೃದ್ಧಿಗೆ ಸದಾ ಸಿದ್ಧ : ಬಾಬುರಾವ್ ಚಿಂಚನಸೂರ.

**ಯಾದಗಿರಿ/ ಗುರುಮಠಕಲ್:** ಪಟ್ಟಣದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ಹಾಗೂ ಕಂದಾಯ ಇಲಾಖೆಯ ಸಹಭಾಗಿತ್ವದಲ್ಲಿ 8.60 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಪ್ರಜಾ ಸೌಧ ತಾಲ್ಲೂಕಾ ಆಡಳಿತ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಡಿಗಲ್ಲು ನೆರವೇರಿಸಿ ಮಾತನಾಡಿದ ಗುರುಮಠಕಲ್ ಶಾಸಕರು ಒಂದು ವರ್ಷದಲ್ಲಿ ಕಟ್ಟಡ ಪೂರ್ಣಗೊಳ್ಳಲಿದ್ದು, ಇಲ್ಲಿಯೇ ಹಲವಾರು ಸರ್ಕಾರಿ ಇಲಾಖೆಗಳ ಕಚೇರಿಗಳು ಆರಂಭಗೊಳ್ಳಲಿವೆ ಇದರಿಂದ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಲಿದೆ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಮುಖ್ಯವಾಗಿ ಕಾರಣೀಭೂತರಾದ ಜಿಲ್ಲಾ ಉಸ್ತುವಾರಿ ಸಚಿವ ಶರಣ ಬಸಪ್ಪ ದರ್ಶನಾಪೂರ ಮತ್ತು ಆಗಿನ ಜಿಲ್ಲಾಧಿಕಾರಿ ಸುಶೀಲ ಅವರಿಗೆ ಧನ್ಯವಾದ ತಿಳಿಸಿದರು. ಕಾಮಗಾರಿ ಕೈಗೊಳ್ಳುವ ಗುತ್ತಿಗೆದಾರರು ನಿಗದಿತ ಅವಧಿಯೊಳಗೆ ಗುಣಮಟ್ಟದ ಕಾಮಗಾರಿ ಕೈಗೊಳ್ಳಿ ಎಂದು ಸೂಚಿಸಿ, ಪಟ್ಟಣದಲ್ಲಿ 50 ಬೆಡ್‌ಗಳ ಸರ್ಕಾರಿ ಆಸ್ಪತ್ರೆಯನ್ನು 100 ಬೆಡ್ ಗಳಿಗೆ ಮೇಲ್ದರ್ಜೆಗೆ ಏರಿಸಲು ಮಾಜಿ ಸಚಿವ ಬಾಬುರಾವ್ ಚಿಂಚನಸೂರ ಅವರಿಗೆ ಗುರುಮಠಕಲ್ ಅಭಿವೃದ್ಧಿಗೆ ತಮ್ಮ ಸಹಕಾರ ನೀಡಲು ಕೇಳಿದರು.

ಕಾರ್ಯಕ್ರಮದಲ್ಲಿ ಕಾರ್ಯಕರ್ತರು ತಮ್ಮ ತಮ್ಮ ನಾಯಕರ ಪರ ಜಯಘೋಷಗಳು, ಮಾತಿನ ಚಕಮಕಿ ಮಧ್ಯದಲ್ಲಿ ಜರುಗಿದರೂ ಇಬ್ಬರೂ ನಾಯಕರು ಮತ್ತು ಪೊಲೀಸ್ ಇಲಾಖೆ ಎಲ್ಲಾ ಕಾರ್ಯಕರ್ತರನ್ನು ಶಾಂತಗೊಳಿಸಿದರು.



ನೂತನ ತಾಲ್ಲೂಕಾ ಕೇಂದ್ರವಾಗಿರುವ ಗುರುಮಠಕಲ್ ಪಟ್ಟಣದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ, ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ. ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯನವರು ಹಣಕಾಸು ಖಾತೆ ನಿರ್ವಹಣೆ ಮಾಡುವ ಮೂಲಕ ವಿಧಾನ ಸಭಾ ಚುನಾವಣೆ ಪೂರ್ವದಲ್ಲಿ ಜನರಿಗೆ ನೀಡಿರುವ ಭರವಸೆಯಂತೆ ಪಂಚ ಗ್ಯಾರಂಟಿಗಳಿಗೆ ಅನುದಾನ ಒದಗಿಸುವ ಜೊತೆಗೆ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಸೂಕ್ತ ಅನುದಾನ ತಂದು ಕ್ಷೇತ್ರ ಪ್ರಗತಿಗೆ ಶ್ರಮಿಸುವುದಾಗಿ ಮಾಜಿ ಶಾಸಕ ಹಾಗೂ ಅಂಬಿಗರ ಚೌಡಯ್ಯ ನಿಗಮದ ಅಧ್ಯಕ್ಷರಾದ ಬಾಬುರಾವ್ ಚಿಂಚನಸೂರ ಮಾತನಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ಗೃಹ ಮಂಡಳಿ ಕಾರ್ಯನಿರ್ವಾಹಕ ಅಭಿಯಂತರ ವಿಜಯಕುಮಾರ ಯೋಜನೆ ಮಾಹಿತಿ ನೀಡಿದರು. ತಹಶೀಲ್ದಾರ್ ಶಾಂತಗೌಡ ಬಿರಾದಾರ, ಪುರಸಭೆ ಅಧ್ಯಕ್ಷೆ ಜಯಶ್ರೀ ಪೆಣಟಿಜಜ–ಜಿಟಿಜಜ. ಪಾಟೀಲ, ಮುಖ್ಯಾಧಿಕಾರಿ ಭಾರತೀ ದಂಡೋತಿ, ಗೃಹಮಂಡಳಿಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಗಿರೀಶ್, ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿ ಅಂಬರೀಷ ಪಾಟೀಲ, ಸಿಡಿಪಿಓ ಶರಣಬಸಪ್ಪ ಸೇ–ರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

**ಅಭಿವೃದ್ಧಿ ವಿಷಯದಲ್ಲಿ ರಾಜಕೀಯ ಮಾಡಬೇಡಿ :**

" ನಾನು ಇಲ್ಲಿ ಆಯ್ಕೆಯಾಗಿ ಬಂದಿರುವುದು ಗುರುಮಠಕಲ್ ಅಭಿವೃದ್ಧಿಯ ವಿಷಯವನ್ನಿಟ್ಟುಕೊಂಡು ಚುನಾವಣೆ ಸಮಯದಲ್ಲಿ ಕೇವಲ 15 ದಿನ ಮೊದಲು ನಾನು ರಾಜಕೀಯ ಮಾಡುತ್ತೇನೆ. ಎಲ್ಲರೂ ಅಷ್ಟೇ ಚುನಾವಣೆ ಸಮಯದಲ್ಲಿ ರಾಜಕೀಯ ಮಾಡಿ , ಅದು ಬಿಟ್ಟು ಅಭಿವೃದ್ಧಿ ವಿಷಯದಲ್ಲಿ ರಾಜಕೀಯ ಮಾಡಬೇಡಿ, ಎಲ್ಲರೂ ಜನರ ಒಳಿತಾಗಿಯೇ ಕೆಲಸ ಮಾಡಬೇಕಿದೆ ".

–ಶರಣಗೌಡ ಕಂದಕೂರ,
**ಗುರುಮಠಕಲ್ ಶಾಸಕರು.**

**ವರದಿ: ಜಗದೀಶ್ ಕುಮಾರ್ ಭೂಮಾ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16–09–2025 ಪುಟಗಳು:16

# ಕಂಪ್ಲಿ–ಕೋಟೆಯಲ್ಲಿ ಅಪಾಯದ ಅಂಚಿನಲ್ಲಿ ತುಂಗಭದ್ರಾ ನದಿಯಲ್ಲಿನ ಬೃಹತ್ ವಿದ್ಯುತ್ ಸರಬರಾಜು ಕಂಬ

**ಬಳ್ಳಾರಿ/ ಕಂಪ್ಲಿ :** ಕಂಪ್ಲಿ ಪಟ್ಟಣಕ್ಕೆ ವಿದ್ಯುತ್ ಸರಬರಾಜು ಮಾಡಲು ಕಂಪ್ಲಿ ಕೋಟೆಯ ತುಂಗಭದ್ರಾ ನದಿಯಲ್ಲಿ ಎರಡು ಜೋಡಿ ಬೃಹತ್ ಕಬ್ಬಿಣದ ಕಂಬಗಳನ್ನು ಅಳವಡಿಸಿ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಆದರೆ ಪ್ರತಿ ವರ್ಷದ ನದಿ ಪ್ರವಾಹದಿಂದಾಗಿ ಒಂದು ಜೋಡಿ ಕಂಬದ ತಳಪಾಯದ ಕಟ್ಟಡ ಪ್ರತಿವರ್ಷ ಹಾನಿಯಾಗುತ್ತಿದ್ದು, ಅಪಾಯದ ಅಂಚಿಗೆ ತಲುಪಿದ್ದು, ಬೃಹತ್ ಜೋಡಿ ಕಂಬ ಬಿದ್ದು ಅಪಾಯ ಸಂಭವಿಸುವ ಮುನ್ನ ಜೆಸ್ಕಾಂ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಗಂಗಾವತಿ ಭಾಗದಿಂದ ಕಂಪ್ಲಿ ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು 33/11ಕೆವಿ ವಿದ್ಯುತ್ ಸರಬರಾಜು ಕೇಂದ್ರಕ್ಕೆ ವಿದ್ಯುತ್ ಲೈನ್ ಮಾರ್ಗ ಎಳೆಯಲು ತುಂಗಭದ್ರಾ ನದಿಯಲ್ಲಿ ಎರಡು ಜೋಡಿ ಬೃಹತ್ ಕಬ್ಬಿಣದ ವಿದ್ಯುತ್ ಕಂಬಗಳನ್ನು ಅಳವಡಿಸಿ ವಿದ್ಯುತ್ ಮಾರ್ಗವನ್ನು ಕಲ್ಪಿಸಲಾಗಿದೆ. ಆದರೆ, ವರ್ಷದಿಂದ ವರ್ಷಕ್ಕೆ ತುಂಗಭದ್ರಾ ನದಿಯಲ್ಲಿನ ಪ್ರವಾಹದಿಂದಾಗಿ ಬೃಹತ್ ಜೋಡಿ ವಿದ್ಯುತ್ ಕಂಬಗಳ ತಳಪಾಯದ ಕಟ್ಟಡ ದುಸ್ಥಿತಿಗೆ ತಲುಪಿದ್ದು, ಯಾವಾಗ ಬೀಳುವುದೋ ಎನ್ನುವ ಆತಂಕ ಕಾಡುತ್ತಿದೆ.

ಅದೃಷ್ಟವಶಾತ್ ಈಗ ಮಾರ್ಗದಲ್ಲಿ ವಿದ್ಯುತ್ ಸರಬರಾಜು ಇಲ್ಲದೆ ಇರುವುದರಿಂದ ಕಂಬಗಳು ಬಿದ್ದರೆ ದೊಡ್ಡ ಅಪಾಯವೇನೂ ಇಲ್ಲವಾದರೂ ಕಂಬಗಳು ಬಿದ್ದರೆ, ಅಲ್ಪ ಪ್ರಮಾಣದ ಅಪಾಯವಂತೂ ಕಟ್ಟಿಟ್ಟ ಬುತ್ತಿಯಾಗಿದೆ.

ಯಾಕೆಂದರೆ ಸೇತುವೆ ಭಾಗಕ್ಕೆ ಕಂಬಗಳು ಏನಾದರೂ ಬಿದ್ದರೆ ಆ ಸಂದರ್ಭದಲ್ಲಿ ಸೇತುವೆ ಮೇಲೆ ವಾಹನಗಳು, ಜನರು ಇದ್ದರೆ ಅನಾಹುತವಾಗಲಿದೆ. ಈ ಹಿನ್ನೆಲೆಯಲ್ಲಿ ಜೆಸ್ಕಾಂ ಇಲಾಖೆ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.



ಕಂಪ್ಲಿ–ಕೋಟೆಯ ತುಂಗಭದ್ರಾ ನದಿಯಲ್ಲಿ ಕಂಪ್ಲಿ ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಅಪಾಯದ ಅಂಚಿನಲ್ಲಿರುವ ಬೃಹತ್ ವಿದ್ಯುತ್ ಕಂಬ.

" ನದಿಯಲ್ಲಿನ ಬೃಹತ್ ಜೋಡಿ ವಿದ್ಯುತ್ ಕಂಬಗಳ ತಳಪಾಯದ ಕಟ್ಟಡ ಹಾನಿಯಾಗಿದ್ದು, ಸದ್ಯ ಈ ಮಾರ್ಗದಲ್ಲಿ ವಿದ್ಯುತ್ ಸರಬರಾಜು ಇಲ್ಲ, ಈ ಬಗ್ಗೆ ಜೆಸ್ಕಾಂ ಇಲಾಖೆಯ ಸಿ ಮತ್ತು ಎಂ.ವಿಭಾಗಕ್ಕೆ ಮಾಹಿತಿ ನೀಡಲಾಗಿದೆ ".

– ಮಲ್ಲಿಕಾರ್ಜುನಗೌಡ, ಇಇ, ಜೆಸ್ಕಾಂ, ಕಂಪ್ಲಿ.

ಕಂಪ್ಲಿ –ಕೋಟೆ ತುಂಗಭದ್ರಾ ನದಿಯಲ್ಲಿನ 33/11 ಕೆವಿ ಮಾರ್ಗದ ಎರಡು ಬೃಹತ್ ವಿದ್ಯುತ್ ಸರಬರಾಜು ಕಂಬಗಳ ತಳಪಾಯದ ಕಟ್ಟಡಕ್ಕೆ ಒಂದು ಭಾಗಕ್ಕೆ ಹಾನಿಯಾಗಿರುವುದು ಗಮನಕ್ಕೆ ಬಂದಿದೆ. ಇದೀಗ ಈ ಮಾರ್ಗದಲ್ಲಿ ವಿದ್ಯುತ್ ಸರಬರಾಜು ಇಲ್ಲ, ಮುಂದೆ ಕಂಪ್ಲಿ ಪಟ್ಟಣಕ್ಕೆ ಗಂಗಾವತಿ, ಕೊಪ್ಪಳ ಹಾಗೂ ಸಿಂಧನೂರು ಭಾಗದಿಂದ ವಿದ್ಯುತ್ ಸಂಪರ್ಕ ಪಡೆಯಲು ಅಗತ್ಯವಾಗಬಹುದೆಂದು ಈ ಮಾರ್ಗವನ್ನು ಉಳಿಸಿಕೊಳ್ಳಲಾಗಿದೆ, ಹಾನಿಯಾಗಿರುವ ಕಂಬಗಳ ತಳಪಾಯದ ಕಟ್ಟಡ ದುರಸ್ತಿಗೆ ಕ್ರಮಗಳನ್ನು ಕೈಗೊಳ್ಳಲಾಗುವುದು. ಇಲ್ಲದಿದ್ದರೆ, ಆದಷ್ಟು ಶೀಘ್ರವಾಗಿ ಈ ಕಂಬಗಳನ್ನು ತೆರವುಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು ".

–ಎಸ್.ಚಂದ್ರಶೇಖರ್,
ಜೆಸ್ಕಾಂ ಇಲಾಖೆಯ ಸಿ ಮತ್ತು ಎಂ ವಿಭಾಗದ ಇ. ಇ.

**ವರದಿ : ಜಿಲಾನಸಾಬ್ ಬಡಿಗೇರ್**

# ಕರುನಾಡ ಕಂದ ವರದಿಗೆ ಸಾಥ್ ನೀಡಿದ ಸ್ಥಳೀಯರು: ಸಿ.ಎಂ. ಕಚೇರಿಯಿಂದ ಮಾಧ್ಯಮ ಪ್ರಕಟಣೆ

## ಮದ್ಯ ಪ್ರೇಮಿಗಳ ತಾಣವಾದ ಇಂದಿರಾ ಮಾರುಕಟ್ಟೆ ವರದಿಗೆ ಸ್ಪಂದಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದ ಸಿ.ಎಂ.

ಇದೇ ಸೆಪ್ಟೆಂಬರ್ 9ರಂದು ಗುರುಮಠಕಲ್ ಪಟ್ಟಣದ ಶ್ರೀ ನಗರೇಶ್ವರ ದೇವಸ್ಥಾನ ಹಿಂಭಾಗದಲ್ಲಿರುವ ಇಂದಿರಾ ಗಾಂಧಿ ತರಕಾರಿ ಮಾರುಕಟ್ಟೆಯ ಕುರಿತಾಗಿ " ಕರುನಾಡ ಕಂದ.ಕಾಮ್ " ದೈನಂದಿನ ಸುದ್ದಿತಾಣದಲ್ಲಿ ವರದಿ ಮಾಡಿದ ಬೆನ್ನಲ್ಲೇ ಸ್ಥಳೀಯರಾದ ಶ್ರೀಕಾಂತ್ ತಲಾರಿಯವರು ಮುಖ್ಯ ಮಂತ್ರಿಗಳ ಕಚೇರಿಗೆ ಎಕ್ಸ್ ಖಾತೆ ಮೂಲಕ ಟ್ಯಾಗ್ ಮಾಡಿ ಹಂಚಿಕೆ ಮಾಡಿರುತ್ತಾರೆ, ಈ ಕುರಿತು ತಕ್ಷಣ ಕ್ರಮ ಕೈಗೊಳ್ಳಲು ಮಾನ್ಯ ಮುಖ್ಯ ಮಂತ್ರಿಗಳ ಕಚೇರಿಯಿಂದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

### ಮುಖ್ಯಮಂತ್ರಿಯವರ ಕಚೇರಿಯಿಂದ ಮಾಧ್ಯಮ ಪ್ರಕಟಣೆ

ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲ್ಲೂಕಿನ ಶ್ರೀ ನಗರೇಶ್ವರ ದೇವಸ್ಥಾನದ ಹಿಂದೆ ಇರುವ ಇಂದಿರಾ ಮಾರುಕಟ್ಟೆಯಲ್ಲಿ ಸಾರ್ವಜನಿಕರು ಅನಧಿಕೃತ ಚಟುವಟಿಕೆಗಳನ್ನು ಮಾಡುತ್ತಿರುವುದಾಗಿ ' ಎಕ್ಸ್ ಬಳಕೆದಾರರೊಬ್ಬರು ಮುಖ್ಯಮಂತ್ರಿಯವರ ಕಚೇರಿಯ ಕುಂದುಕೊರತೆ ವಿಭಾಗದ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ವಿಶೇಷ ಕರ್ತವ್ಯಾಧಿಕಾರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದರು.

ಸದರಿ ಮಾರುಕಟ್ಟೆಯನ್ನು ಸ್ವಚ್ಛಗೊಳಿಸಿದ್ದು, ರಾತ್ರಿ ಸಮಯದಲ್ಲಿ ಮಾರುಕಟ್ಟೆಯಲ್ಲಿ ಯಾವುದೇ ಅನೈತಿಕ ಚಟುವಟಿಕೆಗಳು ನಡೆಯದಂತೆ ಸೂಕ್ತ ಕ್ರಮ ವಹಿಸಲು ತಾಲ್ಲೂಕಿನ ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ, ಜೊತೆಗೆ ಇನ್ನು ಮುಂದೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರವಹಿಸಲಾಗಿದೆ ಎಂದು ಗುರುಮಠಕಲ್ ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಸುದ್ದಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ತ್ವರಿತ ಗತಿಯಲ್ಲಿ ಕಾರ್ಯಚರಣೆ ಕೈಗೊಳ್ಳಲು ಸಹಕರಿಸಿದ ಎಲ್ಲಾ " ಕರುನಾಡ ಕಂದ ಪತ್ರಿಕೆಯ ಓದುಗರಿಗೆ " ಧನ್ಯವಾದಗಳು.

**ವರದಿ ಜಗದೀಶ್ ಕುಮಾರ್ ಭೂಮಾ**






ಕರುನಾಡ ಕಂದ
ಸಂಪುಟ 04 | ಸಂಚಿಕೆ 21
ದಿನಾಂಕ: 16-09-2025 ಪುಟಗಳು:16

# ಹಣ ಮಾಡುವ ಚಟಕ್ಕೆ ಬೀಳಬೇಡಿ!



“ದುಡ್ಡು ಮಾಡಬೇಕೆಂದು ಯಾವತ್ತೂ ಹೋಗಬೇಡಿ, ಹೆಸರು ಮಾಡಬೇಕೆಂದು ಹೊರಟರೆ, ಹೆಸರು ಮಾಡುತ್ತಿಯಾ, ಕೆಲಸ ಮಾಡುತ್ತೆನೆಂದು ಹೊರಡು, ದುಡಿತೆನೆಂದು ನಿರ್ಧರಿಸು, ಮಾಡುವ ಕೆಲಸವನ್ನು ಎಕ್ಸಲೆಂಟಾಗಿ ಉಳಿದವರಿಗಿಂತ ಭಿನ್ನವಾಗಿ ಪರ್ಫೆಕ್ಟಾಗಿ ಮಾಡುತ್ತೆನೆಂದು ಹೊರಡು, ನಿನ್ನ ಹಿಂದೆ ದುಡ್ಡು, ಹೆಸರು, ಯಶಸ್ಸು, ಎಲ್ಲವೂ ಹೇಗೆ ಸಾಲುಗಟ್ಟಿ ಬರುತ್ತವೆ ನೋಡು, ಧೈರ್ಯಮಾಡು, ಸಾಹಸಿಯಾಗು ಕ್ಯಾಲ್ಕುಲೇಟೆಡ್ ರಿಸ್ಕ್ ತೆಗೆದುಕೊ ಯಶಸ್ವಿಯಾಗುತ್ತಿ” ಎಂದು ರವಿ ಬೆಳಗೆರೆ ಒಂದು ಕಡೆ ಹೇಳಿದ್ದಾರೆ. ಅವರ ಮಾತನ್ನು ನೋಡಿದಾಗ ದುಡ್ಡು ಗಳಿಸಲು ಹೊರಟರೆ ಕೇವಲ ದುಡ್ಡು ಮಾತ್ರ ಗಳಿಸುತ್ತೇವೆ. ಉಳಿದಂತೆ ಸಮಾಜದಲ್ಲಿನ ಸಂಬಂಧಗಳು ಹಾಳಾಗಿ ಹೋಗುತ್ತವೆ.

ನಾವು ಹೇಗಾದರೂ ಮಾಡಿ ದುಡ್ಡು ಗಳಿಸುತ್ತವೆಂದು ಹೊರಟಾಗಲೇ ಸಮಾಜದಲ್ಲಿ ಕೊಲೆ, ಸುಲಿಗೆ, ದರೋಡೆ, ಮೋಸ, ವಂಚನೆಗಳಾಗುತ್ತಿರುವುದು. ಕೆಟ್ಟ ಮಾರ್ಗದಲ್ಲಿ ಸರಳವಾಗಿ ಹಣ ಮಾಡುವ ಚಟಕ್ಕೆ ಬಿದ್ದರೆ ಸಮಾಜದ ಸ್ವಾಸ್ಥ್ಯ ಕೆಟ್ಟು ಹೋಗುತ್ತದೆ. ಪ್ರತಿದಿನ ದಿನಪತ್ರಿಕೆಯಲ್ಲಿ, ದೂರದರ್ಶನ ಮತ್ತು ಮೊಬೈಲ್ ನೋಡಿದರೆ ನಮಗೆ ಅರ್ಥವಾಗುತ್ತದೆ. ದುಡ್ಡಿಗಾಗಿ ಹೆತ್ತವರನ್ನು, ಹೆಂಡತಿಯನ್ನು, ಗಂಡನನ್ನು, ಅನ್ನ ಹಾಕಿದ ಮಾಲಿಕನನ್ನು ಕೊಲ್ಲುವ ಸುದ್ದಿಗಳನ್ನು ಓದುತ್ತೇವೆ. ನಮ್ಮಸುತ್ತಲಿನ ಪರಿಸರದಲ್ಲಿಯೂ ಇಂತಹ ಘಟನೆಗಳನ್ನು ನೋಡುತ್ತಿರುತ್ತೇವೆ. ಒಬ್ಬರಮೇಲೊಬ್ಬರು ವಿಶ್ವಾಸ ನಂಬಿಕೆ ದುಡ್ಡಿಗಾಗಿಯೇ ಕಡಿಮೆಯಾಗುತ್ತಿದೆ.

ಮನುಷ್ಯನಿಗೆ ಹಣ ಬೇಕೆಬೇಕು. ಇಂದಿನ ಸಮಾಜದಲ್ಲಿ ಹಣವಿದ್ದರೆ ಹೆಣ ಬಾಯಿಬಿಡುತ್ತದೆ ಎಂಬ ಸತ್ಯ ಗೊತ್ತಿದ್ದರೂ ಸಹ ನಾವು ಹಣ ಗಳಿಸುವ ಮಾರ್ಗಗಳನ್ನು ನೋಡಬೇಕು. ಮತ್ತೊಬ್ಬರಿಗೆ ಮೋಸ, ವಂಚನೆ ಮಾಡದೇ ಸಾಧ್ಯವಾದಷ್ಟು ದುಡಿದು ಗಳಿಸುವ ಚಟ ಬೆಳಸಿಕೊಳ್ಳಬೇಕು. ಎಷ್ಟೇ ಹೇಳಿದರೂ ಕೆಲವೊಂದು ಜನ ಸಮಾಜದಲ್ಲಿ ಮೋಸ, ವಂಚನೆಯಿಂದಲೇ ಗಳಿಸಬೇಕೆಂಬ ಪಣ ತೊಟ್ಟಿರುತ್ತಾರೆ. ಎಲ್ಲಿಯೊ ಕೇಳಿದ ಕಥೆ ಹೀಗಿದೆ, ಒಂದು ರಾಜ್ಯದಲ್ಲಿ ಲೋಹಗಳಿಂದ ಸಾಮಾಗ್ರಿಗಳನ್ನು ಮಾಡುವ ಒಳ್ಳೆಯ ಕಲಾವಿದ ಇದ್ದನು. ಅವನು ಚೆಂದದ ಮೂರ್ತಿಗಳನ್ನು, ಆಭರಣಗಳನ್ನು ಮಾಡುತ್ತಿದ್ದನು. ಆದರೆ ಕೊಟ್ಟ ಲೋಹಗಳಾದ ಬಂಗಾರ, ಬೆಳ್ಳಿಗಳಲ್ಲಿ ಒಂದಿಷ್ಟು ಕದಿಯುವ ಚಾಳಿಯಿತ್ತು. ಈ ವಿಷಯ ಎಲ್ಲರಿಗೂ ಗೊತ್ತಿತ್ತು. ಈ ಸುದ್ದಿ ಮಹಾರಾಜಾನ ಕಿವಿಗೂ ಬಿದ್ದಿತು. ಮಹಾರಾಜಾ ಅವನನ್ನು ಪರೀಕ್ಷಿಸಲು ಒಂದು ಬಂಗಾರದ ಮೂರ್ತಿ ಮಾಡಿಸಲು ಯೋಚಿಸಿದ. ಮರು ದಿನ ಮಂತ್ರಿಗಳಿಗೆ ಕಲಾವಿದನನ್ನು ಕರೆದುಕೊಂಡು ಬರಲು ಹೇಳಿದರು. ಅವನಿಗೆ ಮಹಾರಾಜ “ನೀನು ಹೇಳಿದಷ್ಟು ಬಂಗಾರ ಕೊಡುತ್ತೇನೆ. ಅಷ್ಟೇ ತೂಕದ ಬಂಗಾರದ ಮೂರ್ತಿಯನ್ನು ಮಾಡಿಕೊಡಬೇಕು” ಎಂದು ಹೇಳಿದನು. ಮಹಾರಾಜಾ ಹೇಳಿದಂತೆ ಕಲಾವಿದ ಒಪ್ಪಿಕೊಂಡನು. ಆದರೆ ಮಹಾರಾಜಾ ಕೆಲವು ಷರತ್ತುಗಳನ್ನು ಹಾಕಿದನು. ನೀನು ಅರಮನೆಯ ಒಂದು ಕೋಣೆಯಲ್ಲಿ ಮೂರ್ತಿ ಮಾಡಬೇಕು. ಇಲ್ಲಿ ನಿನಗೆ ಬೇರೆ ಬಟ್ಟೆಗಳನ್ನು ಕೊಡಲಾಗುತ್ತದೆ. ಪ್ರತಿದಿನ ನಿನ್ನನ್ನು ಸೈನಿಕರು ಪರಿಶೀಲನೆ ಮಾಡುತ್ತಾರೆ. ಹೀಗೆ ಹತ್ತಾರು ಷರತ್ತುಗಳನ್ನು ಹಾಕಿದನು. ಎಲ್ಲದಕ್ಕೂ ಕಲಾವಿದ ಒಪ್ಪಿಕೊಂಡನು. ಮರುದಿನದಿಂದ ಮೂರ್ತಿಮಾಡುವ ಕಾರ್ಯ ಪ್ರಾರಂಭವಾಯಿತು. ಸೈನಿಕರು ಅವನನ್ನು ಕಾಯುತ್ತಿದ್ದರು. ಒಂದಿಷ್ಟೂ ಬಂಗಾರವನ್ನು ಕದಿಯದಂತೆ ನಿಗಾವಹಿಸಿದ್ದರು. ಕೆಲವು ದಿನಗಳು ಕಳೆದವು. ಮೂರ್ತಿ ಸಿದ್ಧವಾಯಿತು. ಅದನ್ನು ಒಂದು ಬಾವಿಯಲ್ಲಿ ಸ್ವಚ್ಛಗೊಳಿಸುವುದಾಗಿ ಕಲಾವಿದ ಹೇಳಿದನು. ಸೈನಿಕರ ಬೆಂಗಾವಲಿನಲ್ಲಿ ಒಂದು ಬಾವಿಯಲ್ಲಿ ಮೂರ್ತಿಯನ್ನು ಸ್ವಚ್ಛಗೊಳಿಸಿಕೊಂಡು ಬಂದನು. ಮೂರ್ತಿ ಪ್ರತಿಷ್ಠಾನಗೊಂಡಿತು. ರಾಜನಿಗೆ ಖುಷಿಯಾಯಿತು. ಒಂದಿಷ್ಟು ಬಂಗಾರ ಕಳ್ಳತನ ಮಾಡದಂತೆ ಮಾಡಿದೆ ಎಂದು ಗರ್ವದಿಂದ ಮಂತ್ರಿಗಳಿಗೆ ಹೇಳಿದನು. ಆಗ ಕಲಾವಿದ “ಮಹಾರಾಜಾರೆ ನಾನು ಮೂರ್ತಿ ಮಾಡುವಾಗ ಸ್ವಲ್ಪ ಬಂಗಾರ ಕದ್ದಿಲ್ಲ, ಇಡೀ ಬಂಗಾರದ ಮೂರ್ತಿಯನ್ನು ಕದ್ದಿದ್ದೇನೆ” ಎಂದು ಹೇಳಿದನು. ಈತನ ಮಾತು ಕೇಳಿ ರಾಜನಿಗೆ ಆಶ್ಚರ್ಯವಾಯಿತು. ಹೇಗೆ ಎಂದನು. ನಿಮ್ಮ ಅರಮನೆಯಲ್ಲಿ ಬಂಗಾರದ ಮೂರ್ತಿಯನ್ನು ಮಾಡಲು ಪ್ರಾರಂಭಿಸಿದ ದಿನದಿಂದಲೇ, ಮನೆಯಲ್ಲಿ ಇದೇ ರೀತಿಯ ಹಿತ್ತಾಳೆಯ ಮೂರ್ತಿಯನ್ನು ಮಾಡಲು ಪ್ರಾರಂಭಿಸಿದೆ. ನಿನ್ನೆ ರಾತ್ರಿ ಬಾವಿಯಲ್ಲಿ ಹಿತ್ತಾಳೆ ಮೂರ್ತಿಯನ್ನು ನೀರಿನಲ್ಲಿ ಬಚ್ಚಿಟ್ಟಿದ್ದೆ, ಇಂದು ಬಂಗಾರದ ಮೂರ್ತಿಯ ಬದಲಾಗಿ ಹಿತ್ತಾಳೆ ಮೂರ್ತಿಯನ್ನು ತಂದೆ ಎಂದನು. ಈ ಮಾತನ್ನು ಕೇಳಿದ ಮಹಾರಾಜಾ ಅವನು ಕೈಚಳಕ ನೋಡಿ ನಗಬೇಕೊ, ಶಿಕ್ಷೆಕೊಡಬೇಕೊ ಗೊತ್ತಾಗದೇ ಸುಮ್ಮನಾದನು. ಹೀಗೆ ಕೆಲವೊಂದಿಷ್ಟು ಜನ ದುಡ್ಡು ಮಾಡುವಲ್ಲಿ ತಮ್ಮ ನೈಪುಣ್ಯತೆಯನ್ನು, ಚಾಲಕೀತನವನ್ನು ಇಂತಹದಕ್ಕೆ ಬಳಸಿಕೊಂಡಿರುತ್ತಾರೆ.

ದುಡ್ಡು ಮಾಡುವ ಚಟ ಬಡವರಿಗಿಂತ ಹಣ ಇದ್ದವರಿಗೆ ಜಾಸ್ತಿಯಿರುತ್ತದೆ. ಹೊಟ್ಟೆ ತುಂಬಿದ ವ್ಯಕ್ತಿಗಳೇ ಇನ್ನಷ್ಟು ಬೇಕೆಂದು ಅನ್ಯಾದ ಮಾರ್ಗ ಹಿಡಿಯುತ್ತಾರೆ. ಇಂದಿನ ಸಮಾಜದಲ್ಲಿ ಬ್ಲ್ಯಾಕ್ ಮೇಲ್ ತಂತ್ರದಿಂದ ಹಣ ಮಾಡುವುದು ಹೆಚ್ಚಾಗಿದೆ. ಹಸಿದವನು ಊಟಕ್ಕಾಗಿ ಸುಳ್ಳು ಹೇಳಬಹುದು. ಹೊಟ್ಟೆ ತುಂಬಿದವರು ಮುಂದಿನ ತಲೆಮಾರಿಗಾಗಿ ಹಣ ಮಾಡುವ ಚಟ ಅಂಟಿಸಿಕೊಂಡಿದ್ದಾರೆ. ನ್ಯಾಯ ಮಾರ್ಗದಲ್ಲಿ ಗಳಿಸಿದರೆ ತಪ್ಪಲ್ಲ. ಅನ್ಯಾದ ಮಾರ್ಗದಿಂದ ಆದಷ್ಟು ಬೇಗನೆ ಹಣ, ಪ್ಲ್ಯಾಟ್, ಭೂಮಿ, ಕಾರು ಮುಂತಾದವಗಳನ್ನು ಗಳಿಸುತ್ತಾರೆ. ಅಲ್ಲಿಗೆ ತೃಪ್ತರಾಗದೇ ಇನ್ನಷ್ಟು ಗಳಿಸುವ ಹುಕಿ ಮನಸ್ಸಿನ ಮೂಡುತ್ತದೆ. ಅನೈತಿಕ ಹಾದಿಯಲ್ಲಿ ದುಡ್ಡು ಮಾಡುವ ಚಟಕ್ಕೆ ಬಿದ್ದ ವ್ಯಕ್ತಿಗೆ ನೈತಿಕತೆಯ ಪಾಠ ರುಚಿಸುವುದಿಲ್ಲ. ತಾನೇ ಒಮ್ಮೆ ಪೆಟ್ಟು ತಿಂದಾಗ ಮಾತ್ರ ಬದಲಾಗುತ್ತಾನೆ.

–ಬಸವರಾಜ ಹೊನಗೌಡರ

# ಕೃತಕ ಬುದ್ಧಿಮತ್ತೆ (artificial intelligence) ಮಾರಕವೋ ಪ್ರೇರಕವೋ..?



Artificial intelligence ಸದ್ಯದ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ಒಂದು ಆವಿಷ್ಕಾರ.ಸಾಮಾಜಿ–ಕ ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳಲ್ಲಿ ಸದ್ಯ ಹ–ರಿದಾಡುತ್ತಿರುವ ಒಂದು ವಿಶೇಷವೇ ಈ ತಂತ್ರಜ್ಞಾನ...ಈ ತಂತ್ರಜ್ಞಾನದಿಂದ ಸತ್ತವರನ್ನು ಮಾತಾಡುವಂತೆ ಮಾಡಬಹುದು., ಆಗ ತಾನೇ ಹುಟ್ಟಿದ ಮಗುವನ್ನು ಕೂಡ ಮಾತಾಡಿಸಬಹುದು. ಸತ್ತು ಸ್ವರ್ಗ ಸೇರಿದವರನ್ನು ಧರೆಗಿಳಿಸಬಹುದು. ಹೇಳುತ್ತಾ ಹೋದರೆ ಇನ್ನು ಏನೇನೋ ಇವೆ... ಈ ಕೃತಕ ಬುದ್ಧಿಮತ್ತೆಯ ಪಿತಾಮಹ ಮನುಷ್ಯ. ಮನುಷ್ಯ ಅದೆಷ್ಟು ಬುದ್ಧಿವಂತ ಅನ್ನೋದಕ್ಕೆ ಸಾಕ್ಷಿ ಈ artificial intelligence ಅನ್ನೋ ಒಂದು ತಂತ್ರಜ್ಞಾನ.

Ài ತಂತ್ರಜ್ಞಾನ ಬಳಕೆಗೆ ಬಂದು, ಹೆಚ್ಚು ಸಮಯ ಕಳೆದಿಲ್ಲ. ಆದರೂ ಎಲ್ಲೆಡೆಯಲ್ಲಿ ತನ್ನ ಛಾಪನ್ನು ಮೂಡಿಸಿ, ಅತೀ ವೇಗದಲ್ಲಿ ಸಾಗುತ್ತಿದೆ.ಎಷ್ಟೋ ಕಾರ್ಯಕ್ರಮಗಳಲ್ಲಿ, ಅದರಲ್ಲೂ ಈಗಿನ ಮದುವೆ ಸಮಾರಂಭಗಳಲ್ಲಿ ಈ ತಂತ್ರಜ್ಞಾನದ ಬಳಕೆ ಹೆಚ್ಚಾಗಿಯೇ ನಡೆಯುತ್ತಿದೆ... ಇತ್ತೀಚಿಗೆ ಒಂದು ಮದುವೆಯಲ್ಲಿ ಭಾಗವಹಿಸಿದ್ದೆ. ಆ ಮದುವೆ ಹೆಣ್ಣಿನ ತಂದೆ ಸಾವನ್ನಪ್ಪಿ 2 ವರ್ಷ ಕಳೆದಿತ್ತಂತೆ. ಈ ಯ ಣಜಛಿಟಿಂಟಂಥಿ ಮೂಲಕ ಅವರ ತಂದೆ ಬಂದು ವಧು ವರರಿಗೆ ಆಶೀರ್ವಾದ ಮಾಡುವಂತೆ ಮಾಡಿದ್ದರು. ಆ ವಿಡಿಯೋ ನೋಡಿದಾಗ ನನ್ನ ತಂದೆಯನ್ನು ನೆನೆದು ನನ್ನ ಕಣ್ತುಂಬಿತ್ತು. ಈ ತರನೂ ಒಬ್ಬ ವ್ಯಕ್ತಿಗೆ ಣಜಛಿಟಿಂಟಂಥಿ ಯ ಮೂಲಕ ಜೀವ ಕೊಡಬಹುದಾ? ಎಂದು ನೆನೆದು ನಿಜಕ್ಕೂ ಖುಷಿಯಾಯ್ತು.. ಆ ಜೀವಗಳು ಎಷ್ಟು ಭಾವುಕವಾಗಿದ್ದವು ಎಂದರೆ, ಅದನ್ನು ಮಾತಲ್ಲಿ ಹೇಳಲಾಗುತ್ತಿಲ್ಲ.

ನಾವು,ತಂತ್ರಜ್ಞಾನ ಇಲ್ಲದ ಕಾಲದಲ್ಲೂ ಬದುಕಿದ್ದೆವು, ತಂತ್ರಜ್ಞಾನ ಹೈ ಸ್ಪೀಡ್ ನಲ್ಲಿ ಓಡುತ್ತಿರುವ ಕಾಲದಲ್ಲೂ ಬದುಕಿದ್ದೇವೆ.ಬಹುಷಃ ಈ ಎರಡೂ ತಲೆಮಾರುಗಳನ್ನು ನೋಡಿರುವ 80,90 ರ ದಶಕದಲ್ಲಿ ಹುಟ್ಟಿದ ನಮಗೆ ಮಾತ್ರ ಇವೆಲ್ಲ ಸಾಧ್ಯವಾಗಿದೆ ಎನಿಸುತ್ತಿದೆ.... ಯಾವುದೇ ತಂತ್ರಜ್ಞಾನ ಬಂದರೂ ಅದನ್ನು ನಾವು ಹೇಗೆ ಬಳಸಿಕೊಳ್ಳುತ್ತೇವೆ ಅನ್ನುವುದು ನಮ್ಮ ಮೇಲೆಯೇ ನಿರ್ಧಾರವಾಗಿದೆ. ಅದಕ್ಕೆ ಅಲ್ವೇ ಹಿರಿಯರು ಅತಿಯಾದರೇ ಅಮೃತವು ವಿಷ ಅಂತ ಹೇಳಿರುವುದು....

ಒಬ್ಬ ಒಳ್ಳೆ ವ್ಯಕ್ತಿ ದುಶ್ಚಟ ಇರೋ ಇನ್ನೊಬ್ಬ ವ್ಯಕ್ತಿಯೊಂದಿಗೆ ಸೇರಿ ಕೆಟ್ಟಿರುವುದು ಇದೇ, ಹಾಗೆ ಒಬ್ಬ ಕೆಟ್ಟ ವ್ಯಕ್ತಿ ಒಳ್ಳೆಯವರ ಜೊತೆ ಸೇರಿ ಒಳ್ಳೆಯವನಾಗಿ ಜೀವನ ಕಟ್ಟಿಕೊಂಡಿದ್ದು ಕೂಡ ಇದೇ. ಆದರೆ ವಾಸ್ತವದಲ್ಲಿ ಸಹವಾಸದಿಂದ ಸನ್ಯಾಸಿ ಕೆಟ್ಟ ಅಂತಾರೆಯೇ ಹೊರತು, ಒಳ್ಳೆಯವನಾಗಿರುವುದರ ಬಗ್ಗೆ ಉಲ್ಲೇಖವಿಲ್ಲ. ಇದ್ದರೂ ಅದು ತುಂಬಾ ಕಡಿಮೆ... ಇದೇ ತರಾನೇ ಈ technology ಕೂಡ...

ಒಮ್ಮೊಮ್ಮೆ ಆಲೋಚನೆ ಮಾಡಿದರೆ ನಿಜಕ್ಕೂ ಈ ತಂತ್ರಜ್ಞಾನ ಒಂದು ಅದ್ಭುತವೇ ಸರಿ. ಕಳ್ಳರನ್ನು ಹಿಡಿಯಲು, ಪಾಪಿಗಳ ಹೆಡೆಮುರಿ ಕಟ್ಟಲು ಪೊಲೀಸ್ ಇಲಾಖೆಗೆ ಸಾಕಷ್ಟು ಸಹಾಯವಾಗಿದೆ.. ಆದರೆ ಕಿಡಿಗೇಡಿಗಳು ಇದನ್ನು ಹೆಣ್ಣುಮಕ್ಕಳ ವಿಷಯದಲ್ಲಿ, ಹೆಚ್ಚಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅದೇನೇ ಇರಲಿ, ಯಾವುದೇ ತಂತ್ರಜ್ಞಾನವಿರಲಿ ಹೆಚ್ಚೆಚ್ಚು, ಆವಿಷ್ಕಾರವಾದಂತೆ, ಸಮಾಜದಲ್ಲಿ ಅಪರಾಧಗಳು ಕೂಡ ಹೆಚ್ಚುತ್ತಾ ಹೋಗುತ್ತಿವೆ.. ಯಾವುದನ್ನೂ ಹೇಗೆ ಬಳಸುತ್ತೇವೋ, ಅದರ ಮೇಲೆ ಎಲ್ಲವೂ ನಿಂತಿದೆ... ಆದ್ರೆ ಏನು ಮಾಡೋದು, ಮನುಷ್ಯ ಕೋತಿಬುದ್ಧಿಯವನು.ಎಲ್ಲಾ ತಿಳಿದಿರುತ್ತೆ, ಸರಿ ತಪ್ಪುಗಳ ವಿಮರ್ಶೆ ಮಾಡೋದು ಕೂಡ ಗೊತ್ತಿರುತ್ತೆ, ಆದ್ರೆ ಯಾವುದನ್ನು, ಎಲ್ಲಿ ಬಳಸಬೇಕು, ಹೇಗೆ ಬಳಸಬೇಕು ಎಂಬುದನ್ನು ಮಾತ್ರ ಮರೆತು ಬಿಡ್ತಾನೆ.ಹಣ ಸಂಪಾದನೆಗಾಗಿ ಯಾವ ಮಟ್ಟಕ್ಕಾದರೂ, ಇಳಿಯಲು ತಯಾರಾಗಿರ್ತಾನೆ.ಈ ತಂತ್ರಜ್ಞಾನ ಒಳ್ಳೆಯದಕ್ಕಿಂತ ಕೆಟ್ಟ ಕೆಲಸಗಳಿಗೆ ದುರ್ಬಳಕೆಯಾಗುತ್ತಿರುವುದನ್ನು ಕಂಡಾಗ ಎತ್ತ ಸಾಗುತ್ತಿದೆ ಈ ನಾಗರೀಕತೆ ಎನಿಸುತ್ತದೆ.ಸಮಾಜದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲು, ಇಂತಹ ನೂರಾರು ತಂತ್ರಜ್ಞಾನಗಳನ್ನು ಬಳಸಿಕೊಂಡು ಸಮಾಜ ಘಾತುಕ ಕೆಲಸದಲ್ಲಿ ತೊಡಗಿಸಿಕೊಂಡವರಿಗೇನು ಕಡಿಮೆಯಿಲ್ಲ. ಆದ್ರೆ ಇಂತವರನ್ನೇ ಜನ ನಂಬೋದು,ಬೆಲೆ ಕೊಡೋದು... ಅನ್ಯಾಯ ಮಾಡುವವ–ರಿಗೆ ಇರೋ ಗೌರವ, ನೇರ ನಡೆ, ನುಡಿ, ನಿಸ್ವಾರ್ಥದಿಂದ ಬದುಕುವವರಿಗಿಲ್ಲ... ಒಟ್ಟಿನಲ್ಲಿ ಹೇಳುವುದಾದರೆ, ಕೃತಕ ಬುದ್ಧಿಮತ್ತೆ, ಮಾರಕವೂ ಹೌದು, ಪ್ರೇರಕವು ಹೌದು. ಯಾವುದೇ ತಂತ್ರಜ್ಞಾನ ಬಂದರೂ,ಇದನ್ನು ಹೇಗೆ ಬಳಸಿಕೊಂಡು ಹೋಗುತ್ತೇವೆ ಎನ್ನುವುದು ನಮ್ಮ ಮೇಲೆಯೇ ನಿರ್ಧಾರವಾಗಿದೆ.ಬಳಸುವ ರೀತಿ ಸರಿಯಾಗಿದ್ದರೆ, ಎಲ್ಲವೂ ಬಂಗಾರವೇ., ಎಲ್ಲವೂ ಅದ್ಭುತವೇ, ಆದ್ರೆ ಈ ಯುವ ಪೀಳಿಗೆಗೆ ಬಂಗಾರಕ್ಕಿಂತ ಕಾಗೆ ಬಂಗಾರದ ಕಡೆಗೆ ಒಲವು ಹೆಚ್ಚು..ಜೀವನದ ಮೇಲೆ ಪ್ರೀತಿ ಇದ್ದವರು, ಸ್ವಾಥ–ರ್ವಿಲ್ಲದೇ ಬದುಕುವವರು ಯಾವುದನ್ನೂ ದುರುಪಯೋಗ ಪಡಿಸಿಕೊಳ್ಳುವುದಿಲ್ಲ ಎಂಬುದು ಮಾತ್ರ ಅಕ್ಷರಷಃ ಸತ್ಯ...

ಪ್ರೀತಿಯಿಂದ,

-Anupama Gayathri

ಬಳ್ಳಾರಿ.

ಕರುನಾಡ ಕಂದ
ಸಂಪುಟ 04 | ಸಂಚಿಕೆ 21
ದಿನಾಂಕ: 16-09-2025 ಪುಟಗಳು:16

# ಸಮಸ್ಯೆಗಳ ಕಂತೆಯಲ್ಲಿ ಸಂತೆ.. ಹೇಳತೀರದು ಸಂತೆಯ ವ್ಯಥೆ !?

**ವಿಜಯನಗರ / ಕೂಡ್ಲಿಗಿ :**

**ಅಲೆಮಾರಿ ಸಂತೆ ಮಾರುಕಟ್ಟೆ :** ಕೂಡ್ಲಿಗಿ ಪಟ್ಟಣ ಅಭಿವೃದ್ಧಿಯತ್ತ ಸಾಗುತ್ತಿದೆಯಾದರೂ , ಸಂತೆ ಮಾರುಕಟ್ಟೆ ಮಾತ್ರ ಸಮಸ್ಯೆಗಳ ಕಂತೆಯಾಗಿದೆ ಅದು ಹೇಳತೀರದಷ್ಟು ವ್ಯಥೆಗಳಿಂದ ಕೂಡಿದೆ. ಕೂಡ್ಲಿಗಿಯ ಯುವ ಪೀಳಿಗೆಗೆ ಸಂತೆ ಅಂದ್ರೆ ನೆನಪಿಗೆ ಬರೋದು , ಹೊಸಪೇಟೆ ರಸ್ತೆಯಿಂದ ಕೊಟ್ಟೂರು ರಸ್ತೆ ಮತ್ತು ಮದಕರಿ ವೃತ್ತದಿಂದ ಲಕ್ಷ್ಮೀ ಬಜಾರ್ ಅಥವಾ ಹಳೇ ಸಾರ್ವಜನಿಕ ಆಸ್ಪತ್ರೆ ವಲಯ. ಅದಕ್ಕಿಂತ ಮುನ್ನ ಹತ್ತಾರು ವರ್ಷಗಳ ಹಿಂದೆ , ಈಗಿನ ಅಂಚೆ ಕಚೇರಿ ಕೊಟ್ಟೂರು ರಸ್ತೆ ಹಾಗೂ ಹಳೇ ಅಗ್ನಿ ಶಾಮಕ ಠಾಣೆಯ ವಲಯದಲ್ಲಿ ನಡೆಸಲಾಗುತ್ತಿತ್ತು. ಆದ್ರೆ ಕೆಲ ವರ್ಷಗಳಿಂದ ಸಂತೆ ಮಾರುಕಟ್ಟೆ , ಅಲೆಮಾರಿ ಸಂತೆ ಮಾರುಕಟ್ಟೆಯಾಗಿ ಪರಿವರ್ತನೆಯಾಗಿದೆ. ತಾಲೂಕು ಕೇಂದ್ರಸ್ಥಾನವಾಗಿದ್ದರೂ ಕೂಡಾ , ಪಟ್ಟಣದಲ್ಲಿ ಸಂತೆಗಾಗಿ ನಿಗಧಿತ ಸ್ಥಳ ದೊರಕದಾಗಿದೆ. ಅಲೆಮಾರಿ ಸಂತೆಯಾಗಿಬಿಟ್ಟಿದೆ ಇದು ಪಟ್ಟಣದ ನಾಗರೀಕರ ದುರ್ದೈವವಾಗಿದ್ದು , ಈವರೆಗೂ ಸುಸಜ್ಜಿತ ಸಂತೆಗೆಂದು ಸ್ವಂತ ಮೈದಾನವನ್ನು ಕಲ್ಪಿಸಲಾಗಿಲ್ಲ. ಸದ್ಯ ಕೂಡ್ಲಿಗಿ ಪಟ್ಟಣದಲ್ಲಿ ಸಂತೆ ಮೊರಬ ಅಥವಾ ಬೆಂಗಳೂರು ರಸ್ತೆಯಲ್ಲಿನ , ಶ್ರೀಕೊತ್ತಲಾಂಜನೇಯ ಬಯಲು ಜಾಗ ಎಂದೇ ಗುರುತಿಸಿರುವ ಬಯಲು ಪ್ರದೇಶದಲ್ಲಿ ಜರುಗುತ್ತಿದೆ. ಕಾರಣಾಂತರದಿಂದಾಗಿ ಸೆ 5 ರಂದು ಸಂತೆಯನ್ನು , ಎಪಿಎಂಸಿ ಮಾರುಕಟ್ಟೆ ವಲಯದಲ್ಲಿ ನಡೆಸಲಾಯಿತು. ಅದೇನೆ ಇರಲಿ ತಾಲೂಕು ಕೇಂದ್ರಸ್ಥಾನವಾಗಿರುವ ಕೂಡ್ಲಿಗಿ ಪಟ್ಟಣದಲ್ಲಿ , ಸಂತೆಗೆಂದು ನಿಗಧಿತ ಸ್ಥಳ ದೊರಕದಾಗಿದೆ ಅದು ಅಲೆಮಾರಿ ಸಂತೆಯಾಗಿ ಮಾರ್ಪಾಟಾಗಿದೆ. ಸಂತೆ ಕೂಡ್ಲಿಗಿ ನಾಗರೀಕರ ಪಾಲಿಗೆ ಸಮಸ್ಯೆಗಳ ಕಂತೆಯಾಗಿದ್ದು , ಅಸಂಖ್ಯಾತ ಅವ್ಯವಸ್ಥೆಗಳ ಆಗರವಾಗಿದ್ದು ಹೇಳತೀರದ ವ್ಯಥೆಗಳಿಂದ ಕೂಡಿದೆ.

**ಬಡವರಿಗೆ ಈ ಸಂತೆ ದೂರ ಹಾಗೂ ಬಲು ದುಬಾರಿ..!?:** ಕೂಡ್ಲಿಗಿ ಪಟ್ಟಣದ ಸಂತೆ ನಾಗರೀಕರ, ಗ್ರಾಮೀಣ ಜನತೆಯ ಪಾಲಿಗೆ ದೂರ ದೂರವಾಗಿದೆ. ಮಾತ್ರವಲ್ಲ ಸಂತೆ ಪಟ್ಟಣದ ಹೊರವಲಯದಲ್ಲಿದ್ದು , ಮಹಿಳೆಯರಿಗೆ ವೃದ್ಧರಿಗೆ ಬಲು ದೂರ ಮಾತ್ರವಲ್ಲ, ಸಂತೆ ಬಲು ದುಬಾರಿಯಾಗಿದೆ ಎನ್ನುತ್ತಾರೆ ಗ್ರಾಮೀಣ ಪ್ರಜ್ಞಾವಂತರು. ಕಾರಣ ಪಟ್ಟಣದ ಹೃದಯ ಭಾಗದಲ್ಲಿ ಜರುಗುತ್ತಿದ್ದ ಸಂತೆಯನ್ನು , ಪಟ್ಟಣದ ಯಾವುದೋ ಮೂಲೆಯಲ್ಲಿ ಅದು ಅಭಿವೃದ್ಧಿ ಪಥ-ದತ್ತ ಸಾಗುವ ಜಾಗಕ್ಕೆ ಸ್ಥಳಾಂತರಿಸಲಾಯಿತು. ಅದು ಅವೈಜ್ಞಾನಿಕ ನಿಲುವು ಆಗಿದ್ದು , ಬಡವರಿಗೆ ರೈತಾಪಿ ಜನರಿಗೆ ಗ್ರಾಮೀಣ ಜನರಿಗೆ ಅನಾನುಕೂಲವಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಕಾರಣ ಸಂತೆ ಆರ್ಥಿಕ ಸಬಲರೇ ಹೆಚ್ಚಿರುವ ನಗರಾಭಿವೃದ್ಧಿ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದ್ದು , ಅಲ್ಲಿಗೆ ಡಾ. ಬಿ.ಆರ್. ಅಂಬೇಡ್ಕರ್ ನಗರ ಹಾಗೂ ರಾಜೀವ ಗಾಂಧಿನಗರವಾಸಿಗಳಿಗೆ



ತುಂಬಾ ದೂರವಾಗಲಿದೆ. ಬಹುತೇಕ ಗ್ರಾಮೀಣ ಪ್ರದೇಶದವರಿಗೆ ಹೇಳತೀರದಂತಹ , ಕಷ್ಟ ನಷ್ಟ ಅನುಭವಿಸುವಂತಾಗಿದೆ ಎಂದು ಕೆಲ ಸಂಘಟನೆಗಳ ಮುಖಂಡರ ಅಭಿಪ್ರಾಯವಾಗಿದೆ.

ಎಸ್.ಸಿ, ಎಸ್.ಟಿ ಜನಾಂಗದವರು , ರೈತರು, ಕಾರ್ಮಿಕರು, ಬಡವರು, ದೀನ ದಲಿತರು ಹೆಚ್ಚಿರುವ ಅಂಬೇಡ್ಕರ್ ನಗರ ರಾಜೀವ ಗಾಂಧಿ ನಗರ ವಾಸಿಗಳಿಗೆ ಸಂತೆ ದೂರ ಮಾತ್ರವಲ್ಲ ಬಲು ದುಬಾರಿಯಾಗಿದೆ ಎನ್ನಲಾಗುತ್ತಿದೆ. ಗ್ರಾಮೀಣ ಜನರು ಕಡಿಮೆ ಬೆಲೆಗೆ ಸಂತೆ ಮಾಡುವ ನಿರೀಕ್ಷೆಯನ್ನು ಕೈಬಿಟ್ಟಿದ್ದಾರೆ , ಅವರಿಗೂ ಕೂಡಾ ತೀರ ದೂರ ಹಾಗೂ ದುಬಾ-ರಿಯಾಗಿದೆ ಎಂದು ಅಸಂಖ್ಯಾತ ಮಹಿಳೆಯರು ತಿಳಿಸಿದ್ದಾರೆ. ಕಾರಣ ಬಸ್ ನಿಲ್ದಾಣದಿಂದ ಪ್ರಮುಖ ವೃತ್ತಗಳಿಂದ ಬಹು ದೂರವಿರುವ ಸಂತೆ , ಮಾರುಕಟ್ಟೆಗೆ ತೆರಳಲು ವಾಹನಗಳನ್ನು ಅವಲಂಭಿಸಲೇಬೇಕಾಗುತ್ತದೆ. ಕೆಲವು ಮಹಿಳೆಯರು ಹಳ್ಳಿಯಿಂದ ಆಧಾರ್ ಕಾರ್ಡ್ ತೋರಿಸಿ ಉಚಿತವಾಗಿ ಬಂದರೂ ಕೂಡಾ , ಸಂತೆಗೆ ತೆರಳಲು ತಾವು ಖಾಸಗಿ ವಾಹನಕ್ಕೆ ದುಬಾರಿ ಬಾಡಿಗೆ ನೀಡಲೇಬೇಕಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ. ಕಳೆದ ಹಲವು ವರ್ಷಗಳ ಹಿಂದೆ 100ರಿಂದ 200ರೂ ಸಂತೆ ಮಾಡುವ ಸಂದರ್ಭದಲ್ಲಿ , ಈಗ 250ರಿಂದ 400 ರೂ. ಹೆಚ್ಚುವರಿ ಹಣ ಭರಿಸುವ ದುಸ್ಥಿತಿ ನಿರ್ಮಾಣವಾಗಿದೆ. ಈಗಿನ ಸಂತೆ ಪಟ್ಟಣದ ಹೊರ ವಲಯದಲ್ಲಿರುವುದರಿಂದಾಗಿ , ಸಂತೆಗಾಗಿ ದುಪ್ಪಟ್ಟು ಬೆಲೆ ತೆರಲೇಬೇಕಾಗಿದೆ. ಈ ಮೊದಲಿನಂತೆಯೇ ಪಟ್ಟಣದ ಹೃದಯ ಭಾಗದಲ್ಲಿಯೇ , ಸಂತೆ ನಡೆಸಿದರೆ ಪಟ್ಟಣದವರಿಗೆ ಗ್ರಾಮೀಣ ಜನರಿಗೆ ಎಲ್ಲರಿಗೂ ಕ್ಷೇಮ ಎಂದು ತಿಳಿಸಿದ್ದಾರೆ.

**ಹಳೇ ಸಂತೆ ಮೈದಾನದಲ್ಲಿ ಸಂತೆ ಮಾಡಿ ಸಾರ್ವಜನರ ಹಿತ ಕಾಪಾಡಿ : ಸ್ಥಳೀಯರ ಮನವಿ:** ಸಂತೆ ಬಡವರ, ದೀನ ದಲಿತರ, ರೈತರ, ಕಾರ್ಮಿಕರ , ಅಲ್ಪಸಂಖ್ಯಾತರ ಪರಿಶಿಷ್ಟ ವರ್ಗ ಪರಿಶಿಷ್ಟ ಪಂಡದ ಜನರಿಗೆ ಅಕ್ಷಯ ಪಾತ್ರೆಯಾಗಿದೆ. ಅಸಂಖ್ಯಾತ ಗ್ರಾಮೀಣ ಜನರ ಪಾಲಿಗೆ ವ್ಯಾಪಾರ ಕೇಂದ್ರವಾಗಿದೆ , ನೂರಾರು ವ್ಯಾಪರಿಗಳ ಪಾಲಿನ ಕಾಮಧೇನುವಾಗಿದೆ. ಅಂತಹ ಸಂತೆ ಪಟ್ಟಣದಾಚೆಗೆ ಸ್ಥಳಾಂತರಗೊಂಡ ಪರಿಣಾಮ , ಸರ್ವರಿಗೂ ಹತ್ತಾರು ಬಗೆಯ ಅನಾನುಕೂಲಗಳನ್ನು ಹುಟ್ಟುಹಾಕಿದೆ ಎಂದು



## ಪ್ರಭಾವಿಗಳು ಮನಸ್ಸು ಮಾಡಬೇಕಿದೆ:

ಕಾರಣ ಪಟ್ಟಣದ ಹಾಗೂ ತಾಲೂಕಿನ ಪ್ರಭಾವಿ ಜನಪ್ರತಿನಿಧಿಗಳು , ಶೀಘ್ರವೇ ಉತ್ತಮ ಹಾಗೂ ಜನಪರ ನಿಲುವು ತಾಳಬೇಕಿದೆ.ಇದಕ್ಕೆ ಸಂಬಂಧಿಸಿದಂತೆ ಸಂಬಂಧ ಪಟ್ಟ ಇಲಾಖಾಧಿಕಾರಿಗಳು , ಸಂತೆಯನ್ನು ಹಳೇ ಸಂತೆ ಮೈದಾನದಲ್ಲಿಯೇ ಮುಂದುವರಿಸುವಲ್ಲಿ ಯೋಚಿಸಬೇಕಿದೆ. ಅಗತ್ಯ ಮೂಲಭೂತ ಸೌಕರ್ಯಗಳೊಂದಿಗೆ ಸುಸಜ್ಜಿತ ಸಂತೆ ಮೈದಾನ ನಿರ್ಮಾಣ ಮಾಡಿ, ಸಕಲರಿಗೆ ಕ್ಷೇಮವಾಗುವ ಸಂತೆ ಮಾರುಕಟ್ಟೆ ನಿರ್ಮಾಣಕ್ಕೆ ಅಗತ್ಯ ಕ್ರಮಗಳನ್ನು ಶೀಘ್ರವಾಗಿ ಕೈಗೊಳ್ಳಬೇಕೆಂದು ನಾಗ-ರೀಕರು ಒತ್ತಾಯಿಸಿದ್ದಾರೆ. ಈ ನಿಲುವಿಗೆ ಪಟ್ಟಣದ ಹಿರಿಯ ನಾಗರೀಕರು ಹಾಗೂ ಪಟ್ಟಣದ ಸುತ್ತ ಮುತ್ತಲ ಗ್ರಾಮಗಳ ಜನರು , ಕಾರ್ಮಿಕರ ಸಂಘಟನೆಗಳು , ರೈತರ ಸಂಘಟನೆಗಳು , ಮಹಿಳಾ ಸಂಘಟನೆಗಳು , ಕನ್ನಡಪರ ಸಂಘಟನೆಗಳು ಹಿರಿಯ ನಾಗರೀಕರು ಈ ಮೂಲಕ ಒತ್ತಾಯಿಸಿದ್ದಾರೆ.

ಹಲವು ಹೋರಾಟಗಾರರು ತಿಳಿಸಿದ್ದಾರೆ. ಕಾರಣ ಪಟ್ಟಣದ ಹಳೇ ಸಂತೆ ಮಾರುಕಟ್ಟೆಯಲ್ಲಿ ಮತ್ತು ಪಾಳುಬಿದ್ದಿರುವ ಹಳೇ ಸಾರ್ವಜನಿಕ ಆಸ್ಪತ್ರೆ ಕಟ್ಟಡಗಳನ್ನು ತೆರವುಗೊಳಿಸಿ, ಸಮತಟ್ಟಾಗಿಸಿ ಸಂತೆ ವ್ಯಾಪಾರಕ್ಕೆ ವೇದಿಕೆ ಮಾಡಿಕೊಡಬಹುದಾಗಿದೆ, ಪಾಳುಬಿದ್ದಿರುವ ಹಳೇ ಆಸ್ಪತ್ರೆಯ ಸಿಬ್ಬಂದಿಯವರ ವಸತಿ ಕಟ್ಟಡಗಳನ್ನು ತೆರವುಗೊಳಿಸಿ , ಸಮತಟ್ಟಾಗಿಸಿದ ಸ್ಥಳದಲ್ಲಿ ಸುಸಜ್ಜಿತ ಸಂತೆ ಮೈದಾನ ನಿರ್ಮಿಸಬೇಕಿದೆ. ಇದರಿಂದಾಗಿ ಡಾ.ಬಿ.ಆರ್. ಅಂಬೇಡ್ಕರ್ ನಗರ, ರಾಜೀವ ಗಾಂಧೀನಗರ, ಶ್ರೀಪೇಟೆಬಸವೇಶ್ವರ ನಗರ ಹಾಗೂ ರಾಮನಗರ ವಾಸಿಗಳಿಗೆ ತುಂಬಾ ಅನುಕೂಲವಾಗಲಿದೆ ಎಂದು ನಾಗರೀಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪಟ್ಟಣ ಪಂಚಾಯ್ತಿಯ ಎಲ್ಲಾ ವಾರ್ಡ್ ಗಳ ವಾಸಿಗಳಿಗೆ , ಪಟ್ಟಣದ ಸುತ್ತ ಮುತ್ತಲ ಎಲ್ಲಾ ಗ್ರಾಮೀಣ ಜನರಿಗೆ ಇದರಿಂದ ತುಂಬಾ ಅನುಕೂಲವಾಗಲಿದೆ.

**-ಕರುನಾಡ ಕಂದ**

# ಕೇರಳಾಪುರ : ಗ್ರಾ.ಪಂ. ಮಳಿಗೆಗಳ ಕಾಮಗಾರಿಗೆ ಗುದ್ದಲಿ ಪೂಜೆ



ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಕೇರಳಾಪುರ ಗ್ರಾಮ ಪಂಚಾಯಿತಿಯಲ್ಲಿ ನಿವೇಶನಗಳು ಹಾಗೂ ಗ್ರಾಮ ಪಂಚಾಯಿತಿ ಮಳಿಗೆಗಳ ಕಾಮಗಾರಿಗೆ ಗುದ್ದಲಿ ಪೂಜೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಎ. ಮಂಜುರವರು , ಕೇರಳಾಪುರ ಪಂಚಾಯತಿ ಪಿ.ಡಿ. ಓ ಪ್ರತಾಪ್, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಸಿಬ್ಬಂದಿ ಸೇರಿದಂತೆ ಸಾರ್ವಜನಿಕರು ಹಾಜ-ರಿದ್ದರು.

**ವರದಿ ಜೆ. ಎಸ್. ರಾಕೇಶ್ ಗೌಡ**



ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16–09–2025 ಪುಟಗಳು:16

# ಬೇಲಿಯೇ ಎದ್ದು ಹೊಲ ಮೇಯ್ದರೆ !?





ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕಿನ ನಂದಿಹಾಳ ಗ್ರಾಮ ಪಂಚಾಯತಿ ಅಧಿಕಾರಿ ಕಾನೂನು ಚೌಕಟ್ಟನ್ನು ಮೀರಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಸ್ಥಳೀಯ ಗ್ರಾಮಸ್ಥರು ಆರೋಪಿಸಿದ್ದಾರೆ.

'ಈ ವಿಷಯವನ್ನು ಬೆಳಗಾವಿ ಜಿಲ್ಲಾಧಿಕಾರಿ ಅವರ ಗಮನಕ್ಕೆ ತಿಳಿಸಿ ನಮಗೆ ನ್ಯಾಯ ಕೊಡಿಸಿ ಎಂದು ಬಸವ್ವ ಬೆನ್ನಪ್ಪ ಮಾದರ ಅವರು ಶ್ರೀ ಅಶೋಕ ಮ. ಮ. ಪಟ್ಟಣ ಶಾಸಕರು ರಾಮದುರ್ಗ ಹಾಗೂ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನಸಭೆ ಬೆಂಗಳೂರು ಇವರ ಗಮನಕ್ಕೆ ಆದಷ್ಟು ಬೇಗನೆ ತಲುಪಿಸಿ, ನಮ್ಮ ಕ್ಷೇತದ್ರ ಶಾಸಕರ ಹೆಸರನ್ನು ಹಾಳು ಮಾಡುತ್ತಿರುವ ಸರಕಾರಿ ಅಧಿಕಾರಿಯನ್ನು ಅಧಿಕಾರದಿಂದ ವಜಾಗೊಳಿಸಿ ಕಾನೂನಿನ ಮೂಲಕ ನಂದಿಹಾಳ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪಿಡಿಒ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಭೀಮ್ ಆರ್ಮಿ ಭಾರತ ಏಕತಾ ಮಿಷನ್ ಅಧ್ಯಕ್ಷರು ಶ್ರೀ ಚಂದ್ರಶೇಖರ್ ಆಜಾದ್, ಅಂಬೇಡ್ಕರ ಸೇವಾ ಸಮಿತಿ ಕರ್ನಾಟಕ ಸಂಸ್ಥಾಪಕರ ಅಧ್ಯಕ್ಷರು ಡಾ. ಕೆ. ಎಮ್. ಸಂದೇಶ, ಅಖಿಲ ಕರ್ನಾಟಕ ಚೇತನ ಅಂಹಿಸಾ ರಾಷ್ಟ್ರೀಯ ದಲಿತ ಸಂಘ, ಭೀಮ ಆರ್ಮಿ ಭಾರತ ಏಕತಾ ಮಿಷನ್ ಬೆಳಗಾವಿ, ಭೀಮ ಆರ್ಮಿ ಮತೀನಕುಮಾರ ವಿಜಯಪುರ, ವಿಶ್ವ ಮಾನವ ಅಂಬೇಡ್ಕರ್ ಜೈ ಭೀಮ, ಡಿ. ಎಸ್. ಎಸ್ ಶ್ರೀ ಪರಶುರಾಮ ನೀಲನಾಯಕ ಬಾಗಲಕೋಟೆ,

ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷರು ಶ್ರೀ ಬಸುರಾಜ ಧರ್ಮಂತಿ ಬಾಗಲಕೋಟೆ, ಕಾಂತರಾಜ್ ಚೌಡದೇನಹಳ್ಳಿ ರಾಜ್ಯಾಧ್ಯಕ್ಷರು ಎ.ಎಸ್.ಎಸ್.ಕೆ, ಎನ್. ಕೆ. ಅರ್ಜುನ ಕಲಬುರ್ಗಿ ಜಿಲ್ಲಾಧ್ಯಕ್ಷರು ಸೇರಿದಂತೆ ಇನ್ನೂ ಹಲವಾರು ಸಂಘಟನೆಗಳ, ನಾಯಕರು, ಕಾರ್ಯಕರ್ತರು ಮುಂದಿನ ದಿನಮಾನಗಳಲ್ಲಿ ನ್ಯಾಯಕ್ಕಾಗಿ ರಾಜ್ಯ ಮತ್ತು ಅಂತರ್ ರಾಜ್ಯ ಮಟ್ಟದಲ್ಲಿ ಉಗ್ರವಾದ ಹೋರಾಟವನ್ನು ಮಾಡಲಾಗುವದು ಎಂದು ಬಸವ್ವ, ಬೆನ್ನಪ್ಪ ಮಾದರ ಅವರ ಕುಟುಂಬಕ್ಕೆ ಧೈರ್ಯವನ್ನು ತುಂಬುತ್ತಾ ನಿಮ್ಮೊಂದಿಗೆ ಸದಾ ಕಾನೂನಿನ ರೀತಿಯಲ್ಲಿ ಸಕಾರಾತ್ಮಕವಾಗಿರಲಿ ನಿಮಗೆ ಸಿಗಬೇಕಾಗಿರುವ ಮೂಲಭೂತ ಸೌಕರ್ಯಗಳು ಸಿಗುವರೆಗೂ ನಿಮ್ಮೊಂದಿಗೆ ನಾವೆಲ್ಲರೂ ಮಾನಸಿಕವಾಗಿ ನೊಂದ ಕುಟುಂಬದ ಜೊತೆಗೆ ನಾವು ಇದ್ದೀವಿ ಎಂದು ಧೈರ್ಯ ತುಂಬಿದರು.

**ವರದಿ: ಯಮನಪ್ಪ ಮಾದರ**

### ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ( ಪಿಡಿಒ ) ರವರ ಮುಖ್ಯ ಕಾರ್ಯಗಳು :

ಗ್ರಾಮ ಪಂಚಾಯಿತಿಯ ಆಡಳಿತ, ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಹಣಕಾಸು ನಿರ್ವಹಣೆ, ಗ್ರಾಮಗಳ ಮೂಲಸೌಕರ್ಯ ಅಭಿವೃದ್ಧಿ, ಮತ್ತು ಪಂಚಾಯಿತಿಯ ಎಲ್ಲಾ ಕೆಲಸಗಳ ಮೇಲ್ವಿಚಾರಣೆ ಮಾಡುವುದನ್ನು ಒಳಗೊಂಡಿವೆ ಎನ್ನುವ ಮೂಲ ಉದ್ದೇಶವನ್ನು ಮರೆತು ಅಧಿಕಾರ ದುರುಪಯೋಗಿಸಿಕೊಂಡರೂ ಫಲಾನುಭವಿಗಳಿಗೆ ಸಿಗಬೇಕಾದ ಮೂಲ ಭೂತ ಸೌಕರ್ಯಗಳು ವಂಚಿಸಿ ಅಧಿಕಾರ ಕರ್ತವ್ಯ ಮರೆತು ಸಾರ್ವಜನಿಕರಿಗೆ ಮೋಸ ಮಾಡಿರುತ್ತಾರೆ.

### ಗ್ರಾಮಸ್ಥರ ಸಮಸ್ಯೆಗಳಿಗೆ ಪರಿಹಾರ

ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ಆಲಿಸುವುದು ಮತ್ತು ಅವುಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವುದು ಆಗಿರುತ್ತದೆ.
ಗ್ರಾಮಸ್ಥರೊಂದಿಗೆ ಉತ್ತಮ ಸಂಬಂಧವನ್ನು ಕಾಪಾಡುವುದನ್ನು ಬಿಟ್ಟು ಸಾರ್ವನಿಕರಿಗೆ ಮಾನಸಿಕ ಸಮಸ್ಯೆಗಳಿಗೆ ಕಾರಣವಾಗಿರುತ್ತಾರೆ ಎನ್ನುವುದು ಸ್ಥಳೀಯರ ಆರೋಪ.

### ಪಿಡಿಒ ಆಡಳಿತ ನಿರ್ವಹಣೆ ಅಧಿಕಾರ

ಗ್ರಾಮ ಪಂಚಾಯಿತಿಯ ಎಲ್ಲಾ ಆಡಳಿತ ನಿರ್ವಹಣೆಯನ್ನು ನೋಡಿಕೊಳ್ಳುವುದು, ಸಭೆಗಳನ್ನು ನಡೆಸುವುದು ಮತ್ತು ಎಲ್ಲಾ ದಾಖಲೆಗಳನ್ನು ನಿರ್ವಹಿಸುವುದು.

### ಅನುಷ್ಠಾನ ಅಧಿಕಾರ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುವ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ಗ್ರಾಮ ಮಟ್ಟದಲ್ಲಿ ಅನುಷ್ಠಾನಗೊಳಿಸುವುದು. ಮೂಲಸೌಕರ್ಯಗಳ ನಿರ್ಮಾಣವನ್ನು ಖಚಿತಪಡಿಸುವುದು.

### ಹಣಕಾಸು ನಿರ್ವಹಣೆ

ಪಂಚಾಯಿತಿಯ ಹಣಕಾಸು ಲೆಕ್ಕಪತ್ರಗಳನ್ನು ನಿರ್ವಹಿಸುವುದು, ಅನುದಾನದ ಹಂಚಿಕೆ ಮತ್ತು ಬಳಕೆಯನ್ನು ನಿಯಂತ್ರಿಸುವುದು, ಮತ್ತು ಹಣದ ದುರ್ಬಳಕೆಯಾಗದಂತೆ ನೋಡಿಕೊಳ್ಳುವುದು.

### ಸಭೆಗಳ ನಿರ್ವಹಣೆ ಅಧಿಕಾರ

ಗ್ರಾಮ ಪಂಚಾಯಿತಿ ಸಭೆಗಳು ಹಾಗೂ ಗ್ರಾಮಸಭೆಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು ಮತ್ತು ತೀರ್ಮಾನಗಳನ್ನು ಅನುಷ್ಠಾನಗೊಳಿಸುವುದರ ಕರ್ತವ್ಯವನ್ನು ಮರೆತು ಜನರ ಕುಂದು ಕೊರತೆ ಸರಿಯಾಗಿ ಆಲಿಸದೆ ಇರುವುದು.

### ಅಧಿಕಾರ ಪರಿಶೀಲನೆ ಮತ್ತು ಮೇಲ್ವಿಚಾರಣೆ

ಗ್ರಾಮ ಪಂಚಾಯಿತಿಯ ಎಲ್ಲಾ ಕೆಲಸಗಳನ್ನು ಪರಿಶೀಲಿಸುವುದು ಮತ್ತು ಅವುಗಳು ಯೋಜನೆಯಂತೆ ನಡೆಯುತ್ತಿವೆಯೇ ಎಂದು ಖಚಿತಪಡಿಸುವುದನ್ನು ಮರೆತು ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುವ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಅವರಿಗೆ ಗ್ರಾಮೀಣ ಜನರ ತೆರಿಗೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನ ಬರುವ ಗ್ರಾಮೀಣ ಜನರ ಮೂಲಭೂತ ಸೌಕರ್ಯಗಳು ಮಾತ್ರ ಬೇಕು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಅವರಿಗೆ ಗ್ರಾಮೀಣ ಪ್ರದೇಶದ ವಾಸಿಸುತ್ತಿರುವ ಜನರ ಸಮಸ್ಯೆಗಳು ಮಾತ್ರ ಬೇಡ ಎಂದರೆ ಹೇಗೆ ಎನ್ನುವುದು ಗ್ರಾಮಸ್ಥರ ಪ್ರಶ್ನೆಯಾಗಿದೆ.

# ಅದ್ದೂರಿಯಾಗಿ ಜರುಗಿದ ವೀರಭದ್ರೇಶ್ವರ ಜಾತ್ರಾ ಮಹೋತ್ಸವ

**ಯಾದಗಿರಿ/ ಗುರುಮಠಕಲ್:** ಇತ್ತೀಚಿಗೆ ಜರುಗಿದ ಶ್ರೀ ವೀರಭದ್ರೇಶ್ವರನ ಜಯಂತೋತ್ಸವದಲ್ಲಿ ನೆರೆದಿದ್ದ ಭಕ್ತರು ಭಕ್ತಿಯ ಪರವಶದಲ್ಲಿ ತಮ್ಮನ್ನೇ ತಾವು ಮರೆತು ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸಾಕ್ಷಿಯಾದರು.

ಪಟ್ಟಣದ ನಾರಾಯಣಪೂರ ಬಡಾವಣೆಯಲ್ಲಿ ವೀರಭದ್ರೇಶ್ವರ ಅಗ್ಗಿ ಮಹೋತ್ಸವದ ಸಡಗರ, ಸಂಭ್ರಮದ ನಡುವೆ ನಮೋ ವೀರಭದ್ರ , ಮಾತಾ ಭದ್ರಕಾಳಿ ಎಂಬ ಜಯಘೋಷಣೆಯೊಂದಿಗೆ ಅದ್ದೂರಿಯಾಗಿ ಜರುಗಿತು. ಭಕ್ತರ ಹರ್ಷೋದ್ಗಾರದ ನಡುವೆ ವೀರ ಪುರವಂತರು ಮತ್ತು ಭಕ್ತರು ಅಗ್ನಿ ಹಾಯುವಮೂಲಕ ವೀರಭದ್ರೇಶ್ವರನ ಕೃಪೆಗೆ ಪಾತ್ರರಾದರು. ಬೆಳಿಗ್ಗೆ 7 ಗಂಟೆಗೆ ನಗರೇಶ್ವರದ ಬಾವಿಯಲ್ಲಿ ಗಂಗಸ್ಥಳಕ್ಕೆ ಹೋಗಿ ಪೂಜೆ ಮಾಡಿಕೊಂಡು, ಗಂಗೆಯನ್ನು ಹೊತ್ತು ತರಲಾಯಿತು ನಂತರ ದೇವರಿಗೆ ರುದ್ರಾಭಿಷೇಕ ಅನಂತರ ಪಲ್ಲಕಿಯಲ್ಲಿ ವೀರಭದ್ರೇಶ್ವರನ ಮೆರವಣಿಗೆ ಪುರವಂತರ ವೀರಗಾಸೆ ವೀರಭದ್ರನ ಜನನ ಮತ್ತು ದಕ್ಷಬ್ರಹ್ಮನನ್ನು ಸಂಹಾರ ಮಾಡಿದ ಸನ್ನಿವೇಶವನ್ನು ವಡಪುಗಳ ಮೂಲಕ ನೆರೆದ ಭಕ್ತ ಸಮೂಹಕ್ಕೆ ತಮ್ಮದೇ ಆದ ವೀರತೆಯ ಪ್ರತೀಕದಿಂದಯುದ್ಧ ಸನ್ನಿವೇಶಗಳಲ್ಲಿ ವೀರಭದ್ರನ ಆರ್ಭಟವನ್ನು ನಾಟ್ಯಗಳ ಮೂಲಕ ತೋರಿಸಿದರು. ಅನೇಕ ಶಸ್ತ್ರ ಪವಾಡಗಳು ಮನಸೂರೆಗೊಂಡವು. ನೆರೆದಂತ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಊರಿನ ಸದ್ಭಕ್ತರು ಹಾಗೂ ದೇವಸ್ಥಾನ ಸಮಿತಿಯ ಸರ್ವ ಸದಸ್ಯರೆಲ್ಲರೂ ಭಾಗವಹಿಸಿದ್ದರು.





**ವರದಿ: ಜಗದೀಶ್ ಕುಮಾರ್ ಭೂಮಾ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 21
ದಿನಾಂಕ: 16–09–2025 ಪುಟಗಳು:16

# ಮಾಜಿ ಡಿ.ಸಿ.ಎಂ ಲಕ್ಷ್ಮಣ ಸವದಿ ಅವರಿಂದ ಅಥಣಿಯಲ್ಲಿ ನೂತನ ಪ್ರೌಢಶಾಲೆ ಉದ್ಘಾಟನೆ

**ಬೆಳಗಾವಿ:** ಅಥಣಿ ಪಟ್ಟಣದ ವಿಕ್ರಮಪುರ ನಗರದಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನೂತನವಾಗಿ ಸರಕಾರಿ ಪ್ರೌಢಶಾಲೆ ಉದ್ಘಾಟನೆಯನ್ನು ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಅಥಣಿಯ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಲಕ್ಷ್ಮಣ ಸವದಿಯವರು ಶಾರದಾಂಬೆ ಭಾವಚಿತ್ರಕ್ಕೆ ಪೂಜೆ ಮಾಡುವುದರ ಮುಖಾಂತರ ಉದ್ಘಾಟಿಸಿದರು.


ಇದೇ ವೇಳೆ ಮಾತನಾಡಿದ ಶಾಸಕರು ನಾವು ಅಥಣಿ ಪಟ್ಟಣದಲ್ಲಿ ಎರಡು ಸರಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸಿದ್ದೇವೆ, ಒಟ್ಟು ರಾಜ್ಯದಲ್ಲಿ 140 ಶಾಲೆಗಳನ್ನು ಮಂಜೂರಾತಿ ಮಾಡಿದ್ದಾರೆ. ಅದರಲ್ಲಿ 9 ಪ್ರೌಢಶಾಲೆ ಅಥಣಿ ಕ್ಷೇತ್ರಕ್ಕೆ ಮಂಜೂರಾಗಿವೆ, ಎರಡು ಅಥಣಿ ನಗರದಲ್ಲಿದ್ದು ಉಳಿದಿದ್ದು ಗ್ರಾಮೀಣ ಪ್ರದೇಶದಲ್ಲಿ ಇವೆ, ನಾವು ಅದಕ್ಕಾಗಿ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದೇವೆ. ನಾವು ಉತ್ತಮವಾದ ಹಾಗೂ ಗುಣಮಟ್ಟದ ಶಿಕ್ಷಣವನ್ನು ಕೊಡುವಂತಹ ಕೆಲಸ ಮಾಡುತ್ತಿದ್ದೇವೆ, ಮುಂದಿನ 20 ವರ್ಷದಲ್ಲಿ ನಮ್ಮ ಎಲ್ಲಾ ಜನ ಶಿಕ್ಷಣ ಕಲ್ತಿರಬೇಕು ಶಿಕ್ಷಣದಿಂದ ಯಾರೂ ವಂಚಿತರಾಗಬಾರದು ಅದಕ್ಕೆ ನಾವು ಅಥಣಿ ತಾಲೂಕಿನಲ್ಲಿ 11 ಗ್ರಾಮಗಳಲ್ಲಿ ಒಂದನೆಯ ತರಗತಿಯಿಂದ ಆಂಗ್ಲ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸುತ್ತಿದ್ದೇವೆ ಮತ್ತು ನಮ್ಮ ಭಾಗದಲ್ಲಿ ಒಂದು ಕೇಂದ್ರೀಯ ವಿದ್ಯಾಲಯದ ಸಲುವಾಗಿ 10 ಎಕರೆ ಜಮೀನು ಮೀಸಲು ಇಟ್ಟಿದ್ದೇವೆ, ಶಿಫಾರಸಿಗಾಗಿ ಕೇಂದ್ರದಲ್ಲಿದೆ ಕೆಲವೇ ದಿನಗಳಲ್ಲಿ ಮಂಜೂರಾತಿ ಸಿಗುತ್ತದೆ ಎಂದು ಶಾಸಕರು ತಿಳಿಸಿದರು. ಈ ಸಂದರ್ಭದಲ್ಲಿ ಅಥಣಿ ಪುರಸಭೆ ಅಧ್ಯಕ್ಷರಾದ ಶ್ರೀಮತಿ ಶಿವಲೀಲಾ ಬುಟಾಳಿ , ಅಥಣಿ ಪುರಸಭೆಯ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ದತ್ತಾ ವಾಸ್ಟರ, ಅಥಣಿ ಜನಪ್ರಿಯ ಪುರಸಭೆಯ ಸದಸ್ಯರಾದ ಕಲ್ಲೇಶ್ ಮಡ್ಡಿ, ಮಾಧ್ಯಮದ ವರದಿಗಾರರಾದ ಅಜಿತ್ ಕಾಂಬಳೆ, ಎಸ್ ಡಿ ಎಂ ಸಿ ಅಧ್ಯಕ್ಷರಾದ ಶ್ರೀ ರಾಕೇಶ ಮೈಗೂರ ಪುರಸಭೆಯ ಉಪಾಧ್ಯಕ್ಷರಾದ ಶ್ರೀಮತಿ ಭುವನೇಶ್ವರಿ ಯಂಕಚ್ಚಿ , ಪುರಸಭೆ ಸದಸ್ಯರಾದ ರಿಯಾಜ್ ಸನದಿ , ಶ್ರೀ ರಾಜಶೇಖರ್ ಗುಡೋಡಗಿ, ಹಿರಿಯ ಮುಖಂಡರಾದ ಶ್ರೀ ರವಿ ಬಡಕಂಬಿ, ಶ್ರೀ ಶೇಖರ ನೇಮಗೌಡ, ಶ್ರೀ ಮಹಾಂತೇಶ ಠಕ್ಕಣ್ಣವರ, ಶ್ರೀ ಆಸಿಫ್ ತಾಂಬೊಳಿ, ವಿಲೀನ ಯಳಮಲ್ಲೇ, ರಾಮನಗೌಡ ಪಾಟೀಲ್ , ಯುವ ಮುಖಂಡರಾದ ಮಂಜು ಹೋಳಿಕಟ್ಟಿ, ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಶಿವಾನಂದ ಕಲ್ಲಾಪುರ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ ಆರ್ ಮುಂಜೆ ಹಾಗೂ ಶಿಕ್ಷಕ ಶಿಕ್ಷಕಿಯರು ವಿಧ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



**ವರದಿಗಾರ ವಿಠ್ಠಲ ಖೋಕಾಟೆ**

# ಒಳ್ಳೆಯ ಕೆಲಸ ಪ್ರಾರಂಭಿಸುವ ಮೊದಲು ವಿಘ್ನ ನಿವಾರಕ ಗಣಪತಿ ಪೂಜೆ ಮುಖ್ಯ : ಶಾಸಕ ಜೆ. ಎನ್. ಗಣೇಶ

**ಬಳ್ಳಾರಿ / ಕಂಪ್ಲಿ:** ಪಟ್ಟಣದ ಅನೇಕ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶನ ಮಂಡಳಿ, ಸಮಿತಿಯವರು ಹಾಗೂ ಯುವಕರು ಪ್ರತಿಷ್ಠಾಪಿಸಿದ್ದ ವಿವಿಧ ರೂಪಗಳ ಗಣಪತಿ ಮೂರ್ತಿಗಳ ಸ್ಥಳಗಳಿಗೆ ಶಾಸಕ ಜೆ. ಎನ್. ಗಣೇಶ ಭೇಟಿ ನೀಡಿ, ಗಣಪನ ದರ್ಶನದೊಂದಿಗೆ ಆಶೀರ್ವಾದ ಪಡೆದರು.



ಇಲ್ಲಿನ ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ಲಯನ್ಸ್ ಗ್ರೂಪ್ ಯುವಕ ಸಂಘದಿಂದ ಪ್ರತಿಷ್ಠಾಪಿಸಿದ ಚಾಮುಂಡಿದೇವಿಯ ಗಣೇಶ ಮೂರ್ತಿ ಸ್ಥಳಕ್ಕೆ, ವರಲಕ್ಷ್ಮಿ ಬ್ಯಾಂಕ್ ಮುಂಭಾಗ, 5ನೇ ವಾರ್ಡಿನ ಇಂದಿರಾ ನಗರದ ಗಣಪನ ಸ್ಥಳಗಳಿಗೆ ಶಾಸಕ ಗಣೇಶ ಅವರು ಭೇಟಿ ನೀಡಿ, ವಿವಿಧ ಆಕರ್ಷಣೆಯ ಗಣಪತಿಗಳನ್ನು ವೀಕ್ಷಿಸಿದರು. ತದ ನಂತರ ಪಟ್ಟಣದ ಸೋಮೇಶ್ವರ ದೇವಸ್ಥಾನದ ಹತ್ತಿರ ವೀರ ಕಂಪಿಲರಾಯ ವಿನಾಯಕ ಮಂಡಳಿಯವರ ಪ್ರತಿಷ್ಠಾಪನೆಯ ಕಂಪ್ಲಿ ಕಾ ಮಹಾರಾಜ್ ಗಣಪತಿ ವಿಸರ್ಜನಾ ಮೆರವಣಿಗೆಯಲ್ಲಿ ಭಾಗವಹಿಸಿದರು.

ಭೇಟಿಯ ನಂತರ ಶಾಸಕ ಗಣೇಶ ಮಾತನಾಡಿ, ಯಾವುದೇ ಒಳ್ಳೆಯ ಕೆಲಸ ಪ್ರಾರಂಭಿಸುವ ಮೊದಲು ವಿಘ್ನ ನಿವಾರಕ ಗಣೇಶನನ್ನು ಪೂಜಿಸುವುದು ಪದ್ಧತಿ ಇಂತಹ ಪವಿತ್ರ ಪೂಜಾ ಸ್ಥಾನ ಪಡೆದುಕೊಂಡಿರುವ ಗಣಪತಿಯನ್ನು ಪ್ರತಿಷ್ಠಾಪಿಸಿ ದೇಶದ ಆಚಾರ–ವಿಚಾರ, ಸಂಸ್ಕೃತಿ ಮುಂದುವರಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಕಂಪ್ಲಿ ಸೇರಿದಂತೆ ಕ್ಷೇತ್ರಾದ್ಯಂತ ಜನರು ಮೆಚ್ಚುವಂತಹ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸುತ್ತಾ ಪ್ರತಿ ವರ್ಷದಂತೆ ಈ ವರ್ಷವು ಕೂಡಾ ಆಚರಣೆ ಮಾಡಿದ್ದಾರೆ. ಜನತೆಗೆ ಆರೋಗ್ಯ, ಆಯಸ್ಸು, ಐಶ್ವರ್ಯ, ಶಾಂತಿ, ನೆಮ್ಮದಿ ನೀಡಿ ದೇವರು ಕಾಪಾಡಲಿ. ಉತ್ತಮ ಮಳೆ, ಬೆಳೆ ಆಗಿ ರೈತರಲ್ಲಿ ಸಂತೋಷ ಉಂಟು ಮಾಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಭಟ್ಟ ಪ್ರಸಾದ್, ಸದಸ್ಯ ಸಿ. ಆರ್. ಹನುಮಂತ, ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಕೆ. ಶ್ರೀನಿವಾಸರಾವ್, ಕಂಪ್ಲಿ ಕ್ಷೇತ್ರ ಯೂತ್ ಕಾಂಗ್ರೆಸ್ ಅಧ್ಯಕ್ಷ ರಿಯಾಜ್ ಅಹಮ್ಮದ್, ಮುಖಂಡರಾದ ಬಿ. ಸಿದ್ದಪ್ಪ, ಕೆ.ಷಣ್ಮುಕಪ್ಪ, ರವಿಕಿರಣ್ ಡೆಕೊರೇಷನ್ ನ ನಾಗರಾಜ, ಗೋಪಾಲ, ಆಟೋ ರಘು, ಎನ್. ಕೆ. ಗಿರೀಶ್, ಎಲ್. ರಾಜೇಶ, ಎಸ್. ರುದ್ರಮುನಿ, ಯು. ಖಾಜಾ ಹುಸೇನ, ಶಶಿಕುಮಾರ, ವಾಸು, ಜಗದೀಶ, ಬಳ್ಳಾರಿ ಪ್ರಶಾಂತ, ಎನ್. ಮೋಹನ್ ಡೆಕೊರೇಷನ್, ಮಹೇಶ ಸೇರಿದಂತೆ ಅನೇಕರಿದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

## ಕರುನಾಡ ಕಂದ ಪತ್ರಿಕೆಯ ವಾರ್ಷಿಕ ಚಂದಾ ವಿವರ

ವಾರ್ಷಿಕ ಚಂದಾ =500/– ರೂಪಾಯಿಗಳು ಮಾತ್ರ (ಅಂಚೆ ವೆಚ್ಚ ಸೇರಿ)

ಫೋನ್ ಪೇ,ಗೂಗಲ್ ಪೇ ಅಥವಾ ಕ್ಯೂ ಆರ್ ಕೋಡ್ ಮೂಲಕ ಹಣ ಪಾವತಿಸಿ ನಿಮ್ಮ ಸಂಪೂರ್ಣ ವಿಳಾಸವನ್ನು ವಾಟ್ಸ್ ಆಪ್ ಮಾಡಿ.

KARUNADA KANDA

–ಬಸವರಾಜ ಬಳಿಗಾರ,
ಸಂಪಾದಕರು (9742776385)

"ಕರುನಾಡ ಕಂದ ಪತ್ರಿಕೆ"
ನ್ಯೂಸ್ ಪೋರ್ಟಲ್ ಹಾಗೂ ಯೂಟ್ಯೂಬ್ ಚಾನೆಲ್ ಗೆ ಪಾರ್ಟ್/ಫುಲ್ ಟೈಮ್ ನಲ್ಲಿ ಕಾರ್ಯ ನಿರ್ವಹಿಸಲು ರಾಜ್ಯಾದ್ಯಂತ ಎಲ್ಲಾ ಜಿಲ್ಲೆ, ತಾಲೂಕು ಮಟ್ಟದಲ್ಲಿ ಸ್ಥಳೀಯ ವರದಿಗಾರರು ಬೇಕಾಗಿದ್ದಾರೆ.

18 ವರ್ಷದಿಂದ 45 ವರ್ಷದವರೆಗಿನ ಆಸಕ್ತರು ಸಂಪರ್ಕಿಸಬಹುದು.

TARGET ಇರುವುದಿಲ್ಲ

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹೆಸರು, ತಾಲ್ಲೂಕು ವಾಟ್ಸ್ ಆಪ್ ಮಾಡಿ ಅಥವಾ ಕರೆ ಮಾಡಿ:




ಬಸವರಾಜ ಬಳಿಗಾರ, ಸಂಪಾದಕರು
Call & WhatsApp: 9986366909
www.karunadakanda.com

KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR